
ಮುಖಿತ:



ನಿರಂಜನ

ಸ್ಪಂದನ ಪ್ರಕಾಶನ

ಮುಖತಃ

ನಿರಂಜನ

ವಿವಿಧ ಸಂದರ್ಶಕರೊಂದಿಗೆ

ಸಂಕಲನ :
ಸೀಮಂತಿನೀ ನಿರಂಜನ

ಸ್ಪಂದನ ಪ್ರಕಾಶನ
ಬೆಂಗಳೂರು

ಈ ಪುಸ್ತಕವನ್ನು ಕುರಿತು

ಸ್ಪಂದನದ ಮೊದಲ ಪ್ರಕಟಣೆ ‘ಬುದ್ಧಿ ಭಾವ ಬದುಕು’ : ೧೯೪೩–೧೯೮೫ ರ ಅವಧಿಯಲ್ಲಿ ನಿರಂಜನರು ಬರೆದ ಸೃಜನೇತರ ಲೇಖನಗಳಿಂದ ಮತ್ತು ಮಾಡಿದ ಉಪನ್ಯಾಸಗಳಿಂದ ಆಯ್ದು ಸಿದ್ಧಪಡಿಸಿದ ಸಂಕಲನ. ಎರಡನೆಯದು ‘ಮದಪ್ಪಂದಿ ನೆಂಪು’ : ನಿರಂಜನರ ‘ಚಿರಸ್ಮರಣೆ’ ಕಾದಂಬರಿಯ ತುಳು ಭಾಷಾಂತರ (ಅನು : ಕೆದಂಬಾಡಿ ಜತ್ತಪ್ಪ ರೈ). ಈಗ ನೀವು ಕೈಗೆತ್ತಿಕೊಂಡಿರುವುದು ಮೂರನೆಯದು : ‘ಮುಖತಃ’. ಇದು ೧೯೭೬–೧೯೮೫ ರ ಅವಧಿಯಲ್ಲಿ ನಿರಂಜನರು ನೀಡಿದ ಸಂದರ್ಶನಗಳಿಂದ, ಭಾಗಿಯಾದ ಪ್ರಶ್ನೋತ್ತರಗಳಿಂದ ಆರಿಸಿ ಅಣಿಗೊಳಿಸಿದ್ದು. ಈ ಪುಸ್ತಕ ನಿರಂಜನರ ಸಾಹಿತ್ಯ ಕೃಷಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾದೀತೆಂದು ನಂಬಿದ್ದೇನೆ.

ಅಂತ್ಯದಲ್ಲಿ ಒಂದು ಬಗೆಯ ‘ಸ್ವ–ಸಂದರ್ಶನ’ವೂ ಇದೆ. ಇದು ಕುಳುಕುಂದ ಶಿವರಾಯ–ನಿರಂಜನ ಸಂವಾದ. ಯಾವುದೇ ಸಂದರ್ಶನ ಲೇಖನದ ಒಡೆತನ ಯಾರದು ? ಎಂಬ ಪ್ರಶ್ನೆಯ ಚರ್ಚೆಯೂ ಆ ಸಂವಾದದಲ್ಲಿದೆ. ನಿರಂಜನರು ಅಲ್ಲಿ ತಳೆದಿರುವ ನಿಲುವನ್ನು ನಾನು ಮನಸಾರೆ ಅನುಮೋದಿಸುತ್ತೇನೆ.

ಮುಂದಿನ **ಸ್ಪಂದನ** ಪ್ರಕಟಣೆ ‘ಧ್ವನಿ’ : ನಿರಂಜನರ ಸಮಗ್ರ ಕಥಾ ಸಂಪುಟ (೧೯೩೭–೧೯೮೫). ಸುಮಾರು ೧೫೦ ಕತೆಗಳಿರುವ ಈ ಹೊತ್ತಗೆಯನ್ನು ಹೊರತರುವುದು ಕಾಗದ ಹಾಗೂ ಮುದ್ರಣ ವೆಚ್ಚ ದುಬಾರಿಯಾಗಿರುವ ಈ ಕಾಲದಲ್ಲಿ ಬಹಳ ಕಷ್ಟದ ಕೆಲಸ. ಕೈಗೊಂಡಿರುವ ಕಾರ್ಯವನ್ನು ಮಾಡಿ ಮುಗಿಸಬೇಕೆನ್ನುವ ಛಲ ಹಾಗೂ ಓದುಗರ ಸಹಾನುಭೂತಿ – ಇಷ್ಟೇ **ಸ್ಪಂದನ**ದ ಬಂಡವಾಳ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಇಳಾ ಪ್ರಿಂಟರ್ಸ್‌ನ ಶ್ರೀಮತಿ ವಿಜಯಾ ಮತ್ತು ಗುರುಮೂರ್ತಿ – ಭಾರತಿ ದಂಪತಿ, ಕಾರ್ಮಿಕ ಬಂಧುಗಳು–ಇವರಿಗೆಲ್ಲ ಸ್ಪಂದನದ ಪರವಾಗಿ ನಾನು ಕೃತಜ್ಞೆ. ಅರುವತ್ತರ ಹರೆಯದ ನಿರಂಜನರ ಫೋಟೊ ಮುಂಬಯಿಯ ಶ್ರೀ ಟಿ. ಕೆ. ಕುಂದರ್ ಅವರು ಬೆಂಗಳೂರಿಗೆ ಬಂದಾಗ ತೆಗೆದುದು. ರಕ್ಷಾಕವಚದ ವಿನ್ಯಾಸ ಕಲಾವಿದ ರಾಜೇಂದ್ರರದು. ಅದರ ಮುದ್ರಣದ ಕೀರ್ತಿ ಸಲ್ಲುವುದು ಉಡುಪಿಯ ನವಯುಗ ಪ್ರೆಸ್ಸಿಗೆ. ಈ ಮಿತ್ರರಿಗೆಲ್ಲ ನಾನು ಆಭಾರಿಯಾಗಿದ್ದೇನೆ.

೨೨ ಮಾರ್ಚ್ ೧೯೮೫
ಬೆಂಗಳೂರು

ಸೀಮಂತಿನೀ ನಿರಂಜನ
ಸ್ಪಂದನ ಪ್ರಕಾಶನದ ಪರವಾಗಿ

ಹೂರಣ

ಒಕ್ಕೂಟ, ಪ್ರಗತಿಪಂಥ ಇತ್ಯಾದಿ ನಿರಂಜನರ ವಿಚಾರಗಳು

–ಡಿ. ಆರ್. ನಾಗರಾಜ

ಯಾವ ಪ್ರಶ್ನೆಯಿಂದ ಮಾತುಕತೆ ಶುರು ಮಾಡುವುದು ?

ಭಾನುವಾರ ಸಂಜೆ 'ಆಂದೋಲನ' ಪತ್ರಿಕೆಯ ಪರವಾಗಿ ಶ್ರೀ ನಿರಂಜನರ ಮನೆಗೆ ಹೋದ ನನಗೆ ಇದು ಮುಖ್ಯ ಸಮಸ್ಯೆಯಾಗಿತ್ತು. ನಿರಂಜನರು 'ಪ್ರಗತಿಪಂಥ' ಪುಸ್ತಕದ ಪ್ರೂಫ್ ನೋಡುತ್ತಿದ್ದುದರಿಂದ ಯೋಚನೆ ಮಾಡಲು ಕೊಂಚ ಬಿಡುವು ಸಿಕ್ಕಿತು. ಮಧ್ಯೆ ಅದೂ ಇದೂ ಮಾತನಾಡಿದ್ದಾಯಿತು. ಅವರು ಪ್ರೂಫ್ ನೋಡುವುದನ್ನು ಮುಗಿಸುವ ಹೊತ್ತಿಗೆ ಒಂದು ಖಚಿತ ನಿಲುವಿಗೆ ಬಂದಿದ್ದೆ. ಕೊಂಕಣ ಸುತ್ತಿ ಮೈಲಾರಕ್ಕೆ ಹೋಗುವ ಬದಲು ನೇರ ಮೈಲಾರಕ್ಕೇ ಹೋಗುವುದು ಒಳ್ಳೆಯದು ಎಂದುಕೊಂಡು ಕೇಳಿದ ಮೊದಲ ಪ್ರಶ್ನೆ :

"ಈಗಿನ ಪ್ರಗತಿಪಂಥ ಮೂವತ್ತು ವರ್ಷಗಳ ಹಿಂದಿನ ಪ್ರಗತಿಶೀಲ ಚಳವಳಿಯ ಪುನರಾವರ್ತನೆ ಮಾತ್ರವೆ ?"

"ಪುನರಾವರ್ತನೆ ಅಲ್ಲ. ಒಂದು ದೃಷ್ಟಿಯಿಂದ ಪುನರುತ್ಥಾನ ಎಂದೇ ಹೇಳಬೇಕು. ಆ ಚಳವಳಿಯ ಚೈತನ್ಯ ಉಳಿದಿದೆ, ಜೀವಂತವಾಗಿದೆ ಎಂಬುದಕ್ಕೆ ಪ್ರಗತಿಪಂಥ ಉದಯವಾದುದೇ ಸಾಕ್ಷಿ. ಇದು ಪ್ರಗತಿಶೀಲ ಚಳವಳಿ ಮಾತ್ರ ಅಲ್ಲ; ಇದು ಇನ್ನೂ ವಿಶಾಲ ವೇದಿಕೆ. ಬರೆಹಗಾರರು, ಕಲಾವಿದರು,

ಜಾನಪದರು ಹೇಗೆ ಎಲ್ಲ ರಂಗಗಳ ಸೃಜನಶೀಲರನ್ನು ಒಳಗೊಂಡಿದೆ. ಸಂವಹನ ಮಾಧ್ಯಮವನ್ನು ಯಾರ್‍ಯಾರು ಬಳಸುತ್ತಾರೋ ಅವರೆಲ್ಲರಲ್ಲಿ ಪ್ರಗತಿಪರ ವಿಚಾರವನ್ನು ಮೂಡಿಸುವ ಪ್ರಯತ್ನ." ಸೌಜನ್ಯಪೂರಿತ ಅವರೂ ಖಚಿತ ಆತ್ಮವಿಶ್ವಾಸದ ಮಾತುಗಳು.

ನನಗೆ ಸಮಾಧಾನವಾಗಲಿಲ್ಲ. ದಾವಣಗೆರೆಯ ಪ್ರಗತಿಪಂಥ ಸಮ್ಮೇಳನದಲ್ಲಿ ಭಾಗವಹಿಸಿದ್ದ ನನಗೆ ಅಲ್ಲಿ ಅನಿಸಿದ್ದ ಒಂದು ವಿಚಾರವನ್ನು ಕೇಳಬೇಕೆನಿಸಿತು. 'ವಿಮೋಚನೆ', 'ಚಿರಸ್ಮರಣೆ'ಯ ನಂತರ ನಿರಂಜನರು ಯಾವ ಮಹತ್ವದ ಕೃತಿಯನ್ನೂ ಬರೆದಿಲ್ಲ. ಈ ದೃಷ್ಟಿಯಿಂದ ಅವರ ಇತ್ತೀಚಿನ 'ಮೃತ್ಯುಂಜಯ'ದಲ್ಲಿ ಹೊಸ ಜೀವಂತಿಕೆಯ ಸೂಚನೆಗಳಿವೆ ಯಾದರೂ, ಅದನ್ನು ಕಾದು ನೋಡಬೇಕು. ಕಮ್ಯುನಿಸ್ಟರ ಸಿಟ್ಟು, ಆಕ್ರೋಶ, ಕಲಾವಂತಿಕೆ ಎಲ್ಲಾ ಮುಗಿದು ಹೋಗಿರಬಹುದೆ? ಜೊತೆಗೆ ನವ್ಯರು ಅಬ್ಬರ, ಆರ್ಭಟಗಳೊಂದಿಗೆ ರಂಗಕ್ಕೆ ಬಂದ ನಂತರ ಇವರು ಮರೆಗೆ ಸರಿದರು. ಸೃಜನಶೀಲ ಸಾಮರ್ಥ್ಯ ಇಳಿಮುಖವಾಗಿರುವಾಗ ಬಹಿರಂಗ ಸಂಘಟನೆಯೊಂದರ ಮೂಲಕ ಮತ್ತೆ ಪುನರ್ ಪ್ರತಿಷ್ಠಾಪಿಸಲು ಪ್ರಯತ್ನ ನಡೆಸಿರಬಹುದಲ್ಲವೆ? ಸಾಕಷ್ಟು ಮೊನಚಾಗಿಯೇ ಈ ಮಾತನ್ನು ಹೇಳಿದೆ. "ಇದು ತುಂಟ ಪ್ರಶ್ನೆ" ಎಂದು ಮುಂದುವರಿಸಿದರು:

"ಈ ಆರೋಪ ಸರಿಯಲ್ಲ. ಪ್ರಗತಿಪಂಥ ನಿರಂಜನನ ಪುನರುತ್ಥಾನದ ಪ್ರಯತ್ನ ಅಲ್ಲ. ನನ್ನ ಪುನರ್ ನೆಲೆಸುವಿಕೆಗೋಸ್ಕರ ನಾನಿದನ್ನು ಶುರು ಮಾಡ್ತಾ ಇಲ್ಲ. ನನಗೆ ಪಾರ್ಶ್ವವಾಯು ಬಡಿದಾಗಲೇ ನನ್ನ ಜೀವನಕ್ಕೆ ಹೊಸ ತಿರುವು ಬಂತು. It was a great experience. ಸಾವಿನ ಮಡಿಲಿಗೆ ಹೋಗಿ ವಾಪಸು ಬಂದೆ. ಅನಂತರವೂ ದುಡಿದೆ. 'ಜ್ಞಾನ ಗಂಗೋತ್ರಿ'ಯ ಅಪಾರ ಅನುಭವ ನನ್ನನ್ನು ಪೂರ್ಣ ಬದಲಾಯಿಸಿತು.

'ಮೃತ್ಯುಂಜಯ' ಕಾದಂಬರಿ ಈ ದೃಷ್ಟಿಯಿಂದ ಸಂಪೂರ್ಣ ಹೊಸದು. ಹಿಂದಿಗಿಂತ ಭಿನ್ನವಾಗಿ ಬರೀಬೇಕು ಎಂದು ನಿರ್ಧಾರ ಮಾಡಿದ್ದೆ. ಹಾಗೆ ಬರೆದಿದ್ದೇನೆ. ಜೊತೆಗೆ ಪ್ರಗತಿಪಂಥ ಚಳವಳಿಯ ವಿಚಾರ ಕೂಡಾ ಒಂದೂವರೆ ವರ್ಷದಷ್ಟು ಹಳೆಯದು. ಉಡುಪಿಯ ನವ ಮಠದಲ್ಲಿ (ನವ್ಯ ಸಾಹಿತ್ಯವನ್ನು ನಿರಂಜನರು ಕರೆಯುವುದು ಹೀಗೆ) ಬಿರುಕು ಶುರುವಾದಾಗಿನಿಂದ ಹಿಡಿದು ಈ

ನಾಲ್ಕೈದು ವರ್ಷಗಳ ಕಾಲ ಪ್ರಗತಿಪಂಥ ಚಳವಳಿಗೆ ನೆಲವನ್ನು ಸಿದ್ಧ ಮಾಡಿತ್ತು. ಮತ್ತೆ ಹೇಳುತ್ತೇನೆ, ಪ್ರಗತಿಪಂಥ ನನ್ನ ಪುನರ್ ನಿಲಿಸುವಿಕೆಯ ಪ್ರಶ್ನೆ ಇಲ್ಲ. ಯಾಕೆಂದರೆ ನಾನು ಬರೆಹಗಾರನಾಗಿ ಕೂಡ ಹೊಸ ದಿಕ್ಕಿನಲ್ಲಿದ್ದೇನೆ. ಮುಂದೆ ಪ್ರಾಗ್ಭಾರತದ ಕಥೆಯನ್ನು ವಸ್ತುವಾಗುಳ್ಳ ಮೂರು ಸಂಪುಟಗಳ ಕಾದಂಬರಿಯನ್ನು ಬರೆಯುವ ಯೋಜನೆ ಇದೆ. ಇದಕ್ಕೆ 'ಮೃತ್ಯುಂಜಯ' ಒಂದು ಸಿದ್ಧತೆ ಅಷ್ಟೆ.'

ಹೀಗೆ ಭಾರತೀಯ ಚರಿತ್ರೆಯ ಬಗ್ಗೆ ಅನೇಕ ಸಂಗತಿಗಳನ್ನು ಹೇಳಿದರು. ಮಧ್ಯೆ ಎಸ್. ಆರ್. ರಾವ್ ಮುಂತಾದವರ ಹೆಸರುಗಳು ಬಂದು ಹೋದವು. ಆ ವಿಷಯದ ಬಗ್ಗೆ ಅಷ್ಟೇನೂ ಆಗ ನನಗೆ ಆಸಕ್ತಿ ಇಲ್ಲದಿದ್ದರೂ, ಅವರ ಉತ್ಕಟತೆಗೆ ಅಡ್ಡಿ ಮಾಡುವ ಮನಸ್ಸಿಲ್ಲದೇ ಸುಮ್ಮನಾದೆ. ಕೇಳುತ್ತಾ ಕೂತೆ. ಹೀಗೆ ಮಾತನಾಡುತ್ತಾ ಆ ಕಾದಂಬರಿಗಳ ಧೋರಣೆಯನ್ನು ಮಾರ್ಕ್ಸ್‌ವಾದಿ ಎಂದು ಬೇಕಾದರೆ ನೀವು ಹೇಳಬಹುದು ಎಂದರು. ತಕ್ಷಣ ಹಿಂದೆ ನಿರಂಜನರೇ ಬರೆದಿದ್ದ ಕಮ್ಯೂನಿಸ್ಟ್ ವಿರೋಧಿ ಎನ್ನಿಸುವಂಥ ಎರಡು ಬರಹಗಳು ನೆನಪಿಗೆ ಬಂದವು. ರಷ್ಯದ ಯೆವ್ತುಷೆಂಕೊ ಕವಿ, ಚೀನಾದ ಸಾಂಸ್ಕೃತಿಕ ಕ್ರಾಂತಿ ಈ ಎರಡರ ಬಗ್ಗೆ ಅವರು ಮಾಡಿದ ಟೀಕೆಗಳು ಇವತ್ತಿಗೂ 'ಅಂಕಣ' ಪುಸ್ತಕದಲ್ಲಿ ದಾಖಲಾಗಿದೆ.

"ನಿಮ್ಮ ಕಮ್ಯೂನಿಸ್ಟ್ ವಿರೋಧಿ ನಿಲುವು ಈಗ ಬದಲಾಗಿದೆಯೆ?" ಎಂದೆ; ನಂತರ ಮೇಲಿನ ಸಾಕ್ಷಿಗಳನ್ನು ಸಹ ನೀಡಿದೆ.

"ಕಮ್ಯೂನಿಸ್ಟ್ ವಿರೋಧಿ ನಾನು ಯಾವಾಗಲೂ ಆಗಿರಲಿಲ್ಲ. ನಾನು ಮೊದಲು ಕಮ್ಯೂನಿಸ್ಟನೇ ಆಗಿದ್ದೆ. ಅನಂತರ ಪಕ್ಷಕ್ಕೆ ರಾಜೀನಾಮೆ ನೀಡಿದ್ದು ಎಲ್ಲರಿಗೂ ಗೊತ್ತಿದೆ. ನಾನು ನನ್ನ ಬರೆಹಗಳಲ್ಲಿ ವಿರೋಧಿಸಿದ್ದು ಕೆಲವು ನಿರ್ದಿಷ್ಟ ಧೋರಣೆಗಳನ್ನು ಮಾತ್ರ. ಜೆಕೊಸ್ಲೊವಾಕಿಯದಲ್ಲಿ ಈ ಹೊತ್ತು ಕಾದಂಬರಿಗಳನ್ನು ಪ್ರಕಟಿಸುತ್ತಾ ಇಲ್ಲ. ವಿಶ್ವ ಸಾಹಿತ್ಯ ರಂಗಕ್ಕೆ (ಹೊಸ) ಚೀನಾ ಯಾವ ಮಹತ್ವದ ಕೊಡುಗೆಯನ್ನೂ ನೀಡಿಲ್ಲ. ಕಮ್ಯೂನಿಸಂನ ಜೊತೆಗೆ ನನ್ನ ಅನುಭವವನ್ನು ಹಿಂದೆಯೇ ಹೇಳಿದ್ದೇನೆ, 'ಮಾನವೀಯತೆಯ ತೊಗಟೆಯನ್ನು ಮಾತ್ರ ಕಂಡೆ, ತಿರುಳನ್ನಲ್ಲ' ಎಂದು. ಸೃಜನಶೀಲ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಾಗೆ ಇವತ್ತಿಗೂ ಅವತ್ತಿಗೂ ನನ್ನ ನಿಲುವು ಒಂದೇ."

ಸೃಜನಶೀಲ ಸ್ವಾತಂತ್ರ್ಯದ ಬಗ್ಗೆ ನಿರಂಜನರ ವಿಚಾರಗಳಿಗೆ ನನ್ನ ವಿರೋಧ ಇದೆ. ಸಮತಾವಾದಿ ರಾಷ್ಟ್ರಗಳಲ್ಲಿ ಸೃಜನಶೀಲ ಸ್ವಾತಂತ್ರ್ಯ ಇಲ್ಲ ಎನ್ನುವ ಆರೋಪ ಸಾಮಾನ್ಯ. ಹೀಗೆ ಹೇಳುವಾಗ ಬಹಳ ಮಂದಿ ತಾವು ಬದುಕುತ್ತಿರುವ ಸಮಾಜದಲ್ಲಿ ಆ ಸ್ವಾತಂತ್ರ್ಯ ಇದೆ ಎಂದು ಭಾವಿಸುತ್ತಾರೆ. ವಾಸ್ತವವಾಗಿ ಜಾತಿ–ವರ್ಗಗಳಿರುವ ಸಮಾಜದಲ್ಲಿ ಸೃಜನಶೀಲ ಪ್ರಜ್ಞೆಗೆ ಸ್ವಾತಂತ್ರ್ಯ ಕೇವಲ ಕನಸು.

ಈ ದೃಷ್ಟಿಯಿಂದ ಅವರ ಮಾತಿಗೆ ಅಸಮ್ಮತಿ ಸೂಚಿಸಿದೆ; ಮಾತು ಮುಂದುವರೆಸಿದರು:

"ಅಂದ ಮಾತ್ರಕ್ಕೆ ನಾನು ಕಮ್ಯೂನಿಸ್ಟ್ ವಿರೋಧಿ ಅಲ್ಲ. ಜಗತ್ತನ್ನು ಅರ್ಥಮಾಡಿಕೊಳ್ಳಲು ಮಾರ್ಕ್ಸ್‌ವಾದದ ಕೊಡುಗೆ ಅಪಾರವಾದದ್ದು. ಆದರೆ Thus for no further ಎನ್ನುವ ಧೋರಣೆಯನ್ನು ನಾನು ಒಪ್ಪುವುದಿಲ್ಲ. ಇತ್ತೀಚೆಗೆ ತರುಣ ಬರೆಹಗಾರರು ರಾಜಕೀಯದ ಕಡೆಗೆ ವಿಶೇಷ ಗಮನ ಕೊಡುತ್ತಿದ್ದಾರೆ. ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರದಿದ್ದರೂ, ಸೇರುವವರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಆದರೆ ತರುಣ ಬರೆಹಗಾರರು ಇನ್ನೊಂದು ಅಪಾಯದ ಬಗ್ಗೆ ಸದಾ ಎಚ್ಚರದಿಂದಿರಬೇಕು. ರಾಜಕಾರಣದ ಉರಿಯಲ್ಲಿ ನಾಶವಾಗಿ ಹೋಗಿಬಿಡಬಹುದೆಂಬ ಭಯ ನನಗೆ ಇದ್ದೇ ಇದೆ. ಸ್ವತಃ ನಾನೂ ಒಮ್ಮೆ ಅನುಭವಿಸಿದ್ದೆ. ಆದರೆ ಜೀವನದ ಮುಖ್ಯವಾಹಿನಿಯ ಜೊತೆಗೆ ಲೇಖಕ ಸಂಪರ್ಕ ಕಳೆದುಕೊಳ್ಳಬಾರದು; ಅದು ಅವನಿಗೆ ತುಂಬ ಮುಖ್ಯ."

ಆದರೆ ಕ್ರಿಯಾಶೀಲ ಲೇಖಕ ಜ್ವಾಲೆಯಲ್ಲಿ ಉರಿದು ಹೋದರೂ ಬೂದಿಯಲ್ಲಿ ಸಮೃದ್ಧವಾಗಿ ಅರಳಬಲ್ಲ. ಪದ್ಮಪತ್ರ ಜಲ ಬಿಂದು ನ್ಯಾಯ ಲೇಖಕನಿಗೆ ಒಪ್ಪುವುದಿಲ್ಲ ಎಂದು ನನಗೆ ಅನುಮಾನ.

ಸಂದರ್ಶಕ: "ಪ್ರಗತಿ ಪಂಥ ಬರಿ ಸಾಹಿತ್ಯಕ ಸಂಘಟನೆ ಮಾತ್ರವೇ ?"

ನಿರಂಜನ: "ಅಲ್ಲ, ಇದು ಇನ್ನೂ ವಿಶಾಲವಾದ ವೇದಿಕೆ. ಇಲ್ಲಿ ಶಿಲ್ಪಿಗಳು, ಕಲಾವಿದರು, ಎಲ್ಲಾ ಮಾಧ್ಯಮಗಳ ಕಲಾಕಾರರೂ ಇದ್ದಾರೆ."

ಸಂ: "ಹಾಗಾದರೆ ಕನ್ನಡ ಸಾಹಿತ್ಯ ಪರಿಷತ್ತು, ಚಿತ್ರಕಾರರ

ಗಿಲ್ಡ್ ಮುಂತಾದ ಸಂಘಟನೆಗಳಿಗೂ ಇದಕ್ಕೂ ಏನು ವ್ಯತ್ಯಾಸ? 'ಪ್ರಗತಿಪರ' ಎಂದು ಅಮೂರ್ತವಾಗಿ ಹೇಳುವ ಕಾಲ ಈಗಿಲ್ಲ. ಜೊತೆಗೆ ಪ್ರಗತಿಪರ ಸಂಘಟನೆಯೊಂದಕ್ಕೆ ಪೂರ್ಣ ಪ್ರಮಾಣದ ತಾತ್ವಿಕ ನೆಲೆ ಇರಬೇಕು. ವರ್ಣ ವರ್ಗ ನೀತಿಗಳ ಬಗ್ಗೆ ಸ್ಪಷ್ಟವಾದ ಧೋರಣೆ ಇರುವುದು ಅಗತ್ಯ. ಏಕೆಂದರೆ ಯಾವ ಸಂಘಟನೆಯೂ **apolitical** ಆಗಿರಲು ಸಾಧ್ಯವೇ ಇಲ್ಲ. ಜೊತೆಗೆ ಪ್ರಗತಿ ಪಂಥ ಸಿ. ಪಿ. ಐ.ನ ಸಾಹಿತ್ಯಕ ಸಂಘಟನೆ ಮಾತ್ರ ಎನ್ನುವ ಮಾತು ಕೇಳಿ ಬರುತ್ತಿದೆ. ಇದರ ಬಗ್ಗೆ ಏನು ಹೇಳುತ್ತೀರಿ?"

ನಿ: "ಸದ್ಯಕ್ಕೆ ಈ ಸಂಘಟನೆ ತೀರಾ ವಿಶಾಲ ತಳಹದಿಯದು. ಮುಂದೆ ತನ್ನದೇ ಆದ ನಿಲುವುಗಳನ್ನು ಖಚಿತವಾಗಿ ಅದು ತಳೆಯಲು ಸಾಧ್ಯ ಇದೆ. ಇದು ಯಾವುದೇ ಪಕ್ಷದ ಅಂಗ ಎಂಬುದು ನಿಜವಲ್ಲ. ವಾಸ್ತವವಾಗಿ ಇದನ್ನು ದುರುಪಯೋಗ ಪಡಿಸಿಕೊಳ್ಳಲು ಅನೇಕ ತರದ ಜನ ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ.

"ಈ ದೃಷ್ಟಿಯಿಂದ ಪ್ರಗತಿ ಪಂಥದ ಮುಂದಿನ ಸಮ್ಮೇಳನ ತುಂಬ ಮಹತ್ವದ್ದು. ಈಗ ಪ್ರಗತಿ ಪಂಥ ಎದುರಿಸುತ್ತಿರುವ ಸಮಸ್ಯೆಗಳೆಲ್ಲಾ ಅಲ್ಲಿ ಪರಿಹಾರವಾಗುತ್ತವೆ. ಆಗ ಖಚಿತವಾದ ನಿಲುವುಗಳು ರೂಪಗೊಳ್ಳುತ್ತವೆ."

ಸಂ: "ಪ್ರೆಸ್ ಸೆನ್ಸಾರ್‌ಷಿಪ್ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?"

ನಿ: "ವಾಸ್ತವವಾಗಿ ಪತ್ರಿಕೆಗಳಿಗೆ ಸರ್ಕಾರ ಹೆದರ ಬೇಕಾದದ್ದೇ ಇರಲಿಲ್ಲ. ಅವರಲ್ಲಿಯೂ ದೊಡ್ಡ ದೊಡ್ಡ ಪತ್ರಿಕೆಗಳು ಸರ್ಕಾರದ ವಿರುದ್ಧ ಎಂದೂ ಇರಲಿಲ್ಲ. ಈ ಪತ್ರಿಕೆಗಳು ಜನತೆಯ ನೋವನ್ನು ಎಂದೂ ಹೇಳಿಲ್ಲ. ಜೊತೆಗೆ ಈ ದೇಶದ ಬಂಡವಾಳಶಾಹಿಗಳು ಎಮರ್ಜೆನ್ಸಿ ವಿರುದ್ಧ ಇದ್ದಾರೆ ಅಂತ ನನಗನ್ನಿಸುವುದಿಲ್ಲ."

ಸಂ: "ಕರ್ನಾಟಕದ ಸಂದರ್ಭದಲ್ಲೂ ನಿಮ್ಮದು ಇದೇ ನಿಲುವಿದೆಯೇ?"

ನಿ: "ಹೌದು, ಇಲ್ಲಿಯ ಅನೇಕ ಪತ್ರಕರ್ತರು ಮಾಲಿಕರುಗಳಿಗೆ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿ ದುಡಿಯುವುದು ಗೊತ್ತಿರುವ ಸಂಗತಿ ತಾನೇ?"

ಒಕ್ಕೂಟ ಸುಲಿಯುವ ವರ್ಗದ ಜನರ ಮುಖವಾಣಿ ಎಂಬುದು

ನಿರಂಜನರ ಅಭಿಪ್ರಾಯ. ಹಾಗೆಯೇ ದಲಿತ ಸಾಹಿತ್ಯ ಚಳವಳಿ ಕೂಡಾ ದಾರಿ ತಪ್ಪಿಸುವಂಥದ್ದು ಎಂದು ಅವರ ನಿಲುವು. ಪ್ರಗತಿಪಂಥದ ಕರಡು ಘೋಷಣೆಯಲ್ಲಿ ಅವರು ಇದನ್ನೇ ಪ್ರತಿಪಾದಿಸಿದ್ದರು. ದಾವಣಗೆರೆಯ ಸಮ್ಮೇಳನದಲ್ಲಿ ಒಕ್ಕೂಟ ಚಳವಳಿ, ದಲಿತ ಚಳವಳಿಯ ಬಗ್ಗೆ ಅವರ ಮಾತುಗಳನ್ನು ಶ್ರೀ ವಿ. ಟಿ. ರಾಜಶೇಖರ ಶೆಟ್ಟಿ, ಬಾದಾಮಿಯ ದೇಸಾಯಿ, ಎಚ್. ಎಸ್. ರಾಘವೇಂದ್ರರಾವ್, ಡಿ. ಆರ್. ನಾಗರಾಜ ಇವರುಗಳು ವಿರೋಧಿಸಿದರು. ಅನಂತರ ಆ ಭಾಗವನ್ನು ಘೋಷಣೆಯಿಂದ ತೆಗೆಯಲಾಯಿತು. "ಈಗಲೂ ಅದೇ ಅಭಿಪ್ರಾಯವನ್ನು ಉಳಿಸಿಕೊಂಡಿದ್ದೀರಾ ? ಅವರ ನಿಲುವುಗಳ ಬಗ್ಗೆ ನಿಮ್ಮ ವಿಚಾರವೇನು ?" ಎಂದೆ.

ನಿ : "ಹೌದು, ವೈಯಕ್ತಿಕವಾಗಿ ನನ್ನ ನಿಲುವು ಇವತ್ತು ಸಹ ಇದೇ. ಒಕ್ಕೂಟದವರು ಸಾಹಿತ್ಯದ ಬಗ್ಗೆ ಕಡಮೆ ಮಾತನಾಡಿದರು. ಈ ದೃಷ್ಟಿಯಿಂದ ಒಕ್ಕೂಟದವರಿಗೆ ವೈಕುಂಠ ರಾಜು ಅವರ ಉತ್ತರ ಸೂಕ್ತ. ಅಲ್ಲಿಯ ಕೆಲವರಾದರೂ ಪ್ರಗತಿಪಂಥಕ್ಕೆ ಬರುತ್ತಾರೆ ಎಂದುಕೊಂಡಿದ್ದೇನೆ. ಒಕ್ಕೂಟದ ಚಳವಳಿಯ ಮೂಲಕ ನಾವು 60 ವರ್ಷ ಹಿಂದೆ ಹೋದೆವು. ಜಸ್ಟಿಸ್ ಪಾರ್ಟಿ ರಾಜಕೀಯಕ್ಕೆ ಹಿಂತಿರುಗಿದೆವು. ರಾಷ್ಟ್ರೀಯ ಜೀವನದ ಸಾಧನೆಗಳನ್ನು ಇವರು ನಿರಾಕರಿಸಿದರು. ಉಳ್ಳವರ ಹಿತವನ್ನೇ ಪ್ರತಿಪಾದಿಸಿದರು. It is an abortive attempt."

ಸಂ : "ತೇಜಸ್ವಿ, ಲಂಕೇಶ, ಚಂದ್ರಶೇಖರ ಪಾಟೀಲ್ ಉಳ್ಳವರನ್ನು ಪ್ರತಿನಿಧಿಸುತ್ತಾರೋ ?"

ನಿ : "ಹೌದು, ಅವರ ನಿಲುವು ಉಳ್ಳವರ ಹಿತವನ್ನು ಸಾಧಿಸುತ್ತದೆ. ಒಕ್ಕೂಟದಲ್ಲಿ ಪ್ರಾಮಾಣಿಕ ಅಂಶಗಳೇನಾದರೂ ಇದ್ದರೆ ಅದು ದೇವನೂರ ಮಹಾದೇವರಂಥವರ ನಿಲುವು."

ಕೊನೆಗೆ ಒಂದು ಸಾಂಪ್ರದಾಯಿಕ ಪ್ರಶ್ನೆ ಕೇಳಿದೆ :

"ನಿರಂಜನರೇ, ಭರವಸೆ ಹುಟ್ಟಿಸುವ ತರುಣ ಬರೆಹಗಾರರು ಯಾರು ನಿಮ್ಮ ದೃಷ್ಟಿಯಲ್ಲಿ ?"

"ಬಹಳ ಕಷ್ಟರೀ ಹೇಳೋದು". ಏನೇ ಆದರೂ ಪ್ರಗತಿ ಪಂಥ ಒಕ್ಕೂಟದ ಅನಂತರ ಆದ ಪ್ರಮುಖ ಸಾಂಸ್ಕೃತಿಕ ಸಂಘಟನೆ. ನಾಡಿನ

ಪ್ರಜ್ಞಾವಂತರೆಲ್ಲರ ಗಮನ ಅವರ ಸೆಳೆದಿದೆ. ರಾಷ್ಟ್ರೋತ್ಥಾನ ಪರಿಷತ್ತಿನ ರೋಗಗ್ರಸ್ತ ಪ್ರಭಾವವನ್ನು ತೊಡೆದು ಹಾಕುವಲ್ಲಿ ಇದು ವಹಿಸಬೇಕಾಗಿರುವ ಹೊಣೆ ಹೆಚ್ಚಿನದು. ಉಳಿದ ಜವಾಬ್ದಾರಿಗಳ ಬಗೆಗೆ ಇದು ವಹಿಸುವ ನಿಲುವುಗಳನ್ನು ಕಾದು ನೋಡಬೇಕಾಗಿದೆ. 'ಚಿರಸ್ಮರಣೆ', 'ವಿಮೋಚನೆ'ಯಂತಹ ಶ್ರೇಷ್ಠ ಕೃತಿಗಳನ್ನು ಕನ್ನಡ ಜನಾಂಗಕ್ಕೆ ನೀಡಿದ ನಿರಂಜನರೇ ಅದರ ಬೆನ್ನೆಲುಬು. ವಿರೋಧಿಸುವಾಗ ಸಮರ್ಥಿಸುವಾಗ ಅತ್ಯಂತ ಸಂಭ್ರಮದಿಂದ ಮಾತನಾಡುವ ನಿರಂಜನರು ಪ್ರಗತಿ ಪಂಥ ಸಂಘಟನೆಗೆ ತಮ್ಮ ಜೀವ ಚೈತನ್ಯವನ್ನು ಧಾರೆ ಎರೆಯುತ್ತಿದ್ದಾರೆ. ಇವರ ಸೌಜನ್ಯದ ನಡವಳಿಕೆ ಪ್ರಗತಿಪಂಥದ ಮುಖ್ಯ ಆಸ್ತಿಗಳಲ್ಲೊಂದು. ಆದರೂ ನಮ್ಮ ನಾಡಿನ ಪ್ರಜ್ಞಾವಂತ ತರುಣ ಬರೆಹಗಾರರನ್ನು ಆಕರ್ಷಿಸಿಲ್ಲ. ಇದಕ್ಕೆ ಗಂಭೀರವಾದ ಕಾರಣಗಳಿವೆ.

ಕೊನೆಯ ಮಾತು : ನಾನು ಮತ್ತು ಶ್ರೀ ನಿರಂಜನರು ಚರ್ಚಿಸಿದಾಗ ಅವರು ಹೇಳಿದ ಅನೇಕ ಸಂಗತಿಗಳನ್ನು ಇಲ್ಲಿ ದಾಖಲು ಮಾಡಿಲ್ಲ. ಈ ಹೊತ್ತಿನಲ್ಲಿ ಅದು ಸಾಧ್ಯವೇ ಇಲ್ಲ. ಪ್ರಗತಿ ಪಂಥವನ್ನು ನಿರಂಜನರನ್ನು ಸಮರ್ಥವಾಗಿ ಅರ್ಥ ಮಾಡಿಕೊಳ್ಳಲು ಆ ದಾಖಲಾಗದ ಮಾತುಗಳೇ ತುಂಬ ಮುಖ್ಯ. ಆ ಮಾತುಗಳ ನೆರಳನ್ನು ಮಾತ್ರ ಇಲ್ಲಿ ಹೇಳಿದ್ದೇನೆ. ಈ ಸಂಭಾಷಣೆಯ ಸಾಲುಗಳ ಮಧ್ಯೆ ಆ ಹೇಳಲಾಗದ ವಿಷಯಗಳನ್ನು ಪ್ರಿಯ ವಾಚಕರು ಗುರುತಿಸಬಲ್ಲರಾದರೆ, ನನ್ನ ಬರಹ ಸಾರ್ಥಕವಾದಂತೆ. ನನಗಂತೂ ಆ ಬರೆಯಲಾಗದ ವಿಚಾರಗಳೇ ಹೆಚ್ಚು ಪ್ರಿಯವಾದುವುಗಳಾಗಿವೆ.

—೧೯೭೬

ಡಿ. ಆರ್. ನಾಗರಾಜರು ನನ್ನನ್ನು ಸಂದರ್ಶನಕ್ಕೆ ಒಳಗು ಮಾಡಿದ್ದು ಮೈಸೂರಿನಿಂದ ರಾಜಶೇಖರಕೋಟಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಆಂದೋಲನ' ಸಾಪ್ತಾಹಿಕಕ್ಕಾಗಿ. ಪ್ರಕಟಣೆ ೭-೩-೧೯೭೬ರ

ಸಂಚಿಕೆಯಲ್ಲಿ. ಈ ಆರೆಂಟು ವರ್ಷಗಳಲ್ಲಿ ಡಿ. ಆರ್. ತೀವ್ರಗತಿಯಿಂದ ಬೆಳೆದು ಕನ್ನಡದ ಮಹತ್ವದ ವಿಮರ್ಶಕರಾಗಿದ್ದಾರೆ. ಪ್ರಾಧ್ಯಾಪಕ ಡಾ|| ಡಿ. ಆರ್. ನಾಗರಾಜ್ ಅವರ ಕೃತಿ 'ಅಮೃತ ಮತ್ತು ಗರುಡ'... ಅವರ ಪಿ. ಎಚ್. ಡಿ. ಥೀಸಿಸ್ ಗ್ರಂಥ ರೂಪದಲ್ಲಿ ('ಆಧುನಿಕ ಕನ್ನಡ ಕಾವ್ಯದ ವಸ್ತುಗಳು') ಪ್ರಕಟವಾಗಲಿದೆ.

'ದಾಖಲಾಗದ ಮಾತುಗಳೇ ತುಂಬ ಮುಖ್ಯ' ಎಂದಿದ್ದಾರೆ ಸಂದರ್ಶಕರು. ಅದು ಎಮರ್ಜೆನ್ಸಿ ಕಾಲಾವಧಿ. ಆ ಮಾತುಗಳನ್ನು ನೀವು ಊಹಿಸಿಕೊಳ್ಳಬಲ್ಲಿರಾ ?

ಸೆನ್ಸಾರ್ ಶಿಪ್ ಕುರಿತ ಪ್ರಶ್ನೆ : ಎರಡೇ ತಿಂಗಳ ಹಿಂದೆ ಪ್ರಗತಿ ಪಂಥ ಪ್ರಥಮ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಮುದ್ರಣ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕಾಗಬಾರದೆಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದೆ. –ನಿ

ನಿರಂಜನ: ವ್ಯಕ್ತಿ ಮತ್ತು ವಿಚಾರ

–**ಸುಧಾರ್ಥಿ**

೧೯೪೦–೫೦ರ ದಶಕವು ಆಧುನಿಕ ಕನ್ನಡ ಸಾಹಿತ್ಯೇತಿಹಾಸದಲ್ಲೊಂದು ಪರ್ವಕಾಲವೆಂಬ ವಿಚಾರ ಸರ್ವವಿದಿತ. ಬರೆಯೇ ಬದುಕಬೇಕೆಂಬ ಹಠ ಸಾಧನೆಗಾಗಿ ಪಣತೊಟ್ಟು ಸಾಹಿತ್ಯಸೇವೆಗೆ ತೊಡಗಿದ್ದ ದಿವಂಗತ ಡಾ|| ಅ.ನ.ಕೃ. ಹಾಗೂ ಅವರ ಸಹಾನುವರ್ತಿಗಳ ಸಂಯುಕ್ತ ಪ್ರಯತ್ನವಾಗಿ ರೂಪುಗೊಂಡ 'ಪ್ರಗತಿಶೀಲ ಚಳವಳಿ'ಯು ಕನ್ನಡ ಸಾಹಿತ್ಯದ ಗತಿಯನ್ನೇ ಸಂಪೂರ್ಣವಾಗಿ ಬದಲಿಸಿ, ತನ್ನದೇ ಆದ ಉತ್ಸಾಹಪೂರ್ಣ ಪರಿಸ್ಥಿತಿಯೆಡೆಗೆ ಅದನ್ನು ನಿರ್ದೇಶಿಸ ತೊಡಗಿತು.

ಅದೇ ಸನ್ನಿವೇಶದಲ್ಲಿ ಪ್ರಭಾವಶಾಲಿಯಾದ ಇನ್ನೊಂದು ಮಾಧ್ಯಮದ ಮೂಲಕ, ಉತ್ಸಾಹಿ ತರುಣರಾಗಿದ್ದ ಕುಳುಕುಂದ ಶಿವರಾಯರು ಹಾಗೂ ಅವರ ಅಭಿಮಾನಿಗಳ ಸಮೂಹವೂ 'ಪ್ರಗತಿಶೀಲ ಚಳವಳಿ'ಯಲ್ಲಿ ಪಾಲ್ಗೊಂಡರು.

ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸಿದ ಅಂದಿನಿಂದ ಪ್ರಾರಂಭವಾಗಿ, ಇಂದಿನ ವರೆಗೂ ಕುಳುಕುಂದ ಶಿವರಾಯರು ಸದಾಕಾಲವೂ 'ಪ್ರಗತಿಶೀಲ' ಧೋರಣೆಗಳಿಗೇ ಬದ್ಧರಾಗಿ ಬಾಳುತ್ತಿದ್ದಾರೆ. ಇಂಥ ಕ್ರಿಯಾಶೀಲ ವ್ಯಕ್ತಿಯೊಡನೆ 'ಧ್ರುವ' ಮಾಸ ಪತ್ರಿಕೆಗಾಗಿ ಸಂದರ್ಶನದ ಬಗ್ಗೆ ನಡೆದ ಪತ್ರ ವ್ಯವಹಾರವು

ಫಲಕಾರಿಯಾಗಿ, ಅವರ ಒಪ್ಪಿಗೆಯು ದೊರೆತಂದಿನಿಂದಲೇ ಅವರನ್ನು ಕುರಿತ ವಿಚಾರಗಳ ಅಲೆಗಳು ನನ್ನ ಚಿತ್ತದಲ್ಲಿ ಸುಳಿಯತೊಡಗಿದ್ದುವು.

ಕುಳುಕುಂದ ಶಿವರಾಯರು- ಇದು ಅವರ ಹುಟ್ಟು ಹೆಸರಾದರೂ ಸಾಹಿತ್ಯ ಕ್ಷೇತ್ರದಲ್ಲಿ ಅವರು ಪ್ರಸಿದ್ಧರಾಗಿರುವುದು 'ನಿರಂಜನ' ಎಂಬ ಕಾವ್ಯ ನಾಮದಿಂದ.

ಹರಿತವಾದ ಬರಹಕ್ಕೆ ಹೆಸರಾಗಿದ್ದು 'ರಂಗಮ್ಮನ ವಠಾರ', 'ವಿಮೋಚನೆ' ಇತ್ಯಾದಿ ಉತ್ತಮ ಕೃತಿಗಳಿಂದ ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ನಿರಂಜನರು ನುರಿತ ಪತ್ರಿಕೋದ್ಯಮಿಗಳೂ ಹೌದು.

'ಜ್ಞಾನಗಂಗೋತ್ರಿ'ಯ ನಿರ್ದೇಶಕರಾಗಿ (ಪ್ರಧಾನ ಸಂಪಾದಕರಾಗಿ) 'ಕಿರಿಯರ ವಿಶ್ವಕೋಶ'ಕ್ಕೆ ಕಾರಣಕರ್ತರಾದ ನಿರಂಜನರು ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ 'ಪ್ರಗತಿಪಂಥ' ಸಮ್ಮೇಳನಾಧ್ಯಕ್ಷತೆ ವಹಿಸಿ, 'ಕರ್ನಾಟಕ ಪ್ರಗತಿಪಂಥ ಸಂಯೋಜನಾ ಸಮಿತಿ'ಯ ಕಾರ್ಯ ನಿರ್ವಾಹಕರಾಗಿದ್ದಾರೆ.

ಸಮಾಜದಲ್ಲಿ ವ್ಯಕ್ತಿ ಜೀವನದ ಮಟ್ಟವನ್ನು ಉತ್ತಮಪಡಿಸುವುದೇ ಸಾಹಿತ್ಯದ ಹಿರಿಯ ಆಶೋತ್ತರವಾಗಬೇಕೆಂಬ ಅಪೇಕ್ಷೆಯಿಂದ 'ಪ್ರಗತಿಶೀಲ ಧೋರಣೆ'ಗಳಿಗೇ ಅಂಟಿಕೊಂಡಿರುವ ನಿರಂಜನರ ಕೌಟುಂಬಿಕ ಜೀವನವು ಆದರ್ಶವಾದುದಾಗಿದೆ. ವೈದ್ಯಕೀಯ ಪದವಿ ಪಡೆದು, ಸಾಹಿತ್ಯದ ಬಗ್ಗೆ ಒಲವು ಹೊಂದಿರುವ ಡಾ|| ಅನುಪಮಾ ಅವರು ಸಾಹಿತ್ಯಿಕ ದೃಷ್ಟಿಕೋನದಲ್ಲಿ ಪತಿಗೆ ತಕ್ಕ ಸತಿಯಾಗಿದ್ದಾರೆ. ಇವರಿಬ್ಬರ ಅಕ್ಕರೆಯ ಮಗಳು ತೇಜಸ್ವಿನಿ ಸಹಾ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಹೊಸ ತಲೆಮಾರಿನ ಬರಹಗಾರ್ತಿಯರಲ್ಲಿ ಹೆಸರು ಪಡೆದವರಾಗಿದ್ದಾರೆ.

ಜನಜೀವನದಲ್ಲಿ, ಅದರಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಗತಿ ವಿರೋಧಿಗಳನ್ನು ಪ್ರಬಲವಾಗಿ ವಿರೋಧಿಸುವ ನಿರಂಜನರು, ಯಾವುದೇ ತರಹದ ದಾಕ್ಷಿಣ್ಯಗಳಿಗೂ ಒಳಪಡದೆ ನಿಸ್ಸಂಕೋಚವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವವರಾಗಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶಿಸುತ್ತಿರುವ ಹೊಸ ಪೀಳಿಗೆಯ ಭವಿತವ್ಯ ಹಾಗೂ ಸನ್ನಿವೇಶದಲ್ಲಿ ಸಾಹಿತ್ಯ ಕ್ಷೇತ್ರದ ಪ್ರಮುಖ ವಿಷಯವಾಗಿರುವ ಪ್ರಗತಿಪಂಥ'ದ ಬಗ್ಗೆ ಸ್ವಲ್ಪ ಹೆಚ್ಚಿನ ಒತ್ತುಕೊಟ್ಟು ನಿರಂಜನರೊಂದಿಗೆ

ನಡೆಸಿದ ಈ ಪ್ರಶ್ನೋತ್ತರದಲ್ಲಿ, ಸಾಕಷ್ಟು ಉಪಯುಕ್ತವಾದ ಅಂಶಗಳನ್ನು ಕಾಣಬಹುದುದಾಗಿದೆ.

ಸಾಹಿತ್ಯ ಕೃತಿಗಳ ಮೂಲಕ ನನಗೆ ನಿರಂಜನರ ಪರಿಚಯವಾಗಿದ್ದರೂ ಅವರನ್ನು ಮೊದಲ ಸಲ ಪ್ರತ್ಯಕ್ಷವಾಗಿ ನೋಡಿದ್ದು ನಾನು ಸಂದರ್ಶನಕ್ಕೆ ಹೋದಾಗಲೇ.

ಅನಾರೋಗ್ಯಕ್ಕೊಳಗಾಗಿರುವ ನಿರಂಜನರಿಗೆ ನಡೆದಾಡುವುದು ಸ್ವಲ್ಪ ಶ್ರಮದ ಕೆಲಸವೆನಿಸಬಹುದಾದರೂ, ಸಾಹಿತ್ಯ ಸೃಷ್ಟಿ ಮಾತ್ರ ಮೊದಲಿನಂತೆಯೇ ಸರಾಗವಾಗಿದೆ.

ವಿಶ್ರಾಂತಿ, ವ್ಯಾಸಂಗ, ಬರವಣಿಗೆ, ಅತಿಥಿಗಳ ಸಂದರ್ಶನ ಮುಂತಾದ ವಿವಿಧ ಉಪಯೋಗಗಳಿಗೆ ಅಣಿಮಾಡಿಕೊಂಡಿರುವ ಕೊಠಡಿಯಲ್ಲಿ ಬರೆಯುತ್ತ ಕುಳಿತಿದ್ದ ನಿರಂಜನರನ್ನು ಕಂಡಾಗ, ನನಗೆ ಅವರ ಅನಾರೋಗ್ಯದ ನೆನಪೇ ಇರಲಿಲ್ಲ. ಸಾಂಪ್ರದಾಯಿಕವಾಗಿ ಪರಿಚಯದ ಪ್ರಕರಣ ಮುಗಿದ ಬಳಿಕ ನಮ್ಮ ಪ್ರಶ್ನೋತ್ತರಗಳ ಚರ್ಚೆ ಪ್ರಾರಂಭವಾಯಿತು.

ಇತ್ತೀಚೆಗೆ 'ಪ್ರಗತಿಪಂಥ' ಎಂಬ ಸಾಹಿತ್ಯ ಚಟುವಟಿಕೆಯಲ್ಲಿ ನೀವು ಭಾಗವಹಿಸಿದ್ದೀರಿ. ಇದು ಹಿಂದಿನ ಪ್ರಗತಿಶೀಲ ಸಾಹಿತ್ಯ ಚಳವಳಿಯ ಪುನರುಜ್ಜೀವನವೇ ?

"ಪ್ರಗತಿಶೀಲ ಸಾಹಿತ್ಯ ಚಳವಳಿಯ ಪ್ರಧಾನ ಅಂಶಗಳನ್ನು ಪ್ರಗತಿಪಂಥ ಒಳಗೊಂಡಿದೆ. ಆದರೆ, ಆ ಚಳವಳಿಗಿಂತ ಇದು ಹೆಚ್ಚು ವ್ಯಾಪಕವಾದದ್ದು. ಸಾಹಿತಿಗಳಿಗಷ್ಟೇ ಇದು ಸೀಮಿತವಲ್ಲ. ಪ್ರಗತಿಪರ ವಿಚಾರ ಧಾರೆಯ ಬರೆಹಗಾರರು, ಕಲಾವಿದರೆಲ್ಲ ಒಂದೆಡೆ ಸೇರುವ ವಿಶಾಲ ವೇದಿಕೆಯಾಗಿ ಇದನ್ನು ರೂಪಿಸಲಾಗಿದೆ. ಹಿಂದೆ ೧೯೪೦ರ ಅನಂತರದ ದಶಕದಲ್ಲಿ ಬೆಂಗಳೂರು, ಧಾರವಾಡ, ಮಂಗಳೂರುಗಳಲ್ಲಿ ಪ್ರಗತಿಶೀಲ ಲೇಖಕರ ಸಂಘಗಳಿದ್ದುವು. ಅಖಿಲ ಕರ್ನಾಟಕ ಸಂಘಟನೆಯನ್ನು ಸಾಧಿಸುವುದು ಆಗ ಸಾಧ್ಯವಾಗಿರಲಿಲ್ಲ. ಈ ವರ್ಷದ ಜನವರಿಯಲ್ಲಿ ದಾವಣಗೆರೆಯಲ್ಲಿ ಜರಗಿದ ಪ್ರಗತಿಪಂಥ ಸಮ್ಮೇಳನಕ್ಕೆ ನಾಡಿನ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಮ್ಮೇಳನದ ದೀರ್ಘ ಚರ್ಚೆಯ ಬಳಿಕ ಒಂದು ವರ್ಷಕಾಲ ನಾಡಿನಾದ್ಯಂತ ಪ್ರಗತಿಪಂಥದ

ವೇದಿಕೆಗಳನ್ನು ರೂಪಿಸಿ, ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಕರ್ನಾಟಕ ಪ್ರಗತಿಪಂಥ ಸಂಯೋಜನಾ ಸಮಿತಿಯನ್ನು ರಚಿಸಿತು.

"ಹೊಸ ಕಸುವು, ಹೊಸ ರೂಪ, ಪುನರುಜ್ಜೀವನ, ಪುನರಾವರ್ತನೆ ಈ ಪದಗಳೆಲ್ಲ ಅತೃಪ್ತಿಕರ. ನಾನಿದನ್ನು ಪುನರುತ್ಥಾನ ಎಂದು ಕರೆದಿದ್ದೇನೆ. ಕವಿ ಕಲ್ಪನೆಯ ಪುನರುತ್ಥಾನ. ಈ ಪದ ಸಮಂಜಸ ಎಂದು ನನ್ನ ಅಭಿಪ್ರಾಯ."

ಪ್ರಗತಿಶೀಲ ಚಳವಳಿಯ ಕಾಲಕ್ಕೆ ಸೃಷ್ಟಿಯಾದ ಸಾಹಿತ್ಯದಲ್ಲಿ ಯಾವ ಉತ್ತಮ ಕೃತಿಯೂ ಹೊರಬರಲಿಲ್ಲವೆಂಬುದು ಒಬ್ಬ ವಿಮರ್ಶಕರ ಅಭಿಪ್ರಾಯ. ನಿಮ್ಮ ಅನಿಸಿಕೆ ಏನು ?

"ಯಾರೊ ಆ ಮಹನೀಯರು? ಇರಲಿ ಬಿಡಿ, ಹೆಸರು ಮುಖ್ಯವಲ್ಲ.... ಅವರ ಅಭಿಪ್ರಾಯ ಸರಿಯಲ್ಲ ಅನಿಸುತ್ತದೆ. ಪ್ರಗತಿಶೀಲ ಸಾಹಿತ್ಯ ಚಳವಳಿಯಲ್ಲಿ ಪ್ರಮುಖ ಬರೆಹಗಾರರನೇಕರು ಭಾಗವಹಿಸಿದರು. ಪ್ರತ್ಯಕ್ಷವಾಗಿ ಭಾಗವಹಿಸದೇ ಇದ್ದರೂ ಎಷ್ಟೋ ಜನ ಲೇಖಕರು ಹೊಸ ವಿಚಾರ ಸರಣಿಯಿಂದ ಪ್ರಭಾವಿತರಾದರು. ವಸ್ತುವಿನ ಆಯ್ಕೆಯ ಕ್ಷೇತ್ರ ವಿಸ್ತಾರವಾಯಿತು. ಸಾಹಿತ್ಯ ಬದುಕಿಗೆ ಹತ್ತಿರವಾಯಿತು. ಪ್ರಗತಿಶೀಲ ಸಾಹಿತ್ಯದ ಹತ್ತು ಹದಿನೈದು ವರ್ಷಗಳ ಕಾಲಾವಧಿಯಲ್ಲಿ ಉತ್ತಮ ಸಾಹಿತ್ಯ ಕೃತಿಗಳು ಸೃಷ್ಟಿಯಾಗಲಿಲ್ಲವೆನ್ನುವುದು ಸರಿಯಲ್ಲ. ಕನ್ನಡ ಸಾಹಿತ್ಯವೀಗ ಮತ್ತೊಂದು ತಿರುವಿನಲ್ಲಿ ನಿಂತಿದೆ. ಹೊರಳಿ ನೋಡಿ, ಆಗಿಹೋದುದನ್ನು ವಸ್ತುನಿಷ್ಠ–ಸತ್ಯನಿಷ್ಠ ನಿಲುವಿನಿಂದ ನಾವು ತೂಗಿ ನೋಡಬೇಕು. ಇದು ಅಗತ್ಯವಾಗಿ ನಡೆಯಬೇಕಾದ ಮೌಲ್ಯ ಮಾಪನ. ಅಲ್ಲ, ಅಂತೀರಾ ?"

'ಇಂದಿನ ಕನ್ನಡ ಸಾಹಿತ್ಯವು ಆಶಾದಾಯಕವಾಗಿಯೇ ಬೆಳೆಯುತ್ತಿದೆ' ಎಂಬ ಅಭಿಪ್ರಾಯವನ್ನು ನೀವು ಒಪ್ಪುವಿರಾ ?

"ಕಳೆದ ಶತಮಾನದ ಅಂತ್ಯದಲ್ಲಿ 'ಇಂದಿರಾ ಬಾಯಿ', 'ವಾಗ್ದೇವಿ' ಕಾದಂಬರಿಗಳು ರಚಿತವಾದಾಗಲೂ 'ಇಗ್ಗಪ್ಪಹೆಗಡೆಯ ವಿವಾಹ ಪ್ರಹಸನ' ಸೃಷ್ಟಿಯಾದಾಗಲೂ ಕನ್ನಡ ಸಾಹಿತ್ಯದ ಬೆಳವಣಿಗೆ ಆಶಾದಾಯಕವಾಗಿತ್ತು. ಮುದ್ದಣನ 'ರಾಮಾಶ್ವಮೇಧ'ವೂ ಆಧುನಿಕ ಬರೆಹಗಾರರು ಸಾಧಿಸಬಹುದಾದ ಹಿರಿಮೆಗೆ ಕನ್ನಡಿ ಹಿಡಿಯಿತು. ಸರ್ವೋದಯ, ಪ್ರಗತಿಶೀಲ, ನವ್ಯ

ಅವಧಿಗಳಲ್ಲೂ ಅಷ್ಟೆ. ಅನಂತರವೂ ಹಾಗೆಯೇ. ಕನ್ನಡ ಸಾಹಿತ್ಯದ ಬೆಳವಣಿಗೆ ಆಶಾದಾಯಕವೇ. ಹೊಟ್ಟು ಸದಾ ಕಾಲ ಇರುತ್ತದೆ. ಅದೇ ರೀತಿ ಗಟ್ಟಿ ಕಾಳು ಕೂಡ."

ತೀಕ್ಷ್ಣವಾದ ಹಾಗೂ ಸತ್ವಶಾಲಿಯಾದ ಬರಹಕ್ಕೆ ಹೆಸರಾಗಿದ್ದ ಅನೇಕ ಲೇಖಕರು ಇತ್ತೀಚೆಗೆ ಹೆಚ್ಚಾಗಿ ಬರೆಯುತ್ತಲೇ ಇಲ್ಲ. ಇದಕ್ಕೆ ವೈಯಕ್ತಿಕ ಕಾರಣಗಳಿರಬಹುದೇ? ಅಥವಾ ಪರಿಸರದ ಬಗೆಗಿನ ಜಿಗುಪ್ಸೆ ಕಾರಣವಾಗಿದೆಯೇ?

'ಅನೇಕ ಲೇಖಕರು' ಎನ್ನುತ್ತೀರೋ? ಅಥವಾ 'ಕೆಲ ಲೇಖಕರು' ಎಂದರೆ ಸಾಕೊ? ನಿಜವಾದ ಬರೆಹಗಾರನಿಗೆ ಬರೆಯುವುದು ಒಂದು ಅನಿವಾರ್ಯ ಕ್ರಿಯೆ. ಉಸಿರಾಟದ ಹಾಗೆ. ಅದನ್ನು ಬಿಟ್ಟು ಆತ ಹೇಗೆ ಇರಬಲ್ಲ? ಪ್ರಾಯಶಃ ತಾನು ಬಯಸುವ ಅಭಿವ್ಯಕ್ತಿಯನ್ನು ಬೇರೆ ರೀತಿಯಲ್ಲಿ (ರಂಗದಲ್ಲಿ) ಆತ ಸಾಧಿಸುತ್ತಿರಬಹುದು. ಪರಿಸರದ ಬಗೆಗೆ ಜಿಗುಪ್ಸೆ ಇದ್ದರಂತೂ ಹೊಸ ರೀತಿಯ ಪ್ರೇರಣೆಯೇ ದೊರೆತಂತಾಯಿತಲ್ಲ? ಕ್ಷಮಿಸಿ. 'ಅನೇಕ ಲೇಖಕರು' ಎಂದಾಗ ನನ್ನನ್ನೂ ಗಮನದಲ್ಲಿಟ್ಟಿದ್ದೀರಾ?'

'ಹೌದು'.

"ಹಾಗಿದ್ದರೆ ನನ್ನ ಉತ್ತರ: ನಾನು ಬರೆಯುತ್ತಲೇ ಇದ್ದೇನೆ!"

ಅಸಂಗತವಾದ ಶೈಲಿ, ಅತಿ ಕ್ಲಿಷ್ಟವಾದ ಶಬ್ದಜಾಲ, ಅತ್ಯಂತ ವೈಯಕ್ತಿಕವಾದ ಭಾವನೆಗಳನ್ನು ಪ್ರತಿಪಾದಿಸುವ 'ನವ್ಯ'ತೆಯ ಸೋಗಿನಲ್ಲಿ ಇಂದಿನ ಸಾಹಿತ್ಯವು ಜನಸಾಮಾನ್ಯರಿಂದ ದೂರವಾಗುತ್ತಿದೆ ಎಂಬ ವಿಚಾರದಲ್ಲಿ ನಿಮ್ಮ ಅನಿಸಿಕೆ ಏನು?

"ಸ್ವಲ್ಪ ಸಮಯ ಹಿಂದಿನ ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿದರೆ ಆ ವಿಚಾರದಲ್ಲಿ ತಥ್ಯ ಕಾಣಿಸಬಹುದು. ಆದರೆ ಆ ಬಗೆಯ ಸಾರ್ವತ್ರಿಕ ಖಂಡನೆ ಸಾಧುವಲ್ಲ. ಆಡುಮಾತಿಗೆ ಮಹತ್ವ ನೀಡಬೇಕೆಂದು ಪ್ರಗತಿಶೀಲರು ಹೇಳಿದ್ದರು. ಅದನ್ನು ನವ್ಯರು ಮುಂದುವರಿಸಿದರು. ಪ್ರಗತಿಶೀಲರಲ್ಲೂ ಮಣ್ಣಿನ ವಾಸನೆ ಜೋರಾಗಿತ್ತು. ಕೆಲ ನವ್ಯರಲ್ಲಿ ಮೂಗು ಮುಚ್ಚಿಕೊಳ್ಳುವುದು ಅನಿವಾರ್ಯವಾಗುವಷ್ಟು ಆ ಪ್ರವೃತ್ತಿ ಕಂಡು ಬಂತು. 'ಮಣ್ಣಿನ ವಾಸನೆ' ಪದಗಳು ನಿಜವಾದ ಅರ್ಥವನ್ನು ಕಳೆದುಕೊಂಡವು.

ಆದರೆ ಒಂದು ಸಂಗತಿ ನಾವು ಮರೆಯಬಾರದು. ಶೀರಾ ಅಗತ್ಯವಾಗಿದ್ದ ಘಳಿಗೆಯಲ್ಲಿ ಕನ್ನಡ ಕಾವ್ಯಕ್ಕೆ 'ನವ್ಯ' ಪ್ರಮುಖರು ಶಾಕ್ ಟ್ರೀಟ್‌ಮೆಂಟ್ ಕೊಟ್ಟರು. ಶಾಖ ಚಿಕಿತ್ಸೆ ಹದ್ದು ಮೀರಿದಾಗ ಮಾತ್ರ ರೋಗಿ ಮುರುಟುತ್ತಾನೆ."

ವಿದೇಶೀ ಸಾಹಿತ್ಯ ಅನುಕರಣೆ ಅಥವಾ ಎರವಲು ಪ್ರತಿಭೆಯು ಕನ್ನಡ ಸಾಹಿತ್ಯಕ್ಕೆ ಶೀರಾ ಅನಿವಾರ್ಯವೆಂದು ನೀವು ಭಾವಿಸುವಿರಾ ?

"ಭಾಷೆ ಬೇರೆಯಾದರೇನು? ಪರಿಸರ ಬೇರೆಯಾದರೇನು? ಬದುಕಿನಿಂದ ದೊರೆಯುವ ಪ್ರೇರಣೆ ಜಗತ್ತಿನಾದ್ಯಂತ ಒಂದೇ ಬಗೆಯದು. ಅದೇ ರೀತಿ ಸಾಹಿತ್ಯ. ಭಾಷೆಯ ತೊಡಕಿಗಾಗಿ ಸಂಕಟಪಡಬೇಕು. ಅನುವಾದಗಳ ಮೂಲಕವಾದರೂ ಲಗ್ಗೆ ಇಟ್ಟು ಸವಿಯಬೇಕು. ಜಗತ್ತಿನ ಎಲ್ಲ ಸೃಜನಶೀಲ ಬರೆಹಗಾರರ ನಡುವೆ ಇರುವ ಅಗೋಚರ ಸಂವಹನ ಬಾಂಧವ್ಯ ವಿಸ್ಮಯವೆನಿಸಬಾರದ ವಿಸ್ಮಯ. ಅನುಕರಣೆ ಸಲ್ಲದು. ಪ್ರತಿಭೆಯನ್ನು ಎರವಲು ತರಲು ಆಗುವುದಿಲ್ಲ."

ನೀವು ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದಾಗಿನ ಪರಿಸ್ಥಿತಿ ಹಾಗೂ ಇಂದಿನ ಸಾಹಿತ್ಯಕ್ಷೇತ್ರದ ಪರಿಸ್ಥಿತಿ ಇವುಗಳಲ್ಲಿ ವ್ಯತ್ಯಾಸವನ್ನೇನಾದರೂ ಗುರುತಿಸಿದ್ದೀರಾ ?

"ಆಗ ಬರೆಯುವವರ ಸಂಖ್ಯೆ ನೂರು ಆಗಿದ್ದರೆ, ಈಗ ಸಾವಿರಕ್ಕಿಂತಲೂ ಹೆಚ್ಚು. ಓದುವವರ ಸಂಖ್ಯೆಯೂ ಅದೇ ರೀತಿ ಹೆಚ್ಚಿದೆ. ಆಗ ಬರೆದು ಬದುಕುವ ಹಟಮಾರಿಗಳು ಒಬ್ಬಿಬ್ಬರಿದ್ದರು. ಈಗ ಹತ್ತಾರು ಜನ ಸಿಗಬಹುದು. ಒಳ್ಳೆಯ ಸಾಹಿತ್ಯ ಕೃತಿಯ ಒಂದು ಸಾವಿರ ಪ್ರತಿ ಮಾರಾಟವಾಗಲು ಆಗ ಹತ್ತು ವರ್ಷ ಹಿಡಿಯುತ್ತಿತ್ತು. ಈಗಲೂ ಅಷ್ಟೇ. (ವೈಚಿತ್ರ್ಯ !) ಪರಸ್ಪರ ಪ್ರಶಂಸೆ ಆಗ ಶಿಷ್ಟಾಚಾರವೆನಿಸಿತ್ತು. ಈಗ ಸನ್ಮಾನ ನಾಟಕ ನಡೆಯುತ್ತದೆ."

ವೈಯಕ್ತಿಕ ದ್ವೇಷಾಸೂಯೆಗಳಿದ್ದರೂ ಕ್ರಿಯಾತ್ಮಕ ತಾತ್ವಿಕ ವಿಚಾರಗಳನ್ನು ಅನುಮೋದಿಸುವ ಹೃದಯ ವೈಶಾಲ್ಯದಲ್ಲಿ ಹಿಂದಿನ ತಲೆಮಾರಿನ ಸಾಹಿತಿಗಳು ಇಂದಿನವರಿಗಿಂತಲೂ ಉತ್ತಮವಾಗಿದ್ದರು ಹೌದೆ ?

“ಹೌದೆ? ಅಂಥ ಹೃದಯ ವೈಶಾಲ್ಯವನ್ನು ಆಗಲೂ ಹುಡುಕಿದ್ದೆ. ಇವತ್ತೂ ಹುಡುಕುತ್ತಿದ್ದೇನೆ.”

ಸತ್ವ ಹಾಗೂ ಸಾಮರ್ಥ್ಯದ ದೃಷ್ಟಿಯಲ್ಲಿ ಸ್ತ್ರೀಯರ ಸಾಹಿತ್ಯಕೃತಿಗಳು ಪುರುಷರ ಸಾಹಿತ್ಯ ಕೃತಿಗಳೊಂದಿಗೆ ಸರಿದೂಗಲಾರವು –ಎಂಬ ಅಭಿಪ್ರಾಯದ ಬಗ್ಗೆ ನೀವೇನು ಹೇಳುವಿರಿ?

“ಜಗತ್ತಿನ ಪ್ರಥಮ ಕವಯಿತ್ರಿ ಸಾಫ್ಫೊಗೆ ಈ ಅಭಿಪ್ರಾಯ ಗೊತ್ತಾಗುವುದಿಲ್ಲ–ನಿಮ್ಮ ಪುಣ್ಯ! ಸಾಹಿತ್ಯದಲ್ಲಿ ಸ್ತ್ರೀಯ ಕೃತಿ, ಪುರುಷನ ಕೃತಿ ಎಂಬ ವ್ಯತ್ಯಾಸ ನನಗೆ ಸಮ್ಮತವಿಲ್ಲ. ಕಳಪೆ ಸಾಹಿತ್ಯ ರಚನೆಯಲ್ಲಂತೂ ಸ್ತ್ರೀ ಪುರುಷರು ಸಮಾನರು. ಶ್ರೇಷ್ಠ ಸಾಹಿತ್ಯ ಸೃಷ್ಟಿಯಲ್ಲೂ ಯಾಕಾಗಬಾರದು? ಅಥವಾ ಪುರುಷರ ಬರವಣಿಗೆಗಿಂತಲೂ ಮೇಲು ಮಟ್ಟದ್ದನ್ನು ಸ್ತ್ರೀಯರೇ ಯಾಕೆ ರಚಿಸಬಾರದು?”

ಪೂರ್ಣಾವಧಿಯ ಸಾಹಿತಿಯಾಗಿರುವ ನಿಮ್ಮ ಆಲೋಚನೆಯ ಸ್ತರಕ್ಕೂ ವೈದ್ಯಕೀಯ ವ್ಯಾಸಂಗ ನಡೆಸಿ ಸಾಹಿತ್ಯದಲ್ಲಿ ಆಸಕ್ತಿವಹಿಸಿರುವ ನಿಮ್ಮ ಶ್ರೀಮತಿಯವರ ಆಲೋಚನೆಯ ಸ್ತರಕ್ಕೂ ವ್ಯತ್ಯಾಸವಿರುವುದು ಸಹಜ. ಈ ದಿಸೆಯಲ್ಲಿ ತಾತ್ವಿಕವಾದ ಭಿನ್ನಾಭಿಪ್ರಾಯದ ಸನ್ನಿವೇಶವನ್ನೇನಾದರೂ ನೀವು ಎದುರಿಸಿದ್ದೀರಾ?

“ನಾವು ಒಂದೇ ಮನೆಯಲ್ಲಿದ್ದರೂ ಬೇರೆ ಬೇರೆ ಕೊಠಡಿಗಳಲ್ಲಿ ಬರೆಯುತ್ತೇವೆ. ಬರೆಯುವಾಗಿನ ಅವರ ಸಂಕಟ ಅವರಿಗೆ, ನನ್ನದು ನನಗೆ. ಬೇರೆ ಭಿನ್ನಾಭಿಪ್ರಾಯಗಳು ಅಲ್ಪಾಯು. (ಮದುವೆಯಾದ ಹೊಸತಿನಲ್ಲಿ ಏಕಾಭಿಪ್ರಾಯ; ಮಕ್ಕಳಾದಾಗ ಸ್ವಲ್ಪ ಭಿನ್ನಾಭಿಪ್ರಾಯ; ಮಕ್ಕಳು ದೊಡ್ಡವರಾದ ಮೇಲೆ ಪುನಃ ಏಕಾಭಿಪ್ರಾಯ!)”

ಕನ್ನಡದಲ್ಲಿ ತರುಣ ಬರಹಗಾರರು ಬೆಳೆಯಲು ತಕ್ಕ ಅವಕಾಶವಿಲ್ಲ. ಅವರ ಸತ್ವ ಶಾಲಿಯಾದ ಪ್ರಕಟಣೆಗಳಿಗೂ ಸೂಕ್ತವಾದ ಮಾರುಕಟ್ಟೆ ಇಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ನಿಮ್ಮ ಸಲಹೆಗಳೇನಾದರೂ ಇವೆಯೆ?

“ಈ ವಿಷಯದಲ್ಲಿ ಯೋಚಿಸಿದಷ್ಟೂ ಖಿನ್ನನಾಗುತ್ತೇನೆ. ತರುಣ ಬರಹಗಾರರ ಕೃತಿಗಳ ಪ್ರಕಟಣೆಗೆ ಇರುವ ತೊಂದರೆಗಳು ದಿನದಿಂದ ದಿನಕ್ಕೆ ಹೆಚ್ಚು

ತ್ತಿವೆ. ಪ್ರಕಟಣೆ, ಮಾರಾಟಗಳಿಗೆ ಸಂಬಂಧಿಸಿದಂತೆ ತರುಣ ಬರೆಹಗಾರರು ಒಂದಾಗಿ ಚರ್ಚಿಸಬೇಕು. ಆದರ್ಶದೊಡನೆ ವ್ಯವಹಾರ ದೃಷ್ಟಿಯನ್ನೂ ಬೆರೆಸಿ, ಬರೆಹಗಾರರ ಮೊದಲ ಎರಡು ಕೃತಿಗಳ ಪ್ರಕಟಣೆಗೇ ಮೀಸಲಾದ ಪ್ರಕಾಶನ ಸಂಸ್ಥೆಯೊಂದನ್ನು ಸ್ಥಾಪಿಸಲು ಸಾಧ್ಯವೇ ಎಂದು ಯೋಚಿಸ ಬೇಕು. ಗ್ರಂಥಾಲಯ ಚಳವಳಿ ಬೆಳೆದಿದೆಯಂತೆ. ಸಾವಿರಕ್ಕೂ ಹೆಚ್ಚು ಗ್ರಂಥ ಭಂಡಾರಗಳು ಕನ್ನಡ ನಾಡಿನಲ್ಲಿ ಇವೆಯಂತೆ. ನಮ್ಮ ತರುಣರ ಒಂದು ನಿಯೋಗ ಆ ಭಂಡಾರಗಳನ್ನಿಷ್ಟು ನೋಡಿ ಬರಬೇಕು. ಲಕ್ಷಾಂತರ ರೂಪಾಯಿಗಳು ಪುಸ್ತಕಗಳಿಗಾಗಿ ವ್ಯಯವಾಗುತ್ತಿವೆಯಂತೆ. ಪ್ರತಿಯೊಂದು ಗ್ರಂಥಭಂಡಾರ ಪ್ರತಿಯೊಬ್ಬ ಲೇಖಕನ ಕೃತಿಯ ಒಂದು ಪ್ರತಿಯನ್ನು (ಕೇವಲ ಒಂದು ಪ್ರತಿ) ಕೊಳ್ಳುವಂತೆ ಮಾಡುವುದು ಹೇಗೆ? ಇದಕ್ಕೆ ಕಾನೂನಿನ ಅಡ್ಡಿ ಇದೆಯೆ? ಅಥವಾ ಅಡ್ಡಗಾಲು ಹಾಕುವವರು ಬೇರೆ ಯಾರಾದರೂ ಇರುವರೆ? ನಿಯೋಗದ ವರದಿಯನ್ನು ಆಧರಿಸಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು. ಹಿಂದೆ ಅಕ್ಷರಾಭ್ಯಾಸ ಕೆಲವರ ಗುತ್ತಿಗೆಯಾಗಿತ್ತು. ಈಗ ಜ್ಞಾನಸಂಚಯ ಜನರಿಗೆ ಲಭ್ಯವಾಗದಂತೆ ಪುಸ್ತಕ ಶತ್ರುಗಳು ಕಾಯುಕ ನಡೆಸಿದ್ದಾರೆ. ಆಗಲೇ ಹೇಳಿದ್ದೇನೆ, ಈ ವಿಷಯ ಯೋಚಿಸಿದಷ್ಟೂ ಖಿನ್ನನಾಗು ತ್ತೇನೆ. ನಿರಾಶಾದಾಯಕ ವಾತಾವರಣ. ಆದರೂ ನಮ್ಮ ತರುಣ ಬರೆಹ ಗಾರರು ಏನನ್ನಾದರೂ ಮಾಡಬೇಕು. ಮಾಡಲೇ ಬೇಕು."

ವಿಶ್ವದ ಬೇರಾವುದೇ ಭಾಷೆಯ ಶ್ರೇಷ್ಠ ಸಾಹಿತ್ಯ ಕೃತಿಗಳೊಂದಿಗೆ ಸರಿಮಿಗಿಲೆನಿಸಿ ಪ್ರತಿನಿಧಿಸಬಲ್ಲ ಸಾಮರ್ಥ್ಯ ಪಡೆದಿರುವ ಹಲವಾರು ಶ್ರೇಷ್ಠ ಕೃತಿಗಳು ಕನ್ನಡದಲ್ಲಿದ್ದರೂ ಅವುಗಳ ಅನುವಾದ ಕಾರ್ಯಕ್ಕೆ ಸೂಕ್ತ ವಾತಾವರಣವಿಲ್ಲದಿರುವುದು ಒಂದು ದೌರ್ಭಾಗ್ಯವಾಗಿದೆ. ಇದರ ನಿವಾರಣೆಗೆ ನಿಮ್ಮ ಸಲಹೆ ಏನು?

"ವಿಶ್ವದ ಶ್ರೇಷ್ಠ ಕೃತಿಗಳ ಕನ್ನಡಾನುವಾದಗಳು ನಮ್ಮ ಜನರಿಗೆ ದೊರೆ ಯುವಂತೆ ಮಾಡುವುದು ನಮ್ಮ ಮೊದಲ ಕೆಲಸ. ಇತರ ದೇಶಗಳಲ್ಲೂ ಅಂಥ ಹಂಬಲವಿದ್ದರೆ ಶ್ರೇಷ್ಠ ಭಾರತೀಯ ಸಾಹಿತ್ಯವನ್ನು ಹುಡುಕಿಕೊಂಡು ಅವರು ಬರುತ್ತಾರೆ. ಆಗ ಕನ್ನಡವನ್ನು ಆ ಜನ ಕಾಣುವಂತಾಗಬೇಕು. ಇತರರ ಕಣ್ಣಿಗೆ ಬೀಳಲು ಅನುಕೂಲವಾಗುವಂತೆ ಹತ್ತಿಪ್ಪತ್ತು ಕೃತಿಗಳನ್ನು (ಕಾವ್ಯ

ಬರಿ, ನಾಟಕ, ಕವಿತಾ ಸಂಗ್ರಹ, ಕಥಾಸಂಗ್ರಹ) ಮೊದಲು ಇಂಗ್ಲಿಷಿಗೆ ಅನುವಾದಿಸಬೇಕು. ಆದರೆ ಇದು ಕಷ್ಟದ ಕಲೆ. ಬರಿಯ ಭಾಷಾಜ್ಞಾನ ದಿಂದ ಆಗುವುದಿಲ್ಲ. ಪ್ರಕಟಣೆಗೆ ಭಾರಿ ಬಂಡವಾಳವೂ ಬೇಕು. ಸಂಘ ಸಂಸ್ಥೆಗಳು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಬಹುದು. ಖಾಸಗಿ ಪ್ರಕಾಶ ಕರೂ ಬರಬಹುದು. ಆದರೆ ಕೇವಲ ಅವರಿಂದ ಮಾತ್ರ ಈ ಕೆಲಸ ಆಗದು. ಇಲ್ಲಿಯೂ ಮಾರುಕಟ್ಟೆಯ ಪ್ರಶ್ನೆ ಬೃಹದಾಕಾರ ತಳೆಯುತ್ತದೆ."

* *

ಇಲ್ಲಿಗೆ ನನ್ನ ಉದ್ದೇಶಿತ ಪ್ರಶ್ನೆಗಳು ಮುಕ್ತಾಯವಾದವು. ಈಗ ನಗರ ದಲ್ಲಿ ಬೇಸಿಗೆಯ ಧಗೆ ರಾತ್ರಿಯಾದರೂ ತಪ್ಪಿದ್ದೇನಲ್ಲ. ಸಂದರ್ಶನಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು ನಡೆದದ್ದು ರಾತ್ರಿಯ ವೇಳೆಯಾದರೂ, ಪ್ರಶ್ನೋತ್ತರಗಾರರಿಬ್ಬರಿಗೂ ಸೆಖೆಯಿಂದ ಮುಖದಲ್ಲಿ ಬೆವರು ಹನಿಯತೊಡ ಗಿತ್ತು. ಮುಖ ಒರೆಸಿಕೊಂಡು ಪ್ರಶ್ನೋತ್ತರಗಳ ಹಾಳೆಯನ್ನು ಜೋಡಿ ಸುವ ವೇಳೆಗೆ, ತೇಜಸ್ವಿನಿ ನಿರಂಜನ ತಂದಿರಿಸಿದ ತಂಪು ಪಾನೀಯವು ಮೇಜಿನ ಮೇಲೆ ಕಾದಿತ್ತು. ಹಿತಕರವಾದ ನಿಂಬೆ ಹಣ್ಣಿನ ಪಾನಕದ ಸೇವನೆಯೊಂದಿಗೆ, ಸಾಹಿತ್ಯ ಹಾಗೂ ಸಾಹಿತಿಗಳಿಗೆ ಸಂಬಂಧಿಸಿದ ಮಾತು ಸಾಗಿತು.

ಸಾಹಿತ್ಯ ಹಾಗೂ ಸಾಹಿತಿಯನ್ನು ಗೌರವಿಸುವ ದಿಸೆಯಲ್ಲಿ ಇಂದಿನ ಪ್ರಭುತ್ವ ಕೂಡ ಸಾಕಷ್ಟು ಗಮನ ಹರಿಸಿ, ಉತ್ತಮ ಸಾಹಿತ್ಯ ಕೃತಿಗಳಿಗೆ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಪುರಸ್ಕಾರಗಳನ್ನು ನೀಡುವ ಪದ್ಧತಿ ಯನ್ನನುಸರಿಸುತ್ತಿರುವುದು ಸರ್ವ ವೇದ್ಯ. ಇಂಥ ಪುರಸ್ಕಾರಗಳ ಆಯ್ಕೆಯಲ್ಲಿ ಅನುಸರಿಸಲ್ಪಡುವ ತಂತ್ರ–ಪ್ರತಿತಂತ್ರಗಳ ಹಾವಳಿ ಏನೇ ಇರಲಿ ಪ್ರತಿ ವರ್ಷವೂ ಕೆಲವರಾದರೂ ಅರ್ಹ ವ್ಯಕ್ತಿಗಳು ಇಂಥ ಪ್ರಶಸ್ತಿ ಪಡೆಯುತ್ತಿರು ವುದು ಸರಿಯಷ್ಟೆ. ಎಲ್ಲ ವಿಚಾರಗಳಲ್ಲೂ ಪ್ರಗತಿಶೀಲ ಭಾವನೆಗಳನ್ನೇ ಬೆಳೆಸಿ ಕೊಂಡಿರುವ ನಿರಂಜನರು ಇಂಥ ಪ್ರಶಸ್ತಿಗಳ ವಿಚಾರದಲ್ಲೂ ತಮ್ಮದೇ ಆದ ದೃಷ್ಟಿಕೋನವನ್ನು ಹೊಂದಿದ್ದಾರೆ.

"ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಹಿತ್ಯ ಕೃತಿಗಳನ್ನು ಗೌರವಿಸುವ ದಿಸೆಯಲ್ಲಿ, ಆಯ್ಕೆಮಾಡಲ್ಪಟ್ಟ ಸಾಹಿತ್ಯ ಕೃತಿಗಳ ಕರ್ತೃಗಳಿಗೆ

ಸಾವಿರ, ಎರಡು ಸಾವಿರ ಅಥವಾ ಐದು ಸಾವಿರ ರೂಪಾಯಿಗಳ ನಗದು ಹಣ ಕೊಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಈ ಪದ್ಧತಿಯನ್ನು ಬದ ಲಾಯಿಸಿ ಪ್ರಶಸ್ತಿಗೆ ಆಯ್ಕೆಯಾದ ಕೃತಿಯನ್ನು ಎಲ್ಲಾ ಭಾರತೀಯ ಭಾಷೆ ಗಳಿಗೆ ಹಾಗೂ ಇಂಗ್ಲಿಷಿಗೆ ಅನುವಾದ ಮಾಡಿಸಿ ಪ್ರಕಟಿಸುವ ಪದ್ಧತಿಯನ್ನು ಅನುಸರಿಸಿದರೆ, ಭಾರತೀಯ ಸಾಹಿತ್ಯ ಪ್ರಚಾರದಲ್ಲಿ ಒಂದು ಮಹತ್ತ್ವರ ಸೇವೆ ಸಲ್ಲಿಸಿದಂತಾಗುತ್ತದೆ. ಆದರೊಂದಿಗೇ, ಸಾಹಿತಿಗಳಿಗೂ ಹೆಚ್ಚಿನ ಉಪ ಯೋಗವಾಗುತ್ತದೆ" ಎನ್ನುವ ನಿರಂಜನರು "ಈ ಬಗ್ಗೆ ವಿಚಾರಶೀಲರಾದ ಬರೆಹಗಾರರು ಸಾಕಷ್ಟು ಗಮನ ಹರಿಸಬೇಕು"–ಎನ್ನುತ್ತಾರೆ.

ವಿಷಯಗಳ ವ್ಯಾಪ್ತಿ ಹೆಚ್ಚಿದಂತೆಲ್ಲ ಮಾತಿನ ಲಹರಿಯೂ ವಿಸ್ತಾರ ವಾಗುತ್ತಿತ್ತು. ಮಾತಿನಲ್ಲಿ ಕಾಲ ಸರಿದದ್ದೇ ತಿಳಿದಿರಲಿಲ್ಲ !

ಆಗಲೇ ಒಂಭತ್ತೂವರೆಯಾಗಿತ್ತು. ಜಯನಗರದ ಐದನೇ ವಿಭಾಗದ ಆ ತುದಿಯಿಂದ ಶಂಕರಪುರದ ಈ ತುದಿಯವರೆಗೂ ಪ್ರಯಾಣಮಾಡಬೇಕಾದ ವಿಚಾರವನ್ನು ನೆನಪು ಮಾಡಿಕೊಂಡು, ನಿರಂಜನ ದಂಪತಿಗಳಿಗೆ ವಂದಿಸಿ ಅವರಿಂದ ಬೀಳ್ಕೊಂಡು ಹೊರಟಾಗ– 'ಉದಯೋನ್ಮುಖ ಬರಹಗಾರರ ಕೃತಿಗಳ ಮಾರಾಟ ; ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿ ವಿತರಣೆಯ ಬಗ್ಗೆ ಅವರು ಸೂಚಿಸಿದ ಸಲಹೆ ಮುಂತಾದ ವಿಚಾರಗಳೇ ತಲೆಯಲ್ಲಿ ತುಂಬಿದ್ದುವು.

೧೯೭೬

'ಧ್ರುವ' ೧೯೭೬ರಲ್ಲಿ ಆರಂಭವಾದ ಮೇಲ್ಮಟ್ಟದ ಮಾಸಪತ್ರಿಕೆ. ಆ ಸಾಹಸಕ್ಕೆ ಕೈ ಇಕ್ಕಿದ್ದು ಸದಭಿರುಚಿಯ ಸಾಹಿತ್ಯಾಸಕ್ತ ಗೆಳೆಯರ ಬಳಗ ಆ ಬಂಡವಾಳ ಸಾಕೆ ಈ ಸ್ಪರ್ಧಾಯುಗದಲ್ಲಿ? 'ಧ್ರುವ' ಹೆಸರು ಹೊತ್ತ ಮಾತ್ರಕ್ಕೆ ಅದು ಸದಾಕಾಲ ಇರಲೇಬೇಕೆ ? ಪತ್ರಿಕೆ ಅಲ್ಪಾಯುಷಾಯಿತು.

ಸಂದರ್ಶಿಸಿದವರು ಧ್ರುವ ಸಂಪಾದಕೀಯ ಪ್ರಮುಖ 'ಸುಧಾರ್ಥಿ' (ಕೆ. ಆರ್. ಶಂಕರನಾರಾಯಣ). ಸುಧಾರ್ಥಿ ಈಚಿನ ವರ್ಷಗಳಲ್ಲಿ ಸೃಜನ ಶೀಲ ಲೇಖಕರಾಗಿ (ಕಾದಂಬರಿ), ವೈಚಾರಿಕ ಕೃತಿಗಳ ರಚಯಿತರಾಗಿ, ವಿಮರ್ಶಕರಾಗಿ, ಬರೆವಣಿಗೆ ಮುಂದುವರಿಸಿದ್ದಾರೆ

ಸಂಪಾದಕರು: ಎಂ.ನಾಗರಾಜ್. ಪ್ರಕಟಣೆ ಜೂನ್ ತಿಂಗಳ ಸಂಚಿಕೆಯಲ್ಲಿ.

–ನಿ.

'ಸಾಹಿತಿ ರಾಜಕೀಯ ಪಕ್ಷದ ಸದಸ್ಯನಾದರೂ ತಪ್ಪಿಲ್ಲ'

ಬರಗೂರು ರಾಮಚಂದ್ರಪ್ಪ

ಖ್ಯಾತ ಸಾಹಿತಿ ನಿರಂಜನ ಅವರೊಂದಿಗೆ ಮಾತಿಗೆ ಕೂರುವುದೇ ಒಂದು ಸಂತೋಷದ ವಿಷಯ. ಇದು ಉಪಚಾರದ ಮಾತಲ್ಲ. ಹಿಂದೆ ಕಮ್ಯೂನಿಸ್ಟ್ ಚಳವಳಿಯಲ್ಲಿ ಭಾಗವಹಿಸಿ, ಭೂಗತ ಚಟುವಟಿಕೆಗಳಲ್ಲಿ ನಿರತರಾಗಿದ್ದ ಸಾಹಿತಿ ಇವರು. ಇಂಥ ಕಾರಣಗಳಿಗಾಗಿಯೇ ಅವರ ಬಾಯಿಂದ ಬರುವ ಅಂಥ ಅನುಭವಗಳನ್ನು ಕೇಳುವುದು ಸಂತೋಷಕರ ವಿಷಯ. ನಾನು ಸಂದರ್ಶನಕ್ಕೆಂದು ಹೋದಾಗ ಮೊದಲು ಕೆದಕಿದ್ದು ಈ ಅನುಭವಗಳ ಸಾರವನ್ನೇ. ನಿರಂಜನ ಅವರು ಅತ್ಯಂತ ದೀರ್ಘವಾಗಿಯೇ ಅದನ್ನು ಪ್ರತಿಪಾದಿಸಿದರು. ಮಹಾತ್ಮ ಗಾಂಧೀಕಿ ಜೈ, ಭಾರತ ಮಾತಾಕೀ ಜೈ ಎಂಬ ಘೋಷಣೆಗಳಿಂದ 'ಇಂಕ್ವಿಲಾಬ್ ಜಿಂದಾಬಾದ್'ವರೆಗೆ ಪಯಣಿಸಿದ ರೀತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ನಮ್ಮ ಚರ್ಚೆ ಸಹಜವಾಗಿ ಸಾಹಿತಿ, ಸಮಾಜ, ರಾಜಕಾರಣ–ಇಂಥ ವಿಷಯಗಳನ್ನೇ ಕೇಂದ್ರವಾಗಿಟ್ಟುಕೊಂಡಿತು. ಬಂಡಾಯ ಸಾಹಿತ್ಯ ಚಳವಳಿಯಲ್ಲಿ ತೊಡಗಿರುವ ನಮ್ಮಂಥವರು ಎದುರಿಸುತ್ತಿರುವ ಸಮಸ್ಯೆಗಳು ಕೆಲವಿವೆ. ಈ ಚಳವಳಿಗೆ ಬಹುಪಾಲು ಯುವಪೀಳಿಗೆ ನಿಷ್ಠಾವಂತ ಬೆಂಬಲ ಸೂಚಿಸಿರುವಾಗ ಒಂದು ವಲಯದಲ್ಲಿ ಅಸಹನೆಯೂ ಇದೆ. ಇದರ ನೆನಪಿನೊಂದಿಗೆ ನಾನು ಪ್ರಗತಿಯ ಚಳವಳಿಯ ನೆನಪನ್ನು ಕೆದಕಿದೆ.

ನಾನು : ನಿರಂಜನ ಅವರೆ, ಪ್ರಗತಿಶೀಲ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಸಾಹಿತ್ಯ ವಲಯದ, ನಿಮ್ಮ ಸರೀಕರ ಪ್ರತಿಕ್ರಿಯೆ ಹೇಗಿತ್ತು ?

ನಿರಂಜನ : ಉತ್ಸಾಹ, ವಿರೋಧ ಎರಡೂ ಇದ್ದುವು. ಶಿವರಾಮ ಕಾರಂತರಂಥವರೂ ಸೇರಿ ವಿರೋಧಿಸಿದ್ದು ಮುಖ್ಯವಾಗಿ ಅದು ಕಮ್ಯೂನಿಸ್ಟ್ ಚಳವಳಿ ಅನ್ನೋ ಕಾರಣಕ್ಕೆ. ಆದರೂ ಇದರಲ್ಲಿ ನೇರವಾಗಿ ಪಾಲ್ಗೊಂಡವರಲ್ಲದೆ ಬೇರೆಯವರ ಮೇಲೂ ಈ ಚಳವಳಿ ಪ್ರಭಾವ ಬೀರಿತ್ತು. ಒಟ್ಟಿನಲ್ಲಿ ಹೇಳೋದಾದ್ರೆ ಯುವ ಪೀಳಿಗೇಲಿ ಸದಭಿಪ್ರಾಯ; ಆ ಬಗ್ಗೆ ಉತ್ಸಾಹ. ಹಿರಿಯ ಪೀಳಿಗೇಲಿ ಆ ಬಗ್ಗೆ ಸ್ವಲ್ಪ ಶಂಕೆ. ಇನ್ನು ಮಧ್ಯಸ್ಥಿತೀಲಿ ನಿಂತಿರೋರೂ ಇದ್ದರು. ಒಂದು ಚಳವಳಿಯಾಗಿ ರೂಪುಗೊಂಡರೆ ತಾವೂ ಅಲ್ಲಿರೋಣ ಅಂತ ಕಾಯೊ ಜನ ಇಂಥವರು. ಈ ರೀತಿಯ ಜನ ಯಾವಾಗ್ಲೂ ಇರ್ತಾರೆ.

ನಾನು : ನೀವು ಹಿಂದೆ ರಾಜಕೀಯ ಪಕ್ಷವೊಂದರಲ್ಲಿ ಇದ್ದವರು. ಆ ದೃಷ್ಟಿಯಿಂದ ಒಂದು ಪ್ರಶ್ನೆ—ರಾಜಕೀಯ ಪಕ್ಷದ ಜೊತೆ ಸಂಬಂಧ ಇಟ್ಕೊಂಡಿದ್ದರೆ ಅಥವಾ ರಾಜಕೀಯ ತತ್ವಕ್ಕೆ ಬದ್ಧವಾಗಿದ್ದರೆ ಅಂಥವರಿಂದ ಉತ್ತಮ ಕಲಾಕೃತಿಯ ರಚನೆ ಸಾಧ್ಯವಾಗೊಲ್ಲವೇನೊ ಅನ್ನೊ ಥರಾ ಅಭಿಪ್ರಾಯವೊಂದು ಅಲ್ಲಲ್ಲಿ ಇದೆ. ಈಗಲೂ ಇಂಥವರನ್ನು ಗುಮಾನಿಯಿಂದಲೇ ನೋಡ್ತಾರೆ ಕೆಲವರು. ಈ ಬಗ್ಗೆ ನಿಮ್ಮ ಅಭಿಪ್ರಾಯ ?

ನಿರಂಜನ : ಸಾಹಿತಿ ರಾಜಕೀಯ ಪಕ್ಷದ ಸದಸ್ಯನಾದರೂ ತಪ್ಪಿಲ್ಲ ಅನ್ನೋನು ನಾನು. ಅದು ಸೃಜನಶೀಲ ಕ್ರಿಯೆಗೆ ಯಾವತ್ತೂ ಒಂದು ಮಿತಿ ಆಗೊಲ್ಲ....

ನಾನು : ಅದರ ಬದಲು ಅನುಭವದ ವಿಸ್ತರಣೆ ಆಗುತ್ತೆ ಅನ್ನಬಹುದೆ?

ನಿರಂಜನ : ಹೌದೌದು. ರಾಜಕೀಯಕ್ಕೂ ನಮಗೂ ಪ್ರತಿದಿನವೂ ಸಂಬಂಧ ಇರ್ಬೇಕು. ರಾಜಕೀಯ ಪಕ್ಷದಲ್ಲಿದ್ರೆ ಒಂದೇನಾಗಬಹುದು ಅಂದ್ರೆ ಬರವಣಿಗೆಗೆ ಸಾಕಷ್ಟು ಸಮಯ ಸಿಕ್ಕದೆ ಇರಬಹುದು. ಆದರೆ ಬರೆದ ಕೃತಿ ಕಲಾತ್ಮಕವಾಗೊಲ್ಲ, ಸೃಜನಶೀಲವಾಗೊಲ್ಲ ಅಂತ ನಾನು ಹೇಳಲಾರೆ.

ನಾನು : ರಾಜಕೀಯ ಪಕ್ಷದ ಸಂಬಂಧ ಇಟ್ಕೊಂಡಿರೋರೆ ಸಾಹಿತ್ಯ ಸಂಘಟನೆಯಲ್ಲೂ ಕೆಲ್ಸ ಮಾಡ್ತಿದ್ರೆ ಅಂಥವರ ಪಾತ್ರ ಹೇಗಿರ್ಬೇಕು ಅಂತ ಹೇಳ್ತೀರಿ ನೀವು ?

ನಿರಂಜನ : ಇಂಥವರು ಸಾಹಿತ್ಯ ಸಂಘಟನೇಲಿ ಸಾಕಷ್ಟು ಎಚ್ಚರ ದಿಂದಿರ್ಬೇಕು. ರಾಜಕೀಯ ಪಕ್ಷದ ದಿನ ನಿತ್ಯದ ಧೋರಣೆಗಳನ್ನು ಇಲ್ಲಿ ತರೋಕೆ ಪ್ರಯತ್ನ ಪಟ್ಟು resolution ಮಟ್ಟದಲ್ಲಿ ತೃಪ್ತರಾಗಿ ಸಾಹಿತ್ಯ ಸಂಘಟನೆಯ ಮೂಲಭೂತ ವಿಚಾರಗಳನ್ನು ಮರೆತರೆ, ಅಂಥ ಸಂಘಟನೆ ಒಡೆಯುತ್ತೆ. ಪಕ್ಷ ಆಗಿಂದಾಗ್ಗೆ ತನ್ನ ತಂತ್ರಗಳನ್ನು ಬದಲಾಯಿಸುತ್ತೆ. ಆಗೆಲ್ಲ ಸಾಹಿತ್ಯ ಸಂಘಟನೇಲೂ ಬದಲಾಯಿಸೋಕೆ ಹೋದ್ರೆ ನಗೆಗೀಡಾಗೋ ಸಂಭವವೂ ಇದೆ. ಇದನ್ನೆಲ್ಲ ತಪ್ಪಿಸಬೇಕು. ಸಾಹಿತ್ಯ ಸಂಘಟನೆಯ ಇತರರಿಗಿಂತ, ರಾಜಕೀಯ ಪಕ್ಷದ ಸದಸ್ಯನಾಗಿದ್ದು ಇಲ್ಲೂ ಸದಸ್ಯನಾಗಿ ರೋನು ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಬೇಕು.

ನಾನು : ಸಾಹಿತಿಯೊಬ್ಬ ಜನಪರವಾದ ಯಾವುದೇ ಹೋರಾಟಗಳ ಜೊತೆ ಸಂಬಂಧ ಇಟ್ಕೊಳ್ಳೋದರ ಬಗ್ಗೆ....

ನಿರಂಜನ : ಅದು ಬಹಳ ಅಗತ್ಯ.

ನಾನು : ಅದರಿಂದ ಹೊಸ ಅನುಭವ, ಹೊಸ ಧೋರಣೆ, ಹೊಸ ವಸ್ತು, ಒಟ್ಟಿನಲ್ಲಿ ಹೊಸ ರೀತಿಯ ಕಲಾಕೃತಿ ಸಾಧ್ಯ, ಅಲ್ಲವೆ ?

ನಿರಂಜನ : ಖಂಡಿತ. ನಾನು ಒಮ್ಮೆ ಪತ್ರಿಕೋದ್ಯೋಗಿಯಾಗಿದ್ದಾಗ ಒಂದು ಸಂಜೆ ಒಂದು ಕಾರ್ಮಿಕ ಮೆರವಣಿಗೇಲಿ ಭಾಗವಹಿಸಿದೆ. ಅದಾದ ಮೇಲೆ ಒಳಗಿನ ಒತ್ತಡ ತಡೀಲಾರ್ದೆ 'ಏಕ ಪ್ರವಾಹ' ಅಂತ ಕತೆ ಬರೆದೆ. ಮಧ್ಯಮ ವರ್ಗದ ಲೇಖಕನೊಬ್ಬ ಸಮೂಹ ಚಳವಳಿಯ ಭಾಗವಾಗುವ ಕತೆ ಅದು. ನಿಮ್ಮ ಮಾತಿನ ಸಮರ್ಥನೆಗೆ ಈ ವಿಷಯ ಹೇಳಿದೆ; ಅಷ್ಟೆ.

ನಾನು : ಈಗ್ಗೆ ಕೆಲವು ವರ್ಷದಿಂದ ನಮ್ಮಲ್ಲಿ ಹೆಚ್ಚು ಕೇಳಿ ಬರ್ತಿರೊ ಕಮಿಟ್‌ಮೆಂಟ್ ಬಗ್ಗೆ ಕೇಳ್ಬೇಕಾಗಿದೆ. ನನ್ನ ದೃಷ್ಟೀಲಿ–ವಿಶಾಲಾರ್ಥ ದಲ್ಲಿ ಹೇಳೋದಾದ್ರೆ–ಕಮಿಟ್‌ಮೆಂಟ್ ಅಂದ್ರೆ ಬದುಕನ್ನು ಕುರಿತ ನಿರ್ದಿಷ್ಟ ವಿಚಾರ ಧಾರೆಯನ್ನು ರೂಪಿಸಿಕೊಳ್ಳೋದು, ಬದ್ಧವಾ ಗೋದು. ಇದನ್ನು ಸಹ ಅನುಮಾನದಿಂದ, ಕೆಲವು ಸಾರಿ ಲಘುವಾಗಿ

ನೋಡ್ತಾರೆ ಕೆಲವರು. ಈ ಬಗ್ಗೆ ಅಂದರೆ ಸಾಹಿತ್ಯದಲ್ಲಿ ಕಮಿಟ್
ಮೆಂಟ್ ಅನ್ನೋ ಪರಿಕಲ್ಪನೆ ಬಗ್ಗೆ ನಿಮಗೇನನ್ನಿಸುತ್ತೆ?

ನಿರಂಜನ: ನನ್ನ ನಿಷ್ಠೆ ಬದುಕಿಗೇ ಅಂತ ಹೇಳ್ತಾ ಬಂದಿದ್ದೇನೆ.

ನಾನು: ಅದ್ಸರಿ; ಬದುಕು ಅಂದ್ರೆ ಎಂಥ ಬದುಕು? ಈಗ ಕಮಿಟ್
ಮೆಂಟ್ ವಿರೋಧಿಸೋರೂ ಬದುಕಿನ ಬಗ್ಗೇನೆ ಬಹಳ ಮಾತಾಡ್ತಾರೆ

ನಿರಂಜನ: ನಾನು ಹೇಳೋ ಬದುಕಿನಲ್ಲಿ ದೀನದಲಿತರ ಹೋರಾಟ
ಇದೆ. ಜಾತಿ ಕಲಹ ಇದೆ. ವರ್ಗ ಹೋರಾಟ ಇದೆ. ಸಮಗ್ರ
ಬದುಕಿನ ನೋವು ನಲಿವು ಇದೆ. ಇದೆಲ್ಲವನ್ನು ಒಳಗೊಂಡ ಬದುಕಿಗೆ
ನನ್ನ ಕಮಿಟ್‌ಮೆಂಟ್. ನಾನು ಇದ್ಯಾವುದರಿಂದಲೂ ಹಾಹಿರನಲ್ಲ
ಯಾವುದನ್ನೂ ಬಿಟ್ಟು ನಾನು ಹೊರಗಿರಲಾರೆ. ನೋಡಿ, ರಾಜಕೀಯ ಪಕ್ಷದ
ಮಾತು ಬಂತು. ಸಾಹಿತಿ ಪಕ್ಷದಲ್ಲಿ ಇದ್ದೇ ಹೋದ್ರೂ ಜನರ ಜೊತೆ ಸಾವ
ರಸ್ಯ ಪಡೀಬೇಕು; ಜನಪರವಾದ ಮೆರವಣಿಗೆಗಳಲ್ಲಿ ಭಾಗವಹಿಸಬಹುದು.
ಅದರಿಂದ ಪ್ರೇರಿತನಾಗಬಹುದು. ಈಗ ನೋಡಿ ನೀವೆಲ್ಲ ತಾತಗುಣಿ
ಎಸ್ಟೇಟ್ ಕಾರ್ಮಿಕರ ಬಗ್ಗೆ ಮಾಡಿದ್ರಲ್ಲ, ಅದು ನನಗೆ ತುಂಬಾ ಇಷ್ಟ
ವಾದಂಥ ವಿಷಯಗಳಲ್ಲಿ ಒಂದು. ಅಂಥ ಪ್ರತಿಗಾಮಿ ಶಕ್ತಿಗಳ ವಿರುದ್ಧ ನೀವು
ನಿಂತದ್ದು ತುಂಬಾ ಸಂತೋಷದ ವಿಷಯ. ಇಂಥವುಗಳ ಜೊತೆಗಿನ
ಸಂಬಂಧದ ಅನುಭವ ಲೇಖಕನ ಒಳ ಪ್ರಜ್ಞೆಗೆ ಇಳಿದು ಹೊರ ಬರೋದಕ್ಕೆ
ಕಾಲ ಬೇಕು; ಅಷ್ಟೆ. ಮುಂದೆ ತಾತಗುಣಿಯಂಥ ಪರಿಸರದ ಪ್ರೇರಣೆಯಿಂದ
ಮಹಾ ಪಾತ್ರಗಳೇ ಸೃಷ್ಟಿಯಾಗಬಹುದು.

ಹೀಗೆ ದೀರ್ಘವಾಗಿ ಪ್ರಸ್ತಾಪಿಸಿದ ನಿರಂಜನ ಅವರ ಮಾತುಗಳಲ್ಲಿ ಜನ
ಪರವಾದ ಕಮಿಟ್‌ಮೆಂಟ್‌ನ ಸಾಧ್ಯತೆಗಳನ್ನು ಹೇಳುವ ತವಕ ಇತ್ತು.
ಕಡೆಗೆ ಅವರು ಖಂಡಿತವಾಗಿ ಒಂದು ಮಾತು ಹೇಳಿದರು:

"ಜನಪರ ಹೋರಾಟಗಳಿಂದ ದೂರವಾಗಿದ್ರೆ ಲೇಖಕನಿಗೇ ನಷ್ಟ." —
ಅಷ್ಟೇ ಅಲ್ಲ "ಒಂದು ನಿಲುವು ಇಲ್ಲದೆ ಬರವಣಿಗೆ ಮಾಡೋಕೆ ಆಗೋದ
ಇಲ್ಲ" ಎಂದು ಖಚಿತವಾಗಿ ನುಡಿದರು. ಅಂದರೆ ಲೇಖಕನಿಗೆ ಬದುಕನ್ನು
ಕುರಿತಂತೆ ನಿರ್ದಿಷ್ಟ ನಿಲುವು ಅಗತ್ಯ; ಅನಿವಾರ್ಯ ಎಂಬ ಅಭಿಪ್ರಾಯ ಅವರ
ಮಾತುಗಳಲ್ಲಿ ವ್ಯಕ್ತವಾಯಿತು. ಅವರು ತಾತಗುಣಿ ಎಸ್ಟೇಟ್ ಕಾರ್ಮಿಕ

ಬಗ್ಗೆ ಸಾಹಿತಿ, ಕಲಾವಿದರ ಪೂರಕ ಹೋರಾಟವನ್ನು ಪ್ರಸ್ತಾಪಿಸಿದಾಗ ನನ್ನಲ್ಲಿ ಇದೊಂದು ಪ್ರಶ್ನೆ ಎದ್ದಿತ್ತು. ಇಂಥ ಚಟುವಟಿಕೆಗಳಲ್ಲಿ ಮಗ್ನವಾಗಿದ್ದರೆ ಅಥವಾ ಹೆಚ್ಚು ಈ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಇದ್ರೆ 'ಅಸಾಹಿತ್ಯಕ' ಅನ್ನೊ ಹಣೆಪಟ್ಟಿ ಅಂಟಿಸೊ ಪ್ರಯತ್ನ ನಡೀತಿರೋದುಂಟು. ಈ ಬಗ್ಗೆ ನಿರಂಜನರು ಏನು ಹೇಳಬಹುದು ಅನ್ನೊ ಕುತೂಹಲದಿಂದ ಕೇಳಿದೆ. ತಕ್ಷಣ ಅವರು "ಇದು ಒಂದು ಬಗೆಯ ಕಮ್ಯೂನಿಸ್ಟ್ ವಿರೋಧ" ಎಂದರು. ಅಸಾಹಿತ್ಯಕ ಅನ್ನೋ ಮಾತು ಮುಖ್ಯವಾಗಿ 'ಬಂಡಾಯ ಸಾಹಿತ್ಯ ಚಳವಳಿಯನ್ನು' ಕುರಿತದ್ದು. ಆದ್ದರಿಂದ ನಾನೊಂದು ಸ್ಪಷ್ಟನೆ ನೀಡಿದೆ. "ನಮ್ಮಲ್ಲಿ ಕಮ್ಯೂನಿಸ್ಟರು (ಅಂದರೆ ಸಿ. ಪಿ. ಐ. ಮತ್ತು ಸಿ.ಪಿ.ಎಂ. ಒಲವಿನವರು) ಲೋಹಿಯಾವಾದಿಗಳು ಮತ್ತು ಯಾವುದೇ ನಿರ್ದಿಷ್ಟ ರಾಜಕೀಯ ತತ್ವಕ್ಕೆ ಬದ್ಧರಾಗದೆ, ಒಟ್ಟಾರೆ ಪ್ರಗತಿಪರ ಧೋರಣೆಯವರು ಇದ್ದಾರೆ. ಬಂಡಾಯ ಸಾಹಿತ್ಯ ಚಳವಳೀಲಿ ಇವರೆಲ್ಲ ಪ್ರಾಮಾಣಿಕ ನಿಷ್ಠೆ ಇಟ್ಕೊಂಡಿದ್ದಾರೆ. ಆದ್ದರಿಂದ ಅಸಾಹಿತ್ಯಕ ಅನ್ನೊ ಮಾತು ಈ ಎಲ್ಲರನ್ನೂ ಕುರಿತದ್ದು" ಎಂದು ವಿವರಿಸಿದೆ. ನನ್ನ ವಿವರಣೆಯನ್ನು ಒಪ್ಪಿಕೊಂಡು ನಿರಂಜನ ಉತ್ತರಿಸಿದರು:

ನಿರಂಜನ : ಈಗ ನೋಡಿ, ವೈದಿಕ ಧರ್ಮ ಪ್ರತಿಪಾದನೆ ಮಾಡ್ತೋರಿದ್ದಾರೆ. ಹಳೇ ಕಾಲದ ಸ್ಥಿತಿ ಮತ್ತು ಮೌಲ್ಯಗಳ ಪುನರುತ್ಥಾನ ಆಗ್ಬೇಕು ಅಂತ ಹೇಳ್ತೋರಿದ್ದಾರೆ. ಅವರನ್ನೂ ಅಸಾಹಿತ್ಯಕ ಅನ್ನಬಹುದಲ್ಲ? ಆದರೆ ಅವರು ಹಿರಿಯ ಸಾಹಿತಿಗಳು ಅಂತ ಮೆರವಣಿಗೆ ಮಾಡಿಸ್ಕೊಳ್ತಾರೆ. ಬೇರೆಯವರನ್ನ ಅಂದರೆ ಬಂಡಾಯ ಸಾಹಿತ್ಯದವರನ್ನ ಅಸಾಹಿತ್ಯಕರು ಅಂತ ಹೇಳ್ತಾರೆ. ಹೀಗೆಲ್ಲ ಮಾತಾಡ್ತೋರು ಬದುಕಿನಲ್ಲಿ ಒಂದು ಖಚಿತ ನಿಲುವನ್ನು ತಗೊಳ್ಳೋದಿಲ್ಲ. ಒಂದು ವೇಳೆ ತಗೊಂಡಿದ್ದರೆ ಅದು ಬಹು ಜನಸಮುದಾಯದ ವಿರುದ್ಧವಾಗಿರುತ್ತೆ. ಇನ್ನೊಂದು ಮಾತು ಹೇಳೋದಾದ್ರೆ ಈ ವೈದಿಕ ಧರ್ಮ ಪ್ರತಿಪಾದಕರು ಮತ್ತು ಪರಿಣಾಮದಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಅನುಕೂಲವಾಗೋರು ಇದಾರಲ್ಲ, ಅವರಿಗೆ ಒಂದು ನಿಲುವು ಇದೆ, ಇಲ್ಲ ಅಂತ ಹೇಳೋಕಾಗೋಲ್ಲ. ಬದುಕಿನ ಒಂದು ವಲಯದಲ್ಲಿ ಅವರಿದ್ದಾರೆ. ಇನ್ನೊಂದು ವಲಯದಲ್ಲಿ ಬಹು ದೊಡ್ಡ ಜನ ಸಮುದಾಯದ, ಅದರ

ಆಶಯಗಳ ಜೊತೆ ಬಂಡಾಯ ಸಾಹಿತಿಗಳಿದ್ದಾರೆ; ಪ್ರಗತಿಶೀಲರಿದ್ದಾರೆ– ಪ್ರಗತಿವಾದಿಗಳಿದ್ದಾರೆ. ಇವರು ಅಸಾಹಿತ್ಯಕ ಅಲ್ಲ. ಅವರನ್ನ ಅರಾಜಕೀಯ ಅಂತಲೂ ಕರಿಯೋಕಾಗದು. ಅವರದು ಬಹು ದೊಡ್ಡ ರಾಜಕೀಯ. ಅವರು ಅರಾಜಕೀಯರಲ್ಲ. ಇವರು ಅಸಾಹಿತ್ಯಕರಲ್ಲ. ಆದರೆ ಯಾವತ್ತಾದ್ರೂ ಒಂದು ಗೆರೆ ಎಳೀಬೇಕಾಗುತ್ತೆ. ಬದುಕಿನಲ್ಲಿ ಪ್ರತಿಯೊಬ್ಬ ಲೇಖಕನೂ ಒಂದಲ್ಲ ಒಂದು ನೆಲೆ ಸ್ವೀಕಾರ ಮಾಡ್ಲೇ ಬೇಕಾಗುತ್ತೆ. ಕೆಲವರೇನೋ ಕಡೇವರ್ಗೂ ಸ್ವೀಕಾರ ಮಾಡ್ದೆ ಇರಲೂಬಹುದು. ಸ... ಯಾದ ನೆಲೇನ ಸಾಹಿತಿ ಎಷ್ಟು ಬೇಗ ಸ್ವೀಕಾರ ಮಾಡ್ತಾನೊ ಅಷ್ಟು ಬೇಗ ಅವನಿಗೂ ಒಳ್ಳೇದು; ಜನಕ್ಕೂ ಒಳ್ಳೇದು.

ನಾನು : ಈ ಹಿನ್ನೆಲೇಲಿ ಸಾಹಿತ್ಯವನ್ನು ಕುರಿತ ಮಾನದಂಡಗಳ ಬಗ್ಗೆಯೇ ಪುನರಾಲೋಚನೆ ಮಾಡ್ಬೇಕಾಗುತ್ತೆ ಅನ್ಸುತ್ತೆ.

ನಿರಂಜನ : ಹೌದು, ಹಳೆಯ ಮಾನದಂಡಗಳಿಂದಲೆ ಎಲ್ಲಾನೂ ಅಳೆಯೋಕಾಗೊಲ್ಲ. ಈ ಸಂದರ್ಭದಲ್ಲಿ ವಿಮರ್ಶೆಯ ಮಾನದಂಡ ಜನತೆಯ ಹೋರಾಟಗಳ ಮಾನದಂಡವೂ ಆಗುತ್ತೆ; ಜನತೆಯ ಹೋರಾಟಗಳ ಬಗೆಗಿನ ಅಭಿಪ್ರಾಯವೂ ಅದರ ಒಂದಂಶವಾಗುತ್ತೆ. ಯಾರು ಜನಪರ ಹೋರಾಟಗಳಲ್ಲಿ ಭಾಗಿಗಳೊ, ಯಾರು ಅವುಗಳ ಜೊತೆ ಸಂಬಂಧ ಇಟ್ಕೊಂಡಿದ್ದಾರೊ, ಯಾರು ಜನಪರ ಆಶಯ ಹೊಂದಿದಾರೊ ಅಂಥ ಸಾಹಿತಿಗಳಿಂದ, ವಿಮರ್ಶಕರಿಂದ ಹೊಸ ಮಾನದಂಡಗಳ ಸೃಷ್ಟಿ ಸಾಧ್ಯ.

ನಾನು : ಅಂದರೆ ಇಲ್ಲಿ ಸಾಮಾಜಿಕ ಹೊಣೆಗಾರಿಕೆ ಮುಖ್ಯ ಅಂತ ತಿಳೀಬಹುದಲ್ಲವೆ ?

ನಿರಂಜನ : ಹೌದು ; ಸಾಮಾಜಿಕ ಹೊಣೆಗಾರಿಕೆ ಅನ್ನೋದು ಬದುಕಿನ ಬಗ್ಗೆ ಇರೊ ಕಮಿಟ್‌ಮೆಂಟ್‌ನಿಂದಲೇ ಬರುತ್ತೆ.

ನಾನು : ಸಮಾಜ, ಸಾಮಾಜಿಕ ಹೊಣೆಗಾರಿಕೆ ಅನ್ನೋದನ್ನ ವಿವರಿಸುತ್ತೀರಾ ?

ನಿರಂಜನ : ಸಾಮಾಜಿಕ ಹೊಣೆ ಅಂದ್ರೆ – ಸಾಮಾಜ ಅಂದ್ರೆ ಯಾವುದು ? ಸಮಾಜದಲ್ಲಿ ಎಷ್ಟೋ ಗುಂಪುಗಳಿವೆ: ಜಾತಿ ಬಣಗಳಿವೆ; ವರ್ಗಗಳಿವೆ. ಹೀಗಿರುವಾಗ ಇಲ್ಲಿ ಸಮಾಜ ಅನ್ನೋದನ್ನ ಎಲ್ಲರಿಗೂ

ಸೇರಿಸಿ ಒಟ್ಟಿಗೆ ಅನ್ವಯಿಸೋಕೆ ಆಗೋದಿಲ್ಲ. ಸಮಾಜದಲ್ಲಿ ಕೂಡ ನಾವು ಈ ವಿವಿಧ ಅಂಕಣಗಳಲ್ಲಿ ನಿಂತಿರ್ತೀವೆ; ನೋಡ್ತಿರ್ತೀವೆ. ಹೋರಾಟಗಳಲ್ಲಿ ಭಾಗಿಗಳಾಗ್ತಿರ್ತೀವೆ. ಆದ್ರಿಂದ ಸಮಾಜಕ್ಕೆ ಹೊಣೆಗಾರ ಅಂದ್ರೆ ಸಮಾಜದ ಯಾರಿಗೆ ಹೊಣೆಗಾರ? ಸಮಾಜದಲ್ಲಿ ಯಾರು ಇಲ್ಲದವರೊ ಯಾರು ದಲಿತರೊ ಯಾರು ಕಷ್ಟ ಪಡ್ತಾರೊ ಯಾರು ಹೋರಾಡ್ತಾರೊ....

ನಾನು : ಒಟ್ಟಿನಲ್ಲಿ ತುಳಿತಕ್ಕೊಳಪಟ್ಟೋರು-ಶೋಷಿತರು.

ನಿರಂಜನ : ಹೌದು. ಅಂಥವರ ಪರವಾಗಿ, ಒಳ್ಳೆಯ ಬದುಕಿಗೋಸ್ಕರ ಹೋರಾಡುವವರ ಪರವಾಗಿ, ನಿಲ್ಲಬೇಕಾಗುತ್ತೆ.

ಮಾತು ಮುಂದುವರಿದಂತೆ ಪರಂಪರೆ ಮತ್ತು ಸಮಕಾಲೀನತೆಯ ಮಾತು ಬಂತು. ಇಂದು ಸಾಹಿತ್ಯ, ರಂಗಭೂಮಿಗಳಲ್ಲಿ ಪ್ರಗತಿಪರ ಆಶಯಗಳನ್ನು ನೆಲೆಗೊಳಿಸುವ ಕ್ರಿಯೆಯಲ್ಲಿ ತೊಡಗಿರುವವರು ಯಾರೂ ಪರಂಪರೆಯ ಕುರಿತು ನಿರಾಕರಣೆ ಮಾಡಿಲ್ಲವೆಂಬ ಮಾತನ್ನು ನಾನು ಹೇಳಿದೆ. ಪ್ರಗತಿಪರ ಚಳವಳಿಗೆ ತನ್ನದೇ ಆದ ಪರಂಪರೆಯಿದೆ. ಅದು ನಮ್ಮ ಬೆಂಬಲಕ್ಕಿದೆ ಎಂದೆ. ಆಗ ಅವರ ಪ್ರತಿಕ್ರಿಯೆ ಹೀಗಿತ್ತು :

ನಿರಂಜನ : ಪರಂಪರೆ ಬಿಟ್ಬಿಡಿ ಅಂದ್ರೆ ಜನರ ಅರಿವನ್ನು ಬಿಟ್ಟಹಾಗೆ. ಇವತ್ತು ನಿಮ್ಮಂಥೋರು ನಡೆಸ್ತಿರೊ ಚಳವಳೀನೂ ಇಂಥ ಪರಂಪರೆಯೊಂದಿಗೆ ಸಂಬಂಧ ಇಟ್ಕೊಂಡಿದೆ ಅಂತ ನೀವೇ ಸ್ಪಷ್ಟಪಡಿಸಿದ್ದೀರಿ. ಇದನ್ನು ಅರ್ಥ ಮಾಡ್ಕೊಳ್ದೆ ಆರೋಪ ಮಾಡಿದ್ರೆ ಅಂಥವರಿಗೇ ನಷ್ಟ; ಅಷ್ಟೆ. ನನಗನ್ನಿಸುತ್ತೆ-ಆರಂಭದಿಂದ ಇಲ್ಲೀ ತನಕ ಹೊಸ ಧ್ವನಿ ಯಾವ್ಯಾವ ರೂಪದಲ್ಲಿ ಕೇಳಿಸಿದೆಯೊ ಅದೆಲ್ಲ ಕಲೆ ಹಾಕಿ ಇವತ್ತಿನ ಪೀಳಿಗೆಗೆ ಕೊಡಬೇಕು.

ಹೀಗೇ ಮಾತಾಡ್ತ ಬಂಡಾಯ ಸಾಹಿತ್ಯ ಚಳವಳಿಯನ್ನು ಸ್ವಘೋಷಿತ ನಿಲುವೆಂದು ಟೀಕಿಸಿದವರ ಬಗ್ಗೆಯೂ ಪ್ರಸ್ತಾಪ ಬಂತು. ಆಗಲೂ ನಿರಂಜನ ಅವರ ಅಭಿಪ್ರಾಯ ಖಚಿತವಾಗಿತ್ತು? ಪ್ರಗತಿಪರತೆಗೇ ಒಂದು ಪರಂಪರೆ ಇರುವಾಗ ಇದು ಹೇಗೆ ಸ್ವಘೋಷಿತವಾಗುತ್ತೆ. ಎಂದರು. ನಾನು ಐದಾರು ವರ್ಷಗಳಿಂದ ಕನ್ನಡ ಸಾಹಿತ್ಯದಲ್ಲಿ ನಡೆದ ಕೃಷಿಯನ್ನು ವಿವರಿಸಿ ಸಾಮಾಜಿಕ ಕಳಕಳಿಯ ಈ ಕೃಷಿಯಿಂದೇ ಬಂಡಾಯ ಸಾಹಿತ್ಯ ಚಳವಳಿಯ ಬೆನ್ನಿಗಿದೆಯೆಂದು ಸ್ಪಷ್ಟ ಪಡಿಸಿದೆ. ಮುಂದೆ ನನ್ನ ಪ್ರಶ್ನೆ ಅಭಿರುಚಿಗೆ ಸಂಬಂಧಿಸಿತ್ತು.

ನಾನು : ಉತ್ತಮ ಕಲಾಕೃತಿಗೂ (ಸಾಹಿತ್ಯ, ನಾಟಕ, ಸಿನಿಮಾ ಇತ್ಯಾದಿ) ಸಾಮಾನ್ಯ ಓದುಗ, ಪ್ರೇಕ್ಷಕರಿಗೂ ನಡುವೆ ಕಂದರ ಇ ಅನ್ನಿಸುತ್ತೆ, ಅನೇಕ ಸಾರಿ. ಇದಕ್ಕೆ ಅನೇಕರು ಜನರಲ್ಲಿ ಅಭಿರು ಇಲ್ಲ ಅಂತ ಆರೋಪಿಸುತ್ತಾರೆ. ಅಭಿರುಚಿಯ ನಿರ್ಮಾಣ ಕೇವ ವೈಯಕ್ತಿಕ ಒತ್ತಡದಲ್ಲೋ ಅಥವಾ ಸಾಮಾಜಿಕ ಪರಿಸರದಲ್ಲೇ ಉತ್ತಮ ಅಭಿರುಚಿಯ ನಿರ್ಮಾಣಕ್ಕೆ ತಕ್ಕ ಸಿದ್ಧತೆ ಆಗಿಲ್ಲವೋ?

ನಿರಂಜನ : ಜನರ ಅಭಿರುಚೀನ ಉದ್ದೇಶಪೂರ್ವಕವಾಗಿ ರೂಪಿಸ್ತಾ ಇರ್ತಾರೆ. ಯಾರು ಈ ಸಮಾಜಾನ ಹಿಡಿತದಲ್ಲಿಟ್ಟುಕೊಂಡಿದ್ದಾರೊ, ಇದ ರಿಂದ ಲಾಭ ಪಡೀತಾರೊ, ಶೋಷಣೆ ಮಾಡ್ತಾರೊ, ಅವರು ಮಾಡ್ತೀರೊ ಕೆಲ್ಸ ಇದು. ಜನರಿಗೆ ಅಭಿರುಚಿ ಇಲ್ಲ ಅಂತ ಹೇಳೋದು; ಕೀಳು ಕಾಮನೆ ಗಳಿಗೆ ಬೇಕಾದ್ದನ್ನ ಕೊಡೋದು. ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ನಡೀತ ಇರೋದು ಇದು. ನಮ್ಮಲ್ಲೂ ಕೂಡ ನಡೀತಿದೆ. ಇವತ್ತು ಬಂಡವಾಳಶಾಹಿ ಹೆಚ್ಚು ಶಕ್ತಿಶಾಲಿ ಆಗಿದೆ. ಸರ್ಕಾರವನ್ನೇ ನಡೆಸುತ್ತೆ ಬಂಡವಾಳಶಾಹಿ ಕಲೆ, ಪತ್ರಿಕೆ ಎಲ್ಲಾನೂ ಅಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತೆ. ಜನರ ಅಭಿರುಚೀನ ಕೀಳಾಗಿಡೋಕೆ ಪ್ರಯತ್ನವೇ ನಡೀತಿದೆ ಅನ್ನುತ್ತೆ ನನಗೆ.

ನಾನು : ಆದ್ದರಿಂದ ಜನಗಳ ಮೇಲೆ ಮಾತ್ರ ಆರೋಪ ಹೊರಿಸೋ ಹಾಗಿಲ್ಲ.

ನಿರಂಜನ : ಖಂಡಿತವಾಗಿ. ಉದಾಹರಣೆಗೆ ಸಿನಿಮಾ ಕತೆಗಳನ್ನು ಹೆಣೆಯೋ ಕಾರಸ್ಥಾನ ನೋಡಿ. ಈ ಊಟಕ್ಕಾಗಿ ಜನ ಓಡಿ ಬರೋ ಹಾ ಮಾಡ್ತಾರೆ. ಇದರ ಪರಿಣಾಮವಾಗಿ, ಜನ ಇನ್ನೇನೂ ಮಾಡದ ಹಾ ನಿಶ್ಚೇಷ್ಟಿತರಾಗಿ ಬೀಳೋ ಹಾಗೆ ಮಾಡ್ತಾರೆ.

ನಾನು : ಇವತ್ತಿನ ರಾಜಕೀಯ ವಿದ್ಯಮಾನಗಳ ಬಗ್ಗೆ ಏನನ್ನಿಸುತ್ತೆ?

ನಿರಂಜನ : ಮುಂದೆ ತುಂಬಾ ಕಷ್ಟದ ದಿನಗಳಿವೆ. ಅದಕ್ಕೆ ಸಂಬಂಧ ಪಟ್ಟ ಹಾಗೆ ಜನರ ಹೋರಾಟ ನಾನಾ ರೂಪ ಪಡೆಯುತ್ತೆ, ನಾನಾ ತಂತ್ರ ಗಳನ್ನು ರೂಪಿಸುತ್ತೆ. ಲೇಖಕ, ಕಲಾವಿದ, ಪೂರ್ಣ ಪ್ರಜ್ಞೆಯಿಂದ ಯಾ

ಜೊತೆ ಇರ್ಬೇಕು ಅನ್ನೋದನ್ನ ನಿರ್ಧರಿಸಬೇಕು. ಇಲ್ದಿ ಹೋದ್ರೆ ಗೊತ್ತಿಲ್ಲದೆ ತನ್ನನ್ನ ತಾನು ಮಾರ್ಕೊಳ್ತಾನೆ; ಇನ್ನೊಬ್ಬನ ಆಟಿಕೆಯೂ ಆಗ್ತಾನೆ.

ನಾನು : ಸುಮ್ನೆ ಇರೋದು ಸಹ ಬೇರೆಯವರಿಗೆ ಅನುಕೂಲವಾಗುತ್ತೆ ಅಲ್ವೆ ?

ನಿರಂಜನ : ಹೌದು. ಇಂಥವನು ವ್ಯವಸ್ಥೆಯ ಜೊತೆ ತಾದಾತ್ಮ್ಯ ಪ್ರಾಪ್ತಿಸಿಕೊಳ್ತಾನೆ. ಆಸ್ಥಾನ ಸಾಹಿತಿಯಾಗ್ತಾನೆ; ಕಡೆಗೆ ಜನತೆಯ ವಿರೋಧಿಯಾಗ್ತಾನೆ.

ನಮ್ಮ ಮಾತುಕತೆಯ ಕಡೆಯಲ್ಲಿ ನಿರಂಜನ ಅವರು ಸಮುದಾಯದ ರಂಗಭೂಮಿ ಚಳವಳಿ ಮತ್ತು ಬಂಡಾಯ ಸಾಹಿತ್ಯ ಚಳವಳಿಗಳನ್ನು ಇವತ್ತಿನ ಅತ್ಯಂತ ಪ್ರಮುಖ ಘಟ್ಟಗಳೆಂದು ಕರೆದರು. ಸಮುದಾಯದ ಚಟುವಟಿಕೆಗಳನ್ನು ಮುಖ್ಯವಾಗಿ ಸಮುದಾಯಸಾಂಸ್ಕೃತಿಕ ಜಾಥಾವನ್ನು ಪ್ರಸ್ತಾಪಿಸಿ ಹೊಗಳಿದರು. ಅದು ಅತ್ಯಂತ ಅರ್ಥಪೂರ್ಣ ಹಾಗೂ ಸಾಹಸದ ಕೆಲಸ ಎಂದರು. ಸಮುದಾಯ ಯಾವ ನಾಟಕವನ್ನೇ ಆಡಲಿ, ಮ್ಯಾಕ್ ಬೆತ್ ಅಥವಾ ಎಂಥದೇ ನಾಟಕವಾಗಲಿ ಅದರ ಸ್ವಂತಿಕೆಯ ಮುದ್ರೆ, ಪ್ರಗತಿಪರ ನಿಲುವು ಇರುತ್ತದೆಯಾದ್ದರಿಂದ ಅದು ಮುಖ್ಯ ಎಂದರು. ಚಳವಳಿಯೊಂದನ್ನು ಕಟ್ಟುವ ಕಷ್ಟಗಳ ಅರಿವುಳ್ಳ ಯಾರಿಗೂ ಅವರ ಮಾತು ಉತ್ಪ್ರೇಕ್ಷಿತ ಎನ್ನಿಸುವುದಿಲ್ಲ.

೧೯೮೦

ಪ್ರಾಧ್ಯಾಪಕ ಬರಗೂರು ರಾಮಚಂದ್ರಪ್ಪ ಮಾತಿಲ್ಲದವರಿಗೆ ನಾಲಿಗೆಯಾಗಿರುವ ಪ್ರಸಿದ್ಧ ಕವಿ, ಕಾದಂಬರಿಕಾರ, ವಿಮರ್ಶಕ, ಚಲನಚಿತ್ರ ನಿರ್ದೇಶಕ ಇತ್ಯಾದಿ. ನಾಡಿನ ಬಂಡಾಯ ಸಾಹಿತ್ಯ ಸಂಘಟನೆಯ ಪ್ರಮುಖರು ಸಹ. ಈ ಸಂದರ್ಶನ ಪ್ರಕಟವಾದದ್ದು ೧೯೮೦ ಜುಲೈ ತಿಂಗಳ 'ಸಮುದಾಯ ವಾರ್ತಾ' ಮಾಸಿಕದಲ್ಲಿ. ಆಗ ಅದರ ಸಂಪಾದಕಿ : ಎಸ್. ಮಾಲತಿ.

–ನಿ.

ಅಲೆಯಾಗುವ ಬದಲು ಪ್ರವಾಹವಾಗಬೇಕು

ಕುಮಾರಿ ಎನ್. ಗಾಯತ್ರಿ

ಪ್ರಶ್ನೆ : ನಾಟಕ, ಸಿನಿಮಾ, ಸಾಹಿತ್ಯ ಮುಂತಾದ ಸೃಜನಶೀಲ ಸೃಷ್ಟಿಗಳಿಗೆ ಸಂಘಟನೆ ಅಗತ್ಯವೇ? ಈ ರೀತಿ ಸಂಘಟಿತವಾದಾಗ ಅದರಿಂದಾಗುವ ಲಾಭ ಮತ್ತು ನಷ್ಟ ಏನು?

ಉತ್ತರ : ನಾಟಕ, ಸಿನಿಮಾ, ಸಾಹಿತ್ಯ ಮುಂತಾದ ಸೃಜನಶೀಲ ಸೃಷ್ಟಿಗಳ ಸಂಘಟನೆ ಸ್ವಾಗತಾರ್ಹವಾದದ್ದೇ. ನಾಟಕ, ಸಿನಿಮಾದಂತಹ ಮಾಧ್ಯಮಗಳಲ್ಲಂತೂ ಸಂಘಟನೆ ಅನಿವಾರ್ಯವಾಗುತ್ತದೆ. ಈ ರೀತಿ ಸಂಘಟನೆಯಾದಾಗ ಅದು ಹೆಚ್ಚಿನ ಜನರ ಮೇಲೆ ಪರಿಣಾಮ ಬೀರಿ ಒಂದು ಚಳವಳಿಯಾಗಬಹುದು. ಹೆಚ್ಚು ಜನರನ್ನು ಈ ಕ್ಷೇತ್ರದಲ್ಲಿ ಒಳಗೊಳ್ಳುವಂತೆ ಮಾಡಬಹುದು. ಸಾಹಿತ್ಯ ಕ್ಷೇತ್ರದಲ್ಲಿಯೂ ಈ ಸಂಘಟನೆಯನ್ನು ನಾನು ಸ್ವಾಗತಿಸುವವಳೇ. ಆದರೂ, ವೈಯಕ್ತಿಕವಾಗಿ ಶ್ರೇಷ್ಠ ಲೇಖಕನಿಗೆ ಅವನ ಸೃಷ್ಟ್ಯಾತ್ಮಕ ಪ್ರತಿಭೆಯ ಸಮಯವನ್ನು ಸಂಘಟನೆಯ ಸಮಯದಲ್ಲಿ ಬಳಸಬೇಕಾಗಿ ಬರುವುದರಿಂದ, ತನ್ನ ಸಾಹಿತ್ಯ ಸೃಷ್ಟಿ ಮಾಡಲು ಕೊಂಚ ತೊಂದರೆಯಾಗಬಹುದೇನೋ ಎನಿಸುತ್ತದೆ. ಏನೇ ಆದರೂ ಸೃಜನಶೀಲರ ಸಂಘಟನೆಯನ್ನು ನಾನು ಸ್ವಾಗತಿಸುತ್ತೇನೆ.

ಪ್ರ : ಸಾಂಸ್ಕೃತಿಕ ಚಳುವಳಿಗಳು ಎಷ್ಟರ ಮಟ್ಟಿಗೆ ಜನ ಜಾಗೃತಿಯನ್ನುಂಟು ಮಾಡಲು ನೆರವಾಗುತ್ತವೆ?

ಉ : ಸಾಂಸ್ಕೃತಿಕ ಚಳವಳಿಗಳು ಜನ ಜಾಗೃತಿಯನ್ನುಂಟು
ಮಾಡಲು ತುಂಬಾ ಮುಖ್ಯ ಪಾತ್ರವಹಿಸುತ್ತವೆ, ಅಂತ ನನಗನಿಸ್ತದೆ.
ನಮ್ಮಲ್ಲಿ ಚಳವಳಿಗಳು ಕಡಿಮೆ. ಕೆಲವೇ ಮಂದಿ ಶಿಕ್ಷಿತರಾಗಿ, ಸಾಹಿತ್ಯದ
ಪ್ರಯೋಜನ ಪಡೆದಾಗ ಒಂದು ರೀತಿಯ elitism ಪ್ರಾರಂಭವಾಗ್ತದೆ.
ಬಹುಶಃ ನವ್ಯ ಚಳವಳಿಯ ಸಂದರ್ಭದಲ್ಲಿ ಆದದ್ದೇ ಇದು. ಆದರೆ ಇಡೀ
ಜನಸಮೂಹ ಶಿಕ್ಷಿತರಾದಾಗ, ಚಳವಳಿ ಜನಪ್ರಿಯವೂ ಆಗ್ತದೆ, ಸಾಮಾಜಿಕ
ಜಾಗೃತಿಗೂ ಕಾರಣವಾಗ್ತದೆ. ಆದರೆ ಈ ಚಳವಳಿಗಳು ಎಷ್ಟರಮಟ್ಟಿಗೆ
ಜನಜಾಗೃತಿಯನ್ನುಂಟುಮಾಡಬಲ್ಲವು – ಎಂಬುದನ್ನು ಆ ಚಳವಳಿಗಳು
ಯಾವ ರೀತಿ ನಡೆದವು ಎಂಬುವರ ಆಧಾರದ ಮೇಲೆಯೇ ಹೇಳಬೇಕಾಗ್ತದೆ.
ಈಗ ಜಾಥಾದಲ್ಲಿ ಅಭಿನಯಿಸುವ ನಾಟಕಗಳಿಂದ ಜನರ ಮನಸ್ಸಿನ ಮೇಲೆ
ಒಂದು ರೀತಿಯ ಪರಿಣಾಮ ಆಗಬಹುದು. ಕಾಲ ಬಂದಾಗ ಅದು ಸ್ಫೋಟ
ಗೊಂಡು ಕಾರ್ಯ ರೂಪಕ್ಕೆ ಬರಬಹುದು. ಆದರೆ ಜಾಥಾ ಮಾಡಿ ಬಂದು
ಸುಮ್ಮನಿರಬಾರದು. ಅದನ್ನು follow up ಮಾಡಬೇಕು. ಆಮೇಲೆ,
ಈಗ ಬಂಡಾಯ ಸಾಹಿತ್ಯ ಸಂಘಟನೆಯನ್ನೇ ತೆಗೆದುಕೊಳ್ಳಿ. ಬಿಜಾಪುರದಲ್ಲಿ
ಒಂದು ಸಮ್ಮೇಳನ ಮಾಡಿದರು. ಆ ಸಮ್ಮೇಳನ ಅಲ್ಲಿನ ಸ್ಥಳೀಯ ಜನರ
ಮೇಲೆ ಯಾವ ರೀತಿಯ ಪ್ರಭಾವವನ್ನೂ ಬೀರದಿದ್ದರೆ ಮತ್ತು ಅಲ್ಲಿನ
ಜನರನ್ನು ಒಳಗೊಳ್ಳದಿದ್ದರೆ ಏನೂ ಪ್ರಯೋಜನವಾಗಲ್ಲ. ಆದ್ದರಿಂದ
ಸಾಂಸ್ಕೃತಿಕ ಚಳವಳಿಗಳು ಒಂದು ರೀತಿಯ ಆರೋಗ್ಯಕರ ವಾತಾವರಣ ಸೃಷ್ಟಿ
ಮಾಡಿ, ಪ್ರಗತಿಪರ ವಿಚಾರ ಬಲಿಯುವುದಕ್ಕೆ ನೆರವಾಗಬೇಕು. ಈ ಪ್ರಜ್ಞೆ
ಸಮಾಜದಲ್ಲಿ ಯಾವಾಗಲೂ ಜಾಗೃತವಾಗಿದ್ದು ನಿರಂತರ ಪ್ರವಾಹದಂತಿರ
ಬೇಕು. ಈ ಚಳವಳಿಗಳು ಒಂದು ವಿಷಯವನ್ನು ಮುಖ್ಯವಾಗಿ ಗಮನಿಸು
ವುದಗತ್ಯ. –ಅವು ಆದಷ್ಟು ಬಂಡವಾಳಶಾಹಿ ಸಮಾಜದ ಆಮಿಷಗಳಿಂದ
ದೂರವಿರಬೇಕು. ಪ್ರಗತಿಶೀಲ ಚಳವಳಿ ಒಂದು ರೀತಿಯ ಸುಸಂಘಟಿತ
ಚಳವಳಿಯಾಗದೆ ಅಲೆಯಾಗಿ ಹೋಯಿತು. ಈ ಪ್ರಗತಿಶೀಲ ಪ್ರಜ್ಞೆ
ಆಗಾಗ್ಗೆ ಎಲ್ಲರಲ್ಲೂ ಕಾಣಿಸಿಕೊಂಡಿರಬಹುದು. ಆದ್ದರಿಂದ ಸಮುದಾಯ
ವಾಗಲೀ ಬಂಡಾಯ ಸಾಹಿತ್ಯ ಸಂಘಟನೆಯಾಗಲೀ ಅಲೆಯಾಗಿ ಹೊರಟು

ಹೋಗದೆ ಒಂದು ಪ್ರವಾಹವಾಗಬೇಕು. ಇನ್ನೊಂದು ದಶಕದ ಅನಂತರ ಹೆಮ್ಮೆ ಪಡುವಂತಹ ಸಾಹಿತ್ಯ ಕೊಡಬೇಕು.

ಪ್ರ : ಬರಹಗಾರನೊಬ್ಬ ಎಲ್ಲಾ ಕ್ಷೇತ್ರಗಳ ಅನುಭವವನ್ನು ಪ್ರತ್ಯಕ್ಷ ವಾಗಿ ಹೊಂದಿರಲು ಸಾಧ್ಯವಿಲ್ಲ. ಆದ್ದರಿಂದ ಅವನ ಕೃತಿಗಳಲ್ಲಿನ ಅನುಭವದ ಸೃಜತೆ ಎಷ್ಟರಮಟ್ಟಿಗೆ ರೂಪುಗೊಳ್ಳಲು ಸಾಧ್ಯ?

ಉ : ಬರಹಗಾರನಿಗೆ ಸಮಗ್ರ ಸತ್ಯದ ದರ್ಶನ ಆಗಬೇಕಾದರೆ, ಅವನು ಸೃಜನಶೀಲ ಲೇಖಕ ಆಗಬೇಕು. ಸ್ವತಃ ನಾನಾ ಕ್ಷೇತ್ರಗಳಲ್ಲಿ ಭಾಗವಹಿಸುವುದರಿಂದ ಮತ್ತು ಜನಪರ ಹೋರಾಟಗಳೊಂದಿಗೆ ಸಂಪರ್ಕ ಇಟ್ಟು ಕೊಳ್ಳುವುದರಿಂದ ವಿಶಿಷ್ಟ ಸೃಜನಶೀಲತೆ ಸಾಧ್ಯವಾಗ್ತದೆ. ಆದ್ದರಿಂದ ಪ್ರತಿ ಯೊಂದನ್ನೂ ಅನುಭವಿಸಿ ತಿಳಿಯಬೇಕೆನ್ನುವುದು ಅನಗತ್ಯ. ಉದಾಹರಣೆಗೆ ವೇಶ್ಯಾಗೃಹದ ಚಿತ್ರಣ ಮಾಡಬೇಕಾದರೆ ವೇಶ್ಯಾಗೃಹಕ್ಕೆ ಪ್ರತ್ಯಕ್ಷ ಹೋದು ದರ ಅನುಭವವಿರಬೇಕಿಲ್ಲ. ಅಂಥ ಜನರೊಂದಿಗಿನ ಸಂಪರ್ಕ, ಅಂಥವರ ಜೀವನವನ್ನು ಅರಿಯುವ ಕುತೂಹಲ ಮತ್ತು ಅನುಕಂಪ ಇದ್ದರೆ, ವೇಶ್ಯಾ ಗೃಹದ ಚಿತ್ರಣ ಸಾಧ್ಯ. ಮುಖ್ಯವಾಗಿ ಬರೆಹಗಾರನಿಗೆ ತನ್ನ ಸುತ್ತಣ ಪರಿಸರವನ್ನು ಅರಿಯುವ ಸೂಕ್ಷ್ಮ ಸಂವೇದನಾಶೀಲತೆ ಬೇಕು, ಶೋಷಿತರ ಬದುಕಿನ ವಿವರಗಳನ್ನು ತಿಳಿಯುವುದರ ಬಗ್ಗೆ ಅನುಕಂಪ ಅನುತಾಪ ಇದ್ದು, ಅವರ ಸ್ಥಿತಿಯನ್ನು ಅರಿಯುವ ಪ್ರಗತಿಪರ ದೃಷ್ಟಿಕೋನ ಬೇಕು.

ಪ್ರ : ಒಟ್ಟು ನಮ್ಮ ಇತಿಹಾಸದಲ್ಲಿ ಕಲೆ, ಸಾಹಿತ್ಯ, ಶಾಸ್ತ್ರ ಮುಂತಾದ ಪ್ರಕಾರಗಳಲ್ಲೆಲ್ಲಾ ದಾಖಲಿತವಾಗಿರುವ ಹೆಣ್ಣು ಭೋಗ ವಸ್ತುವಾಗಿ, ವರ್ಣನಾರ್ಹ ವಸ್ತುವಾಗಿ ಮಾತ್ರ ಚಿತ್ರಿತಳಾಗಿದ್ದಾಳೆ. ಇದಕ್ಕೆ ನೀವು ಏನು ಕಾರಣಾಂತ ಹೇಳ್ತೀರಾ?

ಉ : ಹಿಂದುಳಿದ ಸಮಾಜಗಳಲ್ಲಿ ಮತ್ತು ಬಂಡವಾಳಶಾಹಿ ಸಮಾಜ ಗಳಲ್ಲಿ ಹೆಣ್ಣು ಭೋಗದ ಮತ್ತು ಮಡಿಮೆಯ ವಸ್ತುವಾಗಿದ್ದಾಳೆ. ಒಂದು ರೀತಿಯ ಪರಂಪರೆಯಲ್ಲಿ, ಅಷ್ಟೇ ಏಕೆ ಕುಲಸ್ಮೃತಿ (Racial memory) ಯಲ್ಲಿ ಇಂಥದೊಂದು ಭಾವನೆ ಮೂಡಿಬಿಟ್ಟಿರುವುದರಿಂದ ನಮ್ಮ ಸಾಹಿತ್ಯ ದಲ್ಲಿ, ಕಲೆ, ಶಾಸ್ತ್ರಗಳಲ್ಲಿ ಅದು ರೂಢಮೂಲವಾಗಿದೆ. ಪ್ರಗತಿಪರರೆನಿಸಿ ಕೊಂಡವರು ಕೂಡ ಸಮಾಜದ ಮೂಲಭೂತ ಘಟಕವಾದ 'ಕುಟುಂಬ'ದಲ್ಲಿನ

ಅನ್ಯಾಯಗಳನ್ನು, ಶೋಷಣೆಯನ್ನು ಗುರುತಿಸುವುದಿಲ್ಲವಾದ್ದರಿಂದ ಅವರ ಕೃತಿಗಳಲ್ಲಿ ಹೆಣ್ಣನ್ನು ಭಿನ್ನ ರೀತಿಯಲ್ಲಿ ಚಿತ್ರಿಸಲು ಸಾಧ್ಯವಾಗಿಲ್ಲ.

ಪ್ರ : ಈಗ ನಡೆಯಲಿರುವ ಸಮುದಾಯ ಜಾಥಾದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉ : ಹೋದ ಸಲದ ಜಾಥಾಗಿಂತ ಈ ಸಲದ ಜಾಥಾ ಜಿಲ್ಲಾವಾರು ಆಗಿರುವುದರಿಂದ ಹೆಚ್ಚು intensive ಆಗಿರುತ್ತೆ. ಇಂಥ ಜಾಥಾಗಳಿಂದ ತುಂಬಾ ಲಾಭ ಇದೆ. ಈ ಲಾಭ ಇನ್ನೂ ಹತ್ತು ಪಟ್ಟು ಹೆಚ್ಚಾಗಲಿ ಎನ್ನುವುದು ನನ್ನ ಆಶಯ. ಪ್ರತಿ ಸಲವೂ ಈ ಚಳವಳಿ ಹೊಸ ಮುಖಗಳನ್ನು ಒಳಗೊಳ್ಳುವಂತಾಗಲಿ.

೧೯೮೧

ಸಂದರ್ಶಕಿ ಕುಮಾರಿ ಎನ್. ಗಾಯತ್ರಿ ಸಮರ್ಥ ಮಾತುಗಾತಿ, ಲೇಖಕಿ, ವಿಚಾರಶೀಲೆ. ಬರಗೂರು ರಾಮಚಂದ್ರಪ್ಪನವರ ಸಂಪಾದಕತ್ವದಲ್ಲಿ ಮುಂದುವರಿದ 'ಸಮುದಾಯ ವಾರ್ತಾ' ಮಾಸ ಪತ್ರಿಕೆಗಾಗಿ ಈ ಸಂದರ್ಶನ ನಡೆಯಿತು. ಪ್ರಕಟಣೆ ೧೯೮೧ರ ಜನವರಿಯಲ್ಲಿ ಪ್ರಕಟವಾದ ಜಂಟಿ ಸಂಚಿಕೆಯಲ್ಲಿ. —ನಿ.

ಮೂಗ ಮಾತನಾಡಿಯಾನು;
ಕುರುಡ ಕಣ್ಣು ಬಿಟ್ಟಾನು!

–ಬಾ. ಸಾಮಗ

ಅಂಗವಿಕಲರ ರಾಜ್ಯಮಟ್ಟದ ದ್ವಿತೀಯ ಸಮ್ಮೇಳನದ ಅಧ್ಯಕ್ಷರಾದ ನಿರಂಜನ ಅವರನ್ನು ಸಂದರ್ಶಿಸಿದಾಗ :

"ಮಾನ್ಯ ನಿರಂಜನ ಅವರೇ, ಕಾದಂಬರಿಕಾರರಾಗಿ ತಮ್ಮ ಪರಿಚಯ ಎಲ್ಲರಿಗೂ ಇದೆ. ಕರ್ನಾಟಕದ ಖ್ಯಾತ ಸಾಹಿತಿಗಳಾದ ನೀವು ಅಂಗವಿಕಲರಾದುದು ಹೇಗೆ ?"

"ನಾನು ಹುಟ್ಟಿನಿಂದ ಅಂಗವಿಕಲನಲ್ಲ. ೧೯೭೧ರಲ್ಲಿ ಮೈಸೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗ ಅನಿರೀಕ್ಷಿತವಾಗಿ ನನಗೆ ಸ್ಟ್ರೋಕ್ ಧಾಳಿ ಆಯಿತು. ಇದರಿಂದಾಗಿ ನನ್ನ ದೇಹದ ಎಡಭಾಗ ಶಕ್ತಿ ಕಳೆದುಕೊಳ್ಳುವಂತಾಯಿತು."

"ತಾವು ಅಂಗವಿಕಲರಾದಿರಿ ಎಂದು ತಿಳಿದಾಗ ತಮಗೇನನ್ನಿಸಿತು?"

"ಮೊದಲಿಗೆ ನಾನು ಅಂಗವಿಕಲನಾಗಿದ್ದೇನೆ ಎಂದೆನಿಸಲೇ ಇಲ್ಲ. ಆ ಸಮಯದಲ್ಲಿ ನಾನು ಜ್ಞಾನ ಗಂಗೋತ್ರಿ ಸಂಪುಟಗಳ ಕೆಲಸ ಮಾಡುತ್ತಿದ್ದೆ. ಹೇಗಾದರೂ ಮಾಡಿ ಆ ಕೆಲಸ ಪೂರೈಸಬೇಕೆಂದು ನಿರ್ಧರಿಸಿದೆ. ಕೆಲವರು ನಾನು ಅಂಗವಿಕಲನಾದಾಗ ಲಿಪ್‌ಸಿಂಪಥಿ ವ್ಯಕ್ತಪಡಿಸಿದ್ದರು. ಕೆಲವರು

ವಿವಿಧ ಬಗೆಯ ತೊಂದರೆಗಳನ್ನೂ ಕೊಟ್ಟರು. ಆದರೆ ಎಲ್ಲ ಕಷ್ಟಗಳನ್ನೂ ಸಹಿಸಿಕೊಂಡು ಜ್ಞಾನಗಂಗೋತ್ರಿ ಸಂಪುಟದ ಕೆಲಸ 1974ರಲ್ಲಿ ಮುಗಿಸಿದೆ."

"ಹಾಗಾದರೆ ತಾವು ಅಂಗವಿಕಲರಾದರೂ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದಿರಿ?"

"ಇಲ್ಲ. ದೇಹದ ಒಂದು ಭಾಗದ ಶಕ್ತಿ ಹೋದ್ದರಿಂದ ಎಲ್ಲಾ ಕೆಲಸಗಳನ್ನು ಮಾಡುವುದು ಸಾಧ್ಯವಿರಲಿಲ್ಲ. ನಡೆಯುವುದು, ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇತ್ಯಾದಿ ಮಾಡುವುದಕ್ಕಾಗಲಿಲ್ಲ. ಆದರೂ ನಾನು ಅಂಗವಿಕಲನೆಂಬುದನ್ನು ಮರೆಯಲು ಯತ್ನಿಸಿದೆ."

"ಅಂದರೆ ತಾವು ಅಂಗವಿಕಲನೆಂಬುದನ್ನು ಮರತೇಬಿಟ್ಟಿರಾ?"

"ಹಾ! ಅನುಪಮಾ ಕೆಲವು ವರ್ಷಗಳ ಹಿಂದೆ ಸಾಯಿಬಾಬರ ವಿಷಯ ಪತ್ತೆ ಸಂಶೋಧನೆಗೆ ತೊಡಗಿದ್ದಾಗ ಒಬ್ಬರು ಅನುಪಮಾಗೆ ಪತ್ರ ಬರೆದು ಅಂಗವಿಕಲ ಗಂಡನ ಸೇವೆ ಮಾಡುವುದನ್ನು ಬಿಟ್ಟು ಸಾಯಿಬಾಬರ ಸಂಶೋಧನೆಗೆ ತೊಡಗಿದ್ದೀರಲ್ಲ ಎಂದು ಕೇಳಿದರು. ಆಗ ನನಗೆ ನಾನೂ ಅಂಗವಿಕಲನೆಂಬ ಅರಿವುಂಟಾಯಿತು."

"ತಾವು ಅಂಗವಿಕಲರಾದ ಬಳಿಕ ಸಂತೋಷ ತಂದ ಕೆಲಸಗಳನ್ನು ಮಾಡಿದ್ದೀರಾ ?"

"ನಾನು ಅಂಗವಿಕಲನಾದ ಬಳಿಕವೇ ನನಗೆ ಖುಷಿ ಕೊಟ್ಟ ಕಾದಂಬರಿಯನ್ನು ರಚಿಸಿದೆ. 'ಮೃತ್ಯುಂಜಯ' ಕಾದಂಬರಿ 1976ರಲ್ಲಿ ಪ್ರಕಟವಾಯಿತು. ಕರ್ನಾಟಕದ ಪ್ರಗತಿ ಪಂಥ ಬರಹಗಾರರ ಮತ್ತು ಕಲಾವಿದರ ಸಮ್ಮೇಳನದ ಅಧ್ಯಕ್ಷನಾದೆ. ವಿಶ್ವಕಥಾ ಕೋಶದ ಪ್ರಧಾನ ಸಂಪಾದಕನಾಗಿಯೂ ಕೆಲಸ ಮಾಡುತ್ತಿದ್ದೇನೆ."

"ನಮ್ಮ ಸಮಾಜ ಮತ್ತು ಅಂಗವಿಕಲರ ಸಂಬಂಧ ಹೇಗಿದೆ ಎನಿಸುತ್ತದೆ?"

"ನಮ್ಮ ಸಮಾಜ ಗೆದ್ದಲು ಹಿಡಿದ ಮರದಂತಿದೆ. ಅಂಗವಿಕಲರದು ಅದರೊಳಗಿನ ಕಾಷ್ಠ. ದೇಹ ಸರಿಯಾಗಿದ್ದವರನ್ನೇ ಅಂಗವಿಕಲರನ್ನಾಗಿಸುವ ನಮ್ಮ ಸಮಾಜದಲ್ಲಿ ಅಂಗವಿಕಲರು ಅತ್ಯಂತ ಶೋಷಣೆಗೊಳಗಾಗಿದ್ದಾರೆ.

ಕಣ್ಣಿದ್ದವರನ್ನು ಕುರುಡರನ್ನಾಗಿಸುವ, ಮಾತು ಬಲ್ಲವರನ್ನು ಮೂಗರನ್ನಾಗಿ ಸುವ ಈ ಸಮಾಜದಲ್ಲಿ ಅಂಗವಿಕಲರ ಜೀವನ ಒಂದು ದುರಂತ."

"ಅಂಗವಿಕಲರ ವರ್ಷದಲ್ಲಿ ಅಂಗವಿಕಲರಿಗೆ ನಾನಾ ಸೌಲಭ್ಯ ಸಿಗುತ್ತ ದೆಂಬ ಸುದ್ದಿ ಬಗ್ಗೆ ತಮ್ಮ ನಿಲುವೇನು?"

"ಈ ಸೌಲಭ್ಯ ಸುದ್ದಿಯೆಲ್ಲ ಬರೀ ನಾಟಕ. ಇವುಗಳಿಂದ ಅಂಗವಿಕಲರ ಉದ್ಧಾರವಾಗಲಾರದು. ಈ ಸೌಲಭ್ಯ ಗಳಿಂದ ಕೆಲವರಿಗೆ ಲಾಭವಾಗಬಹುದು. ಸಾಕಷ್ಟು ಹಣದ ದುರುಪಯೋಗವೂ ನಡೆಯುತ್ತದೆ."

"ಅಂಗವಿಕಲರ ಉದ್ಧಾರ ಹೇಗೆ ಸಾಧ್ಯ?"

"ಅಂಗವಿಕಲರಿಗೆ ಬದುಕಬೇಕೆಂಬ ಛಲ ಬೇಕು. ಈ ಸಮಾಜದ ವ್ಯವಸ್ಥೆಯೇ ಬದಲಾಗಬೇಕು. ಸಮಾಜ ವ್ಯವಸ್ಥೆ ಬದಲಾಗಲು ಅಂಗ ವಿಕಲರೂ ಜಾಗೃತರಾಗಿ ಸಿಡಿದೇಳಬೇಕು. ಅಂಗವಿಕಲರು ತಮ್ಮ ಹಕ್ಕನ್ನು ಕೆಚ್ಚಿನಿಂದ ಈಡೇರಿಸಿಕೊಳ್ಳಬೇಕು."

"ಅಂತಹ ದಿನಗಳು ಬಂದಾವೆಯೇ?"

"ಖಂಡಿತಾ ಬರುತ್ತವೆ. ಎಲ್ಲಾ ಕಾಲದಲ್ಲೂ ಶೋಷಣೆ ನಡೆಯುವಂತಿಲ್ಲ. ಈ ಪ್ರತಿಷ್ಠಿತ ಸಮಾಜ ಅಂಗವಿಕಲರನ್ನು ಸರಿಯಾಗಿ ಕಾಣದಿದ್ದಲ್ಲಿ ಅಂಗ ವಿಕಲರೇ ಸಮಾಜಕ್ಕೆ ಬುದ್ಧಿ ಕಲಿಸುತ್ತಾರೆ. ಒಂದಲ್ಲ ಒಂದು ದಿನ ಮೂಗ ನಿಗೂ ಮಾತು ಬಂದೀತು. ಕುರುಡನೂ ಕಣ್ಣು ಬಿಟ್ಟಾನು. ಆಗ ಶೋಷಣೆ ಮಾಡಿದ ಸಮಾಜ ಪಶ್ಚಾತ್ತಾಪ ಪಡಬೇಕಾದೀತು. ನಾನು ಆಶಾವಾದಿ. ಅಂಗವಿಕಲರ ಸುದಿನಗಳಿಗಾಗಿ ಹಾರೈಸುತ್ತಿದ್ದೇನೆ."

–೧೯೮೧

ಬಾಲಕೃಷ್ಣ ಸಾಮಗರು ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬಂಡಾಯಗಾರನಾದರು. ಸಾಮಾಜಿಕ ಕ್ರಾಂತಿಯಲ್ಲಿ ಆಸಕ್ತಿ, ಚಿಂತನೆ,

ಸಂಶೋಧನೆ, ಕಲೆ, ಸಾಹಿತ್ಯ–ಒಲವಿನ ವಲಯಗಳು.
ಕರ್ನಾಟಕ ಅಂಗವಿಕಲರ ಸಮ್ಮೇಳನದ ಸಂಘಟನಾ ಸಮಿತಿಯ ಪ್ರಮುಖರಾಗಿ ಸಮ್ಮೇಳನವನ್ನು ಸಾಂಗಗೊಳಿಸಿದರು.
ಈಗ ದೆಹಲಿ ಇವರ ಕಾರ್ಯಕ್ಷೇತ್ರ. ಅಲ್ಲಿ ತುಳುವರನ್ನೂ ಕನ್ನಡಿಗರನ್ನೂ ಎಚ್ಚರಿಸುವುದರಲ್ಲಿ ನಿರತರು. 'ತುಳುವೆರ್' 'ದೆಹಲಿ ಕನ್ನಡಿಗ' ಅವರು ಸಂಪಾದಿಸುತ್ತಿರುವ ಪತ್ರಿಕೆಗಳು.
ಈ ಸಂದರ್ಶನ ಪ್ರಕಟವಾದದ್ದು 'ಕನ್ನಡಪ್ರಭ' ದೈನಿಕದ ಸಂಪಾದಕರು: (ಖಾದ್ರಿಶಾಮಣ್ಣ) ೧೯೮೧ ಏಪ್ರಿಲ್ ೧೨ ಸಂಚಿಕೆಯಲ್ಲಿ. –ನಿ.

ನಿರಂಜನ: ಹೊತ್ತಿ ಉರಿವ ಇತಿಹಾಸ ಪ್ರಜ್ಞೆ

ಶಿವಪ್ಪ ನಾಯಕ

ಜನವರಿಯಲ್ಲಿ ನಡೆದ ಸಮುದಾಯ 'ಸಾಂಸ್ಕೃತಿಕ ಜಾತಾ'ದ ನೆನಪಿಗಾಗಿ 'ವಿಚಾರಿ' ಆರು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿತಷ್ಟೆ. 'ನೀವು ತಪ್ಪದೇ ಓದಲೇ ಬೇಕಾದ ಪುಸ್ತಕ' ಎಂಬ ಶೀರ್ಷಿಕೆಯಡಿ 'ಮೃತ್ಯುಂಜಯ' ಎಂಬ ಕಾದಂಬರಿ ಕುರಿತು ಬರೆದಿದ್ದೆ. ಲೇಖನ ಪ್ರಕಟವಾಗಿ ಸುಮಾರು ಒಂದು ತಿಂಗಳ ನಂತರ ನನ್ನ ಹೆಸರಿಗೊಂದು ಪತ್ರ ಬಂತು. 'ಮೃತ್ಯುಂಜಯ'ದ ಲೇಖಕ ಶ್ರೀ ನಿರಂಜನರಿಂದ. ಅವರಿಗೂ ಅಪರಿಚಿತರಾಗಿದ್ದ ನಮ್ಮನ್ನು ಈ ಪತ್ರದ ಆತ್ಮೀಯತೆ ಬೆಸೆಯಿತು.

ಇತಿಹಾಸದ ವಿದ್ಯಾರ್ಥಿಯಾದ ನನಗೆ ಪ್ರಾಚೀನ ಈಜಿಪ್ಟಿನ ನಾಗರಿಕತೆಯ ಗೂಢಸ್ವರೂಪಗಳು ಮೊದಲಿನಿಂದಲೂ ಗುಂಗು ಹಿಡಿಸಿದ್ದವು. ನಿರಂಜನರ ಕಾದಂಬರಿ ಸ್ವಾಭಾವಿಕವಾಗಿಯೆ ನನ್ನನ್ನ ಸೆಳೆಯಿತು. ಅಲ್ಲಿನ ಸಾಹಿತ್ಯಕ ಮೌಲ್ಯ, ಜೀವನ ದರ್ಶನಗಳು ಕಂಡು ಆಶ್ಚರ್ಯಗೊಂಡೆ. ಜೊತೆಗೆ, ಕನ್ನಡದ ಯಾವ ವಿಮರ್ಶಕರೂ ಅದರ ಕಡೆಗೆ ಕಣ್ಣು ಬಿಟ್ಟು ನೋಡದಿದ್ದುದು ನನ್ನ ವಿಸ್ಮಯಕ್ಕೆ ಕಾರಣವಾಯಿತು. ನನ್ನ ಲೇಖನ ಪ್ರಕಟವಾದ ಸಂಚಿಕೆಯನ್ನು ಯಾರೋ ಮಿತ್ರರು ನಿರಂಜನರಿಗೆ ತೋರಿಸಿದರಂತೆ. ಅಂತೆಯೆ ಅವರಿಂದ ಪತ್ರ. 'ಈ ಶತಮಾನದಲ್ಲಿ ಯಾರೂ ಈ ಕಾದಂಬರಿಯನ್ನು ಕಣ್ಣೆತ್ತಿ ನೋಡಲಾರರು ಎನ್ನಿಸಿಬಿಟ್ಟಿತ್ತು' ಎಂದು ಬರೆ

ದಿದ್ದರು. ಒಂದು ಭಾಷೆಯ ಸಾರಸ್ವತ ಲೋಕ ಒಬ್ಬ ಸತ್ವಶೀಲ ಲೇಖಕನಿಗೆ ಎಂಥ ಅಪಚಾರವೆಸಗಲು ಸಾಧ್ಯ ಎಂಬ ಅರಿವು ಮೂಡಿತು ನನಗೆ.

ನಿರಂಜನರ ಜೀವನ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಧುರೀಣರು, ಮೊದಲಿನಿಂದಲೂ ಸ್ಪಷ್ಟವಾದ ಎಡ ರಾಜಕೀಯ ನಿಲುವುಳ್ಳ ವ್ಯಕ್ತಿ. ಅವರ 'ಚಿರಸ್ಮರಣೆ' ಎಂಬ ಕಾದಂಬರಿ ಕಯ್ಯೂರು ಹೋರಾಟದ ಮಾರ್ಮಿಕ ಚಿತ್ರ ಕೊಡುತ್ತದೆ. 'ವಿಮೋಚನೆ' 'ರಂಗಮ್ಮನ ವಠಾರ', 'ನೋವು', 'ಸ್ಮರಣೆ ಯೊಂದೇ ಸಾಲದೆ?', 'ನಂದಗೋಕುಲ', 'ಬನಶಂಕರಿ', 'ಸ್ವಾಮಿ ಅಪರಂಪಾರ', 'ಅಭಯ', 'ಕಲ್ಯಾಣಸ್ವಾಮಿ', 'ಬಂಗಾರದ ಜಿಂಕೆ' ಅವರ ಕಾದಂಬರಿಗಳು. ಇದಲ್ಲದೆ ರಷ್ಯಾದ ಸುಪ್ರಸಿದ್ಧ ಲೇಖಕ ಮಾಕ್ಸಿಂ ಗಾರ್ಕಿಯ ಕಾದಂಬರಿಗಳನ್ನೂ ಕನ್ನಡಕ್ಕೆ ತಂದ ಕೀರ್ತಿ ಇವರದು. 'ನನ್ನ ಬಾಲ್ಯ', 'ತಾಯಿ', ಜನತೆಯ ನಡುವೆ' ಅವರ ಮುಖ್ಯ ಅನುವಾದಗಳು.

ಅವರ ಅಭಿಮಾನದ ಕರೆ. ನಾ ಮೆಚ್ಚಿದ ಲೇಖಕರೊಬ್ಬರನ್ನ ಕಾಣುವ ಕುತೂಹಲ. ಇವೆರಡಕ್ಕೂ ಇಂಬು ಕೊಟ್ಟಿತು 'ವಿಚಾರಿ' ಸಂಪಾದಕರ ಮನವಿ. ಪೂರ್ವ ಸೂಚನೆಯನ್ನೇ ಕೊಡದೆ ಬೆಂಗಳೂರ ಜಯನಗರದ ಅವರ ನಿವಾಸದ ಮುಂದೆ ನಿಂತೆ ಒಂದು ಸಂಜೆ. ಮನೆಯ ಹೆಸರೇ 'ಕಥೆ'. 'ವಿಶ್ವಕಥಾಕೋಶ' ಪ್ರಧಾನ ಸಂಪಾದಕರ ಅಭಿರುಚಿಗೆ ಮಣಿದು ಬೆಲ್ ಒತ್ತಿದೆ. ಮನೆ ಮುಂದಣ ಹಿತವಾದ ಕೈತೋಟ ತಣ್ಣಗೆ ಗಾಳಿ ಬೀಸಿ ಹಾಯಿಸಿಸುತ್ತಿದ್ದಂತೆ ತೆರೆದ ಬಾಗಿಲು. 'ಬನ್ನಿ, ಯಾರು ?' ಅವರ ಪತ್ನಿ ಡಾ. ಅನುಪಮಾ ನಿರಂಜನರವರು, ನನ್ನ ಹಾಗೂ ನನ್ನ ಗೆಳೆಯರ ಸಂಕೋಚಕ್ಕೆ ಎಡೆಕೊಡದೆ ಹಿರಿ ಜೀವಿ ನಿರಂಜನರ ಬದುಕು–ಬರಹದ ಕೊಠಡಿಗೆ ನಮ್ಮನ್ನ ಕರೆದೊಯ್ದರು. ಪುಸ್ತಕದ ಷೆಲ್ಫುಗಳ ಮಧ್ಯೆ ಕೂತು ಬರವಣಿಗೆಯಲ್ಲಿ ತೊಡಗಿದ್ದ ಲೇಖಕರು ತುಂಬು ಹೃದಯದಿಂದ ಸ್ವಾಗತಿಸಿದರು. ಕಿಟಕಿ ತೆರೆದು ಬೆಂಗಳೂರಿನ ದೀಪರಾಜಿಗೆ ಕಣ್ಣಾಗಿತ್ತು. ತಂಪಾದ ಶರಬತ್ತು ಸವಿಯುತ್ತ ನಿರಂಜನರ ಮಾತುಗಳಿಗೆ ಒಡ್ಡಿಕೊಂಡೆವು. ರಾತ್ರಿ ಬಹಳ ಹೊತ್ತಾದರೂ ಪರಿವೆಯೆ ಇರಲಿಲ್ಲ.

ನನ್ನ ಮಟ್ಟಿಗೆ ಒಬ್ಬ ಲೇಖಕನನ್ನ ಅಳೆಯುವ ಮಾನದಂಡವೆಂದರೆ ಇದು : ಅವನ ಕೃತಿ ನಮ್ಮಲ್ಲಿ ಮೂಡಿಸಿದ 'ಕುತೂಹಲ' ಆತನನ್ನು ಪ್ರತ್ಯಕ್ಷ

ಕಂಡು ಮಾತನಾಡಿಸಿದ ಮೇಲೂ ಉಳಿದುಕೊಂಡು ಬರಬೇಕು. ಯಾಕೆಂದರೆ ನಮ್ಮ ಎಷ್ಟೋ ಜನ ಲೇಖಕರಲ್ಲಿ ಇಂದು ಇಂಥ ಗಟ್ಟಿತನ ಮಾಯವಾಗುತ್ತಿದೆ. ಒಂದು ಕೃತಿ ಓದಿ ಅದರ ಲೇಖನ ಬಗ್ಗೆ ಓದುಗ ಕಲ್ಪಿಸಿಕೊಂಡದ್ದನ್ನೆಲ್ಲ ಎಷ್ಟೋ ಸಾರಿ ಆ ಲೇಖನ ದರ್ಶನ ಅಳಿಸಿ ಹಾಕಿಬಿಡುತ್ತದೆ.

ನಿರಂಜನರನ್ನು ಭೇಟಿಯಾದ ದಿನ ಅವರೊಂದಿಗೆ ಕಳೆದ ಮೂರು ತಾಸು ನಿಜಕ್ಕೂ ನನ್ನ ಕುತೂಹಲವನ್ನು ಇಮ್ಮಡಿಗೊಳಿಸಿದವು. ಅವರು ಜ್ಞಾನ ತುಂಬಿದ ಕೊಡ. ವ್ಯಾಪಕವಾಗಿ ಅಧ್ಯಯನ ನಡೆಸಿದವರು. ಜೊತೆಗೆ ನಮ್ಮ ಎಲ್ಲ ಸಮಸ್ಯೆಗಳನ್ನು ಆಳವಾಗಿ ವಿಶ್ಲೇಷಿಸುವ ಶ್ರೇಷ್ಠ ಮಟ್ಟದ ಚಿಂತಕರು. ನಮ್ಮ ದೇಶದ ಇಡೀ ಚರಿತ್ರೆಯನ್ನ ಹಿನ್ನೆಲೆಗಿಟ್ಟುಕೊಂಡೆ ಪ್ರತಿಯೊಂದನ್ನೂ ಚರ್ಚಿಸಬಲ್ಲಂಥ ಮೇಧಾವಿ. ಇತಿಹಾಸ ಚಕ್ರದ ಉರುಳುಗಳನ್ನ ಗುರ್ತಿಸಿ ಕ್ರಿಯಾ ಪ್ರವರ್ತಕರಾಗಬೇಕೆನ್ನುವವರು. ಅವರು ಪ್ರಸ್ತಾಪ ಮಾಡಿದ ಎಷ್ಟೋ ವಿದ್ಯಮಾನಗಳು ಪುಸ್ತಕಗಳು ನಾವು ಮೊದಲ ಬಾರಿಗೆ ಕೇಳಿದಂತವು. ಹೀಗೆ ಒಂದು ಇಡೀ ಸಂಸ್ಕೃತಿ, ಇಡೀ ನಾಗರಿಕತೆಯನ್ನೆ ತಲೆಯಲ್ಲಿ ತುಂಬಿ ಕೊಳ್ಳಬೇಕಾದ್ದು ಪ್ರತಿಯೊಬ್ಬ ಗಂಭೀರ ಲೇಖಕನ ಆದ್ಯ ಕರ್ತವ್ಯ.

ಇಷ್ಟಿದ್ದರೂ ಇವರು ತುಂಬ ನಿಗರ್ವಿ. ಸದಾ ಹಸನ್ಮುಖಿ. ತಮ್ಮ ತಲೆಮಾರಿನ ಅಭಿಪ್ರಾಯಗಳನ್ನಷ್ಟೇ ತಲೆಯಲ್ಲಿ ತುಂಬಿಕೊಂಡು ಬೆಳೆಯದೆ ಎಲ್ಲೋ ನಿಂತು ಬಿಟ್ಟವರಲ್ಲ. ಸದಾ ಅರ್ಥಪೂರ್ಣವಾದ ಹೊಸತನ್ನ ಸ್ವಾಗತಿಸುವವರು. ಇಂಥವರಲ್ಲಿ 'ವಿಚಾರಿ'ಗಾಗಿ ನಾನು ಕೇಳಬೇಕಾಗಿದ್ದ ಪ್ರಶ್ನೆಗಳನ್ನು ಮುಂದಿಡಿಸಿದಾಗ ಅವರಿಂದ ಬಂದ ಉತ್ತರ ಇಗೊ ಇಲ್ಲಿವೆ :

ಚಿಂತನಶೀಲ ಲೇಖಕನಿಗೆ ಸಾಮಾಜಿಕ ಕಳಕಳಿಯೊಂದೆ ಸಾಲದೆ?

ರಾಜಕೀಯ ಸಿದ್ಧಾಂತವೊಂದಕ್ಕೆ ಬದ್ಧನಾಗಿರುವುದು ಅವಶ್ಯಕವೆ?

ಸಾಮಾಜಿಕ ಕಳಕಳಿಯುಳ್ಳ ಚಿಂತನಶೀಲ ಲೇಖಕ ಒಳ್ಳೆಯ ಸಾಹಿತ್ಯ ಕೃತಿಯನ್ನು ರಚಿಸಬಲ್ಲ. ಆ ಕಳಕಳಿ ಕಾರ್ಯಶೀಲವಾಗುವ ರೀತಿ ಯಾವುದು? ಬಿಡಿ ಬಿಡಿಯಾದ ದೈನಂದಿನ ಸಂಭವಗಳಿಗೆ ಸ್ಪಂದಿಸುವವನು ಹಸಿಹಸಿಯಾಗಿ ಕರುಣೆಯ ಕೋಲ ನಿರ್ಮಿಸಲು ಅಥವಾ ಆಗೊಮ್ಮೆ ಈಗೊಮ್ಮೆ ರೋಷದಿಂದ ಗರ್ಜಿಸಲು ಶಕ್ತ. ಆದರೆ ಇತಿಹಾಸ ಪ್ರಜ್ಞೆಯೂ ಇರುವವನ ಸಾಮಾಜಿಕ ಕಳಕಳಿ ಹೆಚ್ಚು ಅರ್ಥಪೂರ್ಣವಾಗ್ತದೆ; ಕೃತಿ ಪರಿಣಾಮಕಾರಿಯಾಗ್ತದೆ.

ಇನ್ನು, ರಾಜಕೀಯ ಸಿದ್ಧಾಂತಕ್ಕೆ ಬದ್ಧತೆಯ ಪ್ರಶ್ನೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ರಾಜಕೀಯದಲ್ಲಿ ಆಸಕ್ತ. ಸಮಾಜದ ರೂಪ ಪರಿವರ್ತನೆಗೆ ಅಗತ್ಯವಿರುವ ಸೂಕ್ಷ್ಮಾಣುಗಳು ಸಮಾಜದೊಳಗೇ ಇವೆ. ಪರಿವರ್ತನೆ ಅಪೇಕ್ಷಿತ ರೀತಿಯಲ್ಲಿ ಆಗಬೇಕಾದರೆ, ಬದುಕು ಪ್ರಯೋಗ ಶಾಲೆಯಾಗಬೇಕು. ಅಲ್ಲಿ ರಾಜಕೀಯ ವಿಜ್ಞಾನಿಯೊಂದಿಗೆ ಸಾಹಿತಿಯೂ ಸಹಪ್ರವರ್ತಕನಾಗಿ ದುಡಿಬೇಕು – ಆಳಾಗಿ ಅಲ್ಲ. ಅಂತಹ ಪ್ರಯೋಗ ಶಾಲೆಯಲ್ಲಿ ನಾನೊಬ್ಬ ಜತೆದುಡಿಮೆಗಾರ. ನಿರ್ದಿಷ್ಟ ರಾಜಕೀಯ ಸಿದ್ಧಾಂತಕ್ಕೆ ಬದ್ಧರಾದವರೂ ಸೊಗಸಾದ ಸಾಹಿತ್ಯ ಕೃತಿಗಳನ್ನು ರಚಿಸಬಲ್ಲರು. ಬದುಕಿಗೆ ಬದ್ಧತೆ ಎನ್ನುವವನಿಂದಲೂ ಒಳ್ಳೆಯ ಬರೆವಣಿಗೆಯನ್ನು ನಿರೀಕ್ಷಿಸಬಹುದು. ನಿರ್ದಿಷ್ಟ ರಾಜಕೀಯ ಸಿದ್ಧಾಂತವನ್ನು ಪ್ರತಿಪಾದಿಸುವ ಪಕ್ಷದ ಸದಸ್ಯನಾಗಿಯೂ ದುಡಿಯುವ ಹಕ್ಕು ಚಿಂತನಶೀಲ ಲೇಖಕನಿಗಿದೆ. ಆಗ ಆ ಪಕ್ಷದ ನೀತಿ ನಡಾವಳಿಗೆ ಅನುಸಾರವಾಗಿ ಆ ಲೇಖಕನ ಬರೆಹಗಳಲ್ಲೂ ಪಲ್ಲಟಗಳಾಗ್ತವೆ. ಒಮ್ಮೆ ಮೊನೆ ಕಂಡರೆ ಮತ್ತೊಮ್ಮೆ ಅವನ್ನು ಮಂಕು ಕವೀತದೆ. ಇದಕ್ಕೆ ಪರಿಹಾರವಿಲ್ಲ ಎನ್ನಲಾರೆ. ಪರಿಹಾರ ಇತ್ಯಾದಿ ಪ್ರಶ್ನೆಯ ವ್ಯಾಪ್ತಿಗೆ ಮೀರಿದ್ದು. ಇನ್ನೊಮ್ಮೆ ಚರ್ಚಿಸೋಣ.

ಕರ್ನಾಟಕದ (ಇತ್ತೀಚಿನ) ರೈತ ಬಂಡಾಯಗಳನ್ನು ನೀವು ಮುಂದಾಗಿ ಮನಗಂಡಿದ್ದಿರಾ?

ಇಲ್ಲ, ಈ ವಿಷಯದಲ್ಲಿ ರಾಜಕೀಯ ವಿಜ್ಞಾನಿಗಳೂ 'ಭವಿಷ್ಯ' ನುಡಿಯಲಿಲ್ಲ. ಕಾರಣ ಜನತೆಗೂ ಅವರಿಗೂ ನಡುವೆ ಏರ್ಪಟ್ಟಿರುವ ಭಾರೀ ಕಂದಕ. ಬಡಗುಡಿಸಿಲಿಗೆ ಬೆಂಕಿ ಬಿದ್ದಾಗ ಚಳಿ ಕಾಯಿಸಲು ಓಡುತ್ತಾರೆಯೆ? ನೆರವಾಗುವುದೇನೋ ನ್ಯಾಯೋಚಿತ. ಕರ್ನಾಟಕದಲ್ಲಿ ವೈಜ್ಞಾನಿಕ ಸಮಾಜವಾದದ ಮಾತು ಕೇಳಿ 40 ವರ್ಷಗಳಿಗೂ ಹೆಚ್ಚಾಯಿತು. ಕೆಲವೆಡೆ ರೈತರ ಸಂಘಟನೆಯೂ ಆಯಿತು. ಮತ್ತೆ ಹಿಮಯುಗ ಬಂತು. ಹಿಮ ಈಗ ಕರಗ್ತಿದೆ ತಾನಾಗಿ. ಈ ಕಾವನ್ನು ಈಗಲಾದರೂ ಉಳಿಸಿಕೊಳ್ಳದಿದ್ದರೆ ಮುಂದೆ ಬೂದಿಯುಗ ಬರ್ತದೆ! [ಅಂದಹಾಗೆ, ರಷ್ಯದ ಕಥೆ ಬಲ್ಲಿರಿ ಅಲ್ಲವೆ? 1801 ರಿಂದ 1861ರ ವರೆಗೆ, 60 ವರ್ಷಗಳ ಅವಧಿಯಲ್ಲಿ ಅಲ್ಲಿ 2000 ರೈತ ದಂಗೆಗಳಾದವು. ತ್ಸಾರ್ ಚಕ್ರವರ್ತಿ ಜೀತ ವಿಮೋಚನೆಯ ಆಜ್ಞೆ

ಹೊರಡಿಸಿದ. (ಬಂಡವಾಳಗಾರರಾಗಿ ಮಾರ್ಪಟ್ಟಿದ್ದ ವರ್ತಕರಿಗೆ ಹೇರಳ ಸಂಖ್ಯೆಯಲ್ಲಿ ಜೀತದಾಳುಗಳು ಬೇಕಾಗಿದ್ದರು!) ಆದರೆ ಚರ್ಚುಗಳೂ ಭೂಮಾಲಿಕರೂ ಪಟ್ಟುಬಿಡಲಿಲ್ಲ. ಜೀತ ವಿಮೋಚನೆಯ ಅನುಜ್ಞೆಯನ್ನು ಕಾರ್ಯಗತಗೊಳಿಸಲೆಂದೇ ಆ ಒಂದೇ ವರ್ಷದಲ್ಲಿ ರೈತರು ನಡೆಸಿದ ಹೋರಾಟಗಳು 1880. ಇವನ್ನೆಲ್ಲ ಯಾರೂ ಮುಂದಾಗಿ ಮನಗಂಡಿರಲಿಲ್ಲ. ಆದರೆ ಆದುದನ್ನು ಪೃಥಕ್ಕರಿಸಿ ಅನಂತರದ ದಾರಿ ನಿರ್ಧರಿಸಲು ಲೆನಿನ್‌ಗೆ ಮಾರ್ಕ್ಸ್‌ವಾದ ನೆರವು ನೀಡಿತು.]

ಪ್ರಾಚೀನ ಐಗುಪ್ತದ ಸಮಗ್ರ ದರ್ಶನಮಾಡಿಸುವ ನಿಮ್ಮ ಮಹತ್ವದ ಕಾದಂಬರಿ 'ಮೃತ್ಯುಂಜಯ'ಕ್ಕೆ ಪ್ರೇರಣೆಗಳೇನು?

'ಜ್ಞಾನಗಂಗೋತ್ರಿ' ಕಿರಿಯರ ವಿಶ್ವಕೋಶದ ಕೆಲ ಲೇಖನಗಳಿಗಾಗಿ ಸಾಮಗ್ರಿ ಸಂಗ್ರಹಿಸುತ್ತಿದ್ದಾಗ ದೊರೆತೊಂದು ಪುಟ್ಟ ಕಥಾಬೀಜ ನನ್ನನ್ನು ಕೆಣಕಿತು. 'ಜ್ಞಾನ ಗಂಗೋತ್ರಿ' ಯೋಜನೆ 1974ರಲ್ಲಿ ಪೂರ್ತಿಯಾದೊಡನೆ ಪ್ರಾಚೀನ ಐಗುಪ್ತಕ್ಕೆ 'ಧಾವಿಸಿದೆ'. ಅಲ್ಲಿನ ಸಾಮಾಜಿಕ–ಆರ್ಥಿಕ–ರಾಜಕೀಯ. ಧಾರ್ಮಿಕ–ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ಆಮೂಲಾಗ್ರ ಅಧ್ಯಯನ, ಇಂದಿಗೆ 4500 ವರ್ಷ ಹಿಂದೆ ಅಲ್ಲಿ ನಡೆದಿತ್ತು, ಮಾನವಕುಲದ ಮೊಟ್ಟಮೊದಲ ರೈತ ಬಂಡಾಯ, ದೇಶದ ಬಲಾಢ್ಯರಿಗಿದಿರು. ಲಿಪಿಕಾರನಾಗಲು ತುಡಿತ. 1975ರ ಬೇಸಗೆಯಲ್ಲಿ ಬರೆಯತೊಡಗಿದೆ. ಸುತ್ತಲೂ ಉಸಿರುಕಟ್ಟಿಸುವ 'ಯಮ'ರ್ಜನ್ಸಿ. ಎಂಥ ದುರವಸ್ಥೆ ಒದಗಿತ್ತು ನಮ್ಮ ದೇಶಕ್ಕೆ, ಜನತೆಗೆ! ಕಾಲ ದೇಶಗಳನ್ನು ದಾಟಿ ಎಲ್ಲಿ ಭೂಗತನಾದರೂ ಪರಿಸರ ಬಿಡ್ತದಾ? ನಾನು ಬೇರೇನನ್ನೂ ಮಾಡಲಾಗದ ಅಸಹಾಯ ಅಂಗವಿಕಲ. ತಪ್ತ ಮಿದುಳು. ಬಲಗೈಯಲ್ಲಿ ಮಾತ್ರ ಶಕ್ತಿ. ಆಧುನಿಕರನ್ನು ಮರೆಯದೆ ಪ್ರಾಚೀನರನ್ನು ಕುರಿತು ಬರೆದೆ. ಎಲ್ಲಿ ಕ್ರೌರ್ಯ ದಬ್ಬಾಳಿಕೆ ಇರ್ತದೋ ಅಲ್ಲಿ ಜನರ ಬಂಡಾಯ ಖಚಿತ. ಆ ಮೊಟ್ಟಮೊದಲ ಬಂಡಾಯ ವಿಫಲವಾಯಿತಲ್ಲ? ಮುಂದೆಯೂ ಹಾಗೆ ಆಗಬಹುದಲ್ಲ? ಅದಕ್ಕಾಗಿಯೇ ಧರ್ಮಭ್ರಷ್ಟ ಮೆನ್ನನ ಮಾತಿನಿಂದ ಕಾದಂಬರಿಯ ಮುಕ್ತಾಯ: 'ಕತ್ತಲಾದ ಮೇಲೆ ಬೆಳಕು ಹರಿತದೆ. ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ. ನೆನಪಿಡಿ'. (ಬರೆದದ್ದನ್ನು ಜನ ಓದಬೇಕು. ಬರೆಯುತ್ತಲಿದ್ದಂತೆ

ಒಂದೊಂದೇ ಅಧ್ಯಾಯವನ್ನು ತರಿಸಿಕೊಂಡು 'ಕರ್ಮವೀರ' ಸಂಪಾದಕ ಶಂಕರ ಪಾಟೀಲರು ಧಾರವಾಹಿಯಾಗಿ ಪ್ರಕಟಿಸಿದರು. ಜತೆಯಲ್ಲೇ ಪುಸ್ತಕ ರೂಪದ ಮುದ್ರಣ ಕೂಡ. ಅಂತಿಮ ಅಧ್ಯಾಯವನ್ನು ಬರೆದ ಕೆಲವೇ ದಿನ ಗಳಲ್ಲಿ, 1976 ನವೆಂಬರ್‌ನಲ್ಲಿ, 'ಮೃತ್ಯುಂಜಯ' ಪುಸ್ತಕ ರೂಪದಲ್ಲೂ ಹೊರಬಿತ್ತು. ಒಂದು ಪ್ರತಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಧಾವಿಸಿತು. ಅಲ್ಲಿದ್ದ ನನ್ನ ಆತ್ಮೀಯ ಮಿತ್ರರೊಬ್ಬರನ್ನು ಹುಡುಕಿಕೊಂಡು! ಸೆರಮನೆಯ ಅಧಿಕಾರಿ ತಾವೂ ಅದನ್ನು ಓದಬೇಕೆಂದು ಹಟತೊಟ್ಟರು!) (ನಿಮ್ಮ ಪ್ರಶ್ನೆಗೆ ಸಂಬಂಧಿಸದ ಎರಡು ವಾಕ್ಯ–ಕ್ಷಮಿಸಿ: ನಿರಂಜನ ಪ್ರಗತಿಪಂಥ ರೂಪಿಸಿದ್ದು ಇಂದಿರಾ ಜಯಕಾರಕ್ಕೆ–ಅಂತ ಕ್ಷುದ್ರ ಪ್ರಚಾರ ನಡೆಸಿದ್ದ, ತಾವು ಎಮರ್ಜೆನ್ಸಿ ಹೀರೋಗಳೆಂದು ಮೆರೆಯಬಯಸಿದ್ದ, ಸಾಹಿತ್ಯ ಪ್ರತಿಷ್ಠಿತರಿಗೆ 'ಮೃತ್ಯುಂಜಯ' ಹೇಗೆ ಸಹ್ಯವಾಗಬೇಕು? ಎರಡೆರಡು ಪ್ರತಿ ಕಳಿಸಿದರೂ ಬಹು ಪ್ರಸಾರ ಮಾಧ್ಯಮಗಳು ಕಾದಂಬರಿಯ ತಂಟೆಗೆ ಹೋಗಲಿಲ್ಲ. ಆದರೆ ಹೆಸರೇ 'ಮೃತ್ಯುಂಜಯ'. ಪಟ್ಟಭದ್ರರ ಯೋಜಿತಮೌನದಿಂದ ಅದು ಸತ್ತೀತೆ?)

ನಿಮ್ಮ ಮುಂದಿನ ಕೃತಿ ಯಾವುದು?

ನನ್ನ 'ಕನಸಿನ ಕಾದಂಬರಿ'; ಖಂಡಿತವಾಗಿಯೂ ಕೊನೆಯ ಕಾದಂಬರಿ. 'ಮೃತ್ಯುಂಜಯ' ಮುಗಿಯುತ್ತ ಬಂದಂತೆ, ಆ ಕಣ್ಣುಮುಚ್ಚಾಲೆ ನಡೆದು ಹೋಗಿತ್ತು, ಒಂಟಿಯಾಗಿರುವವನನ್ನು ನೋಡಲು ಆಗೊಮ್ಮೆ ಈಗೊಮ್ಮೆ ಸಹೃದಯರು ಬರುವುದುಂಟು. ಪ್ರತಿಕ್ರಿಯೆ ತಿಳಿಯುವ ಕುತೂಹಲದಿಂದ ಅವರೊಡನೆ ನನ್ನ ಆ ಕಾದಂಬರಿಯನ್ನು ಕುರಿತು ಚರ್ಚಿಸಿದ್ದುಂಟು. ಯಾರೋ ಹೇಳಿದ್ದಾನೆ: ಯಾವ ವಸ್ತುವಿನ ಬಗ್ಗೆ ಲೇಖಕ ಅತಿ ಹೆಚ್ಚು ಮಾತನಾಡ್ತಾನೋ ಆ ಕೃತಿಯನ್ನು ಆತ ಬರೆಯದೇ ಹೋಗುವ ಸಂಭವ ಹೆಚ್ಚು ಅಂತ. ನನ್ನ ಮುಂದಿನ ಕೃತಿಗೂ ಅಂಥ ಅವಸ್ಥೆ ಒದಗಬಹುದೆ? ನೀವು ಒಳ್ಳೆಯವರು: 'ಬಿಡ್ತು ಅನ್ನಿ' ಎನ್ನಬಹುದು. ಜೇಡಿ ಶಿವಪ್ಪ ನಾಯಕರೇ, ನಿಮ್ಮ ನಾಲ್ಕನೆಯ ಪ್ರಶ್ನೆಯನ್ನು ಉತ್ತರಿಸುವುದಿಲ್ಲ. (Marks ಕಮ್ಮಿಯಾದರೂ ಪರವಾಗಿಲ್ಲ!)

ನಮ್ಮ ದಲಿತ ಸಾಹಿತ್ಯ ನಿಜವಾದ ಅರ್ಥದಲ್ಲಿ ದಲಿತರನ್ನ ಮುಟ್ಟುತ್ತಿದೆಯೇ ?

ಎಲ್ಲಿ ಬಂತು ? ಅಕ್ಷರಸ್ಥರು ಬೇಡವೆ ? ಸಾಹಿತ್ಯಾಸಕ್ತರು ಬೇಡವೆ ? ಆದರೆ ಒಂದು, ಅವರನ್ನಲ್ಲವಾದರೆ ಇತರರನ್ನಾದರೂ ಮುಟ್ಟಲಿ—ಸಾಧ್ಯವಿದ್ದರೆ. ಹಾಡು—ನಾಟಕಗಳ ವಿಷಯದಲ್ಲಿ ಮಾತ್ರ ನಾನು ಆಶಾವಾದಿ. ಇವೆರಡರಿಂದ ಬಹಳ ಕೆಲಸ ಆಗ್ತದೆ.

ಸಂದರ್ಶನ ಮುಗಿದು ಹೊರಟಾಗ ಇನ್ನೂ ಅಲ್ಲೇ ಕೂತಿದ್ದು ಅವರೊಂದಿಗೆ ಅನೇಕ ವಿಷಯಗಳ ಮೇಲೆ ಚರ್ಚಿಸಬೇಕೆಂಬ ತವಕ. ಕಾಲ ನಮಗಾಗಿ ನಿಲ್ಲುವಂತಿದ್ದರೆ !

ಅವರ ಪತ್ನಿ ಡಾ. ಅನುಪಮಾ ನಿರಂಜನ ನಿರಾಡಂಬರದ ಸರಳಜೀವಿ. ಅವರ ಪುತ್ರಿ ತೇಜಸ್ವಿನಿ ಮುಂಬೈನಲ್ಲಿದ್ದಾರೆಂದು ತಿಳಿಯಿತು. ದಂಪತಿಗಳು, ಅವರ ದ್ವಿತೀಯ ಪುತ್ರಿ ಸೀಮಾ ಹಸನ್ಮುಖರಾಗಿ ಬೀಳ್ಕೊಟ್ಟರು 'ಮತ್ತೆ ಬನ್ನಿ' ಎನ್ನುತ್ತ. ಹೊರಗೆ ರಾತ್ರಿ ನಿಸ್ತಬ್ಧವಾಗಿತ್ತು. ಯಾವುದೋ ಲೋಕದಿಂದ ಬೆಂಗಳೂರಿನ ಜಯನಗರದ ರಸ್ತೆಗಿಳಿದಂತೆ.

—೧೯೮೧

ಪ್ರಾಧ್ಯಾಪಕ ಬಿದರಹಳ್ಳಿ ನರಸಿಂಹಮೂರ್ತಿ ಕನ್ನಡದ ಖ್ಯಾತ ಯುವ ಕವಿ, ಕತೆಗಾರ, ವಿಮರ್ಶಕ. ಅವರ ಇನ್ನೊಂದು 'ಹೆಸರು' ಶಿವಪ್ಪನಾಯಕ. (ಈ ಸ್ವಯಂ ನಾಮಕರಣಕ್ಕೆ ಹತ್ತಿರದ ಬಿದನೂರು ಸ್ಫೂರ್ತಿ ನೀಡಿತೇನೋ) ಆರ್. ಗೋಪಾಲ ನಾಯಕರ ಸಂಪಾದಕತ್ವದ ಶಿವಮೊಗ್ಗೆಯ 'ವಿಚಾರಿ' ಸಾಪ್ತಾಹಿಕದಲ್ಲಿ ಅವರು ಬರೆದ ಲೇಖನ ನಿರಂಜನ-ಶಿವಪ್ಪನಾಯಕರ ನಡುವೆ ಸ್ನೇಹತಂತುವನ್ನು ಹೊಸೆಯಿತು.
ಮನೆಗೊಮ್ಮೆ ಬಂದರು. 'ಸಂದರ್ಶನ'ದ ಮಾತಿರಲಿಲ್ಲ. ಊರಿಗೆ ಮರಳಿದವರು ಪ್ರಶ್ನಾವಳಿ ಕಳಿಸಿದ್ದರು. ಉತ್ತರಗಳನ್ನು ಅಂಚೆಗೆ ಹಾಕಿದೆ. ಎಲ್ಲವೂ ಮುಖಾ ಮುಖಿ ನಡೆಯಿತೇನೋ ಎಂದು ಭ್ರಮೆ ಹುಟ್ಟಿಸುವ ಸಂದರ್ಶನ ಲೇಖನ ಬರೆದರು. 'ವಿಚಾರಿ'ಯ ೧೯೮೧ ನವೆಂಬರ್ ಮೂವತ್ತರ ಸಂಚಿಕೆಯಲ್ಲಿ ಅದು ಪ್ರಕಟವಾಯಿತು. —ನಿ.

‘ನನ್ನ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು’
ಆಕಾಶವಾಣಿಯ ಮಾಲಿಕೆಯಲ್ಲಿ ನಿರಂಜನರೊಡನೆ ಸಂದರ್ಶನ

ಕುಮಾರಿ ಎನ್. ಗಾಯತ್ರಿ

ಗಾಯತ್ರಿ : ನಮಸ್ಕಾರ ನಿರಂಜನರವರೇ, ಇವತ್ತು ನಿಮ್ಮ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳನ್ನು ಕುರಿತು ಚರ್ಚಿಸೋಣಾಂತ....

ನಿರಂಜನ : ತುಂಬಾ ಸಂತೋಷ.

ಗಾ : ನೀವು ಪ್ರಗತಿಶೀಲ ಸಾಹಿತಿ ಅಂತ ನಾನು ಗುರುತಿಸ್ತೀನಿ.

ನಿ : ನಿಮ್ಮಿಷ್ಟ.

ಗಾ : ಇನ್ನು ಪ್ರಗತಿಶೀಲ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸುವಾಗ ನಿಮ್ಮ ಸಮಕಾಲೀನ ಪ್ರಗತಿಶೀಲ ಸಾಹಿತಿಗಳಾದ ಕಟ್ಟೀಮನಿ, ತ.ರಾ. ಸು, ಹಾಗೂ ಅ.ನ.ಕೃ ರವರು ಸ್ತ್ರೀಪಾತ್ರಗಳನ್ನು ನಿರ್ವಹಿಸುವ ರೀತಿಗೂ, ಅವರು ತಳೆಯುವ ನಿಲುವಿಗೂ ಮತ್ತು ನಿಮ್ಮದಕ್ಕೂ ಒಂದು ರೀತಿಯ ಅಂತರ ಕಾಣಿಸುತ್ತೆ.

ನಿ : ಅದು ನಿಮ್ಮ ಅಭಿಪ್ರಾಯ.

ಗಾ : ಸರಿ, ಅದಕ್ಕೆ ಏನು ಕಾರಣ? ಯಾವುದಾದರೂ ತಾತ್ವಿಕ ದರ್ಶನ ಕಾರಣವೇ? ಅಥವಾ ಇದು ನಿಮ್ಮ ವೈಯಕ್ತಿಕ ವಿಶಿಷ್ಟತೆಯೇ? ಅಥವಾ ಸಾಹಿತ್ಯಿಕ ಪ್ರಭಾವವೇ?

ನಿ : ನಾನು ಒಂದು ರೀತಿಯ confessionಮಾಡಿಬಿಡಬೇಕು. ನೀವು

ಹೇಳಿದಿರಲ್ಲಾ, ಆ ನನ್ನ ಸ್ನೇಹಿತರ ಕೃತಿಗಳನ್ನು ನನ್ನ ಕೃತಿಗಳನ್ನು ನಾನು ಎಂದೂ ತೌಲನಿಕವಾಗಿ ಅಧ್ಯಯನ ಮಾಡಿಲ್ಲ. ಅವರ ಕೃತಿಗಳನ್ನು ಓದಿದೀನಿ. ನೀವು ಕೇಳಿದ್ರಿ, ಈ ಭಿನ್ನ ಪಾತ್ರ ಚಿತ್ರಣಕ್ಕೆ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಪ್ರಭಾವಗಳು ಇವೆಯೇ ಅಂತ. ಇರಬಹುದು. ಯಾಕೆಂದರೆ, ಎಲ್ಲ ಬರೆಹಗಾರರೂ ಒಂದೇ ಅಚ್ಚಿನಲ್ಲಿ ಸಿದ್ಧವಾಗಿ ಬಂದಿರೋದಿಲ್ಲ. ಪ್ರತಿಯೊಬ್ಬರೂ ಅವರವರದೇ ಅನುಭವಗಳಿಂದ, ಅವರವರ ಅನಿಸಿಕೆಗಳಿಂದ, ಅವರ ಜೀವನದ ರೀತಿನೀತಿಗಳಿಂದ ತಮ್ಮನ್ನು ರೂಪಿಸಿಕೊಂಡಿರ್ತಾರೆ. ಇಲ್ಲಿ ತತ್ತ್ವಶಾಸ್ತ್ರ ಬರಬಹುದು, ಸಮಾಜ ವಿಜ್ಞಾನ ಬರಬಹುದು, ರಾಜಕೀಯ ಬರಬಹುದು. ನಾನಾ ರೀತಿಯ ಶಾಸ್ತ್ರಗಳಿಂದ, ಜ್ಞಾನಗಳಿಂದ ತಮ್ಮನ್ನು ರೂಪಿಸಿಕೊಂಡಿರ್ತಾರೆ. ನನ್ನ ಮಟ್ಟಿಗೆ ಹೇಳೋದಾದ್ರೆ, ನನಗೆ ತೀರ 'ಕಿಕ್' ಕೊಟ್ಟಂಥದು ಬದುಕು. ಬದುಕಿನಿಂದ ನಾನು ಸಾಕಷ್ಟು ಕಹಿ ಉಂಡಿದೀನಿ; ಸಾಕಷ್ಟು ಸಂತೋಷ ಪಟ್ಟಿದೀನಿ. ಬದುಕಿಗೆ ನಾನು ತೀರ ಸಮೀಪವಾಗಿರ್ತೀನಿ. ಆರಂಭದಿಂದ, ಚಿಕ್ಕಂದಿನಿಂದಲೂ ನಾನು ಇದನ್ನ (ಈ ಗುಣವನ್ನು) ಉಳಿಸಿಕೊಂಡೇ ಬಂದಿದೀನಿ. ಆ ದೃಷ್ಟಿಯಿಂದ ನನ್ನ ಪಾತ್ರಗಳು ಬೇರೆಯವರ ಪಾತ್ರಗಳಿಗಿಂತ ಭಿನ್ನವಾಗಿದ್ದರೆ, ಅದು ಸಹಜ.

ಗಾ : ಅಂದರೆ ಸಾಹಿತ್ಯೇತರವಾದ ಯಾವ ದರ್ಶನದ ಪ್ರೇರಣೆಯೂ ನಿಮಗಾಗಿಲ್ಲವೇ ?

ನಿ : 1938 ರಲ್ಲಿ* ನಾನು ಬರವಣಿಗೆ ಆರಂಭ ಮಾಡಿದ್ದು. ಆಗ ವಯಸ್ಸು ಹದಿನಾಲ್ಕು**. ಆಗ ನಾನು ಬರೆದ ಮೂರನೇ ಕಥೆ, 'ಪತಿವ್ರತೆ' ಅಂತ. ಆಮೇಲೆ ಕೆಲವು ವರ್ಷಗಳ ಅನಂತರ ಕಾದಂಬರಿಗಳನ್ನ ಬರೆದೆ. ಇದರ ಮಧ್ಯೆ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದ್ದೆ, ಭೂಗತನಾಗಿದ್ದೆ. ಪೋಲೀಸರು ನನ್ನನ್ನು ಬೆನ್ನಟ್ಟಿಕೊಂಡು ಬರುತ್ತಿದ್ದರು. ಆದ್ದರಿಂದ ಕಾದಂಬರಿಗಳ ಬರವಣಿಗೆ ಆಗ ಸಾಧ್ಯವಾಗ್ಲಿಲ್ಲ. ರಾಮಾಯಣ, ಮಹಾಭಾರತಗಳನ್ನು ಓದಿದ್ದೆ. ಅದಕ್ಕೂ (ಆ ಓದಿಗೂ) ನನ್ನ ಸ್ತ್ರೀ ಪಾತ್ರಗಳಿಗೂ ಯಾವ ಸಂಬಂಧವೂ ಇಲ್ಲ. ಅವು ನಾನು ತುಂಬಾ ಮೆಚ್ಚಿಕೊಂಡಿರುವ

---

*1937 ಎಂದಾಗಬೇಕು. **ಹದಿಮೂರು

ಮಹಾಕಾವ್ಯಗಳು. ನನ್ನ ಪರಿಸರದ ಬದುಕೇ ನನ್ನ ಸಾಹಿತ್ಯ ಕೃತಿಗೆ ಪ್ರೇರಕ. ಉದಾಹರಣೆಗೆ, ನನ್ನ ಕಥೆ 'ಬಹಿಷ್ಕೃತೆ' ನನ್ನ ತಾಯಿಯ ಬದುಕಿನಿಂದ ಪ್ರೇರಣೆಗೊಂಡದ್ದು. ಆಕೆಯ ಬದುಕೇ ಆ ಕಥೆಗೆ ಪ್ರೇರಕ. ಯಾವುದೇ ಸಾಹಿತ್ಯ ಕೃತಿಗೂ ನಾವು ಬದುಕಿನಲ್ಲಿ ಕಂಡ, ಕೇಳಿದ, ಅರಗಿಸಿಕೊಂಡ ಘಟನೆಗಳೇ ವಸ್ತುವನ್ನು ಒದಗಿಸ್ತವೆ. ವಸ್ತುವಿನಲ್ಲಿ ಭಿನ್ನತೆ ಇರುವುದಕ್ಕೆ ಕಾರಣ, ಮುಖ್ಯವಾಗಿ ಲೇಖಕ ಜೀವನವನ್ನು ನೋಡುವ ದೃಷ್ಟಿ. ಆ ದೃಷ್ಟಿ ನಾನು ಹುಡುಗನಾಗಿದ್ದಾಗ ಇರಲಿಲ್ಲ. ಹುಡುಗನಾಗಿದ್ದಾಗ ಬಂಡಾಯದ ಪ್ರವೃತ್ತಿಯೊಂದಿತ್ತು; ಪ್ರತಿಭಟನೆಯ ಪ್ರವೃತ್ತಿಯೊಂದಿತ್ತು. ಕ್ರಮೇಣ ನಾನು ಬೆಳೆಯುತ್ತಾ, ಪ್ರಬುದ್ಧನಾದ ಹಾಗೆ, ತಿಳಿವಳಿಕೆ ಬೆಳೆಯುತ್ತಾ ಬಂದ ಹಾಗೆ ಸಮಾಜವನ್ನು ದೂರ ನಿಂತು, ವಸ್ತುನಿಷ್ಠವಾಗಿ ನೋಡುವ ದೃಷ್ಟಿ ಸಾಧ್ಯವಾಯಿತು. ಆಗ ಬರವಣಿಗೆಯಲ್ಲಿ ನಾನು ಕಂಡದ್ದು ಅರ್ಥಪೂರ್ಣ ವಾಗುವುದಕ್ಕೆ ಸಾಧ್ಯವಾಯಿತು. ನನ್ನ ಕಥೆಗಳಲ್ಲಿ ಇದು ಬಂದಿದೆ. ಆಮೇಲೆ ಕಾದಂಬರಿಗಳಲ್ಲೂ ಇದು ಬಂದಿದೆ. ನನ್ನ ಆರಂಭದ ಕಾದಂಬರಿ 'ವಿಮೋಚನೆ'. ಇದರಲ್ಲಿ ನಾನಾ ಸ್ತರಗಳಿಂದ ಬಂದ ಮಹಿಳಾ ಪಾತ್ರಗಳಿವೆ. ಅವರಲ್ಲೆಲ್ಲಾ ಒಂದು ಅಂಶವನ್ನು ನೀವು ಕಾಣ್ತೀರಿ. ಅದು ಅನುಕಂಪ. ಲೇಖಕನಿಗೆ ಮುಖ್ಯವಾಗಿ ಈ ಪಾತ್ರಗಳ ಬಗ್ಗೆ ಅನುಕಂಪ ಇದೆ. ಈ ಅನುಕಂಪ ಯಾಕೆ ಬಂತು? ನನ್ನ ದೃಷ್ಟಿಯಲ್ಲಿ ಅನುಕಂಪ ಕೇವಲ ಕರುಣೆಯಲ್ಲ; ಬರೀ ಕಣ್ಣೀರು ಮಿಡಿಸುವ ಕರುಣೆಯಲ್ಲ. ನನ್ನ ದೃಷ್ಟಿಯಲ್ಲಿ ಅನುಕಂಪ ಅಂದ್ರೆ ಅದು ರೋಷವನ್ನು ಉಕ್ಕಿಸ್ತದೆ. ಇದ್ದದ್ದರ ಬಗ್ಗೆ ಬೇಸರ ಹುಟ್ಟಿಸ್ತದೆ; ಮತ್ತು ಓದುಗನನ್ನು ಪ್ರೇರೇಪಿಸ್ತದೆ—ವಿಚಾರ ಮಾಡಿ ನೋಡು ನೀನು, ಅಂತ ಹೇಳ್ತದೆ. ಈ ದೃಷ್ಟಿಯಿಂದ ನನ್ನ ಈ ಪಾತ್ರಗಳು ಬದುಕಿನ ಮೂಸೆಯಿಂದ ಮೂಡಿ ಬಂದಿರ್ತವೆ. ನನ್ನ ಯಾವ ಕಾದಂಬರೀನ ತಗೊಂಡರೂ ನೀವು ಇದನ್ನು ನೋಡಬಹುದು—ಕೆಲವನ್ನು ಬಿಟ್ಟು, ಅವಸರದಲ್ಲಿ ಬರೆದ ಕೆಲವನ್ನು ಬಿಟ್ಟು.

ಗಾ : ಇಲ್ಲಿ ನನ್ನ ಪ್ರಶ್ನೆ...........ನೀವು ಹೇಳಿದಂತೆ, ಅನುಭವದ ದ್ರವ್ಯವೇ ಮುಖ್ಯವೆನ್ನುವುದನ್ನು ಒಪ್ಪಿಕೊಂಡರೂ, ಈ ದ್ರವ್ಯವನ್ನು ನೋಡುವ ದೃಷ್ಟಿಕೋನ ಕೂಡ ಒಂದು ಕಾದಂಬರಿಯನ್ನು ವಿಶಿಷ್ಟ

ವಾಗಿಸುತ್ತದೆ, ಅಲ್ಲವಾ? ಅಂದರೆ, ನೀವು ಮಾರ್ಕ್ಸ್‌ವಾದಿ ಚಿಂತಕರು, ಎಂದು ನಮಗೆಲ್ಲಾ ಗೊತ್ತು. ನಿಮ್ಮ 'ವಿಮೋಚನೆ' ಮತ್ತು ಇನ್ನಿತರ ಕಾದಂಬರಿಗಳಲ್ಲಿ ವಿವಿಧ ವರ್ಗಗಳಿಗೆ ಸಂಬಂಧಿಸಿದ ಮಹಿಳೆಯರ ಮೌಲ್ಯಗಳನ್ನು ಚಿತ್ರಿಸುವಾಗ ಈ ತಾತ್ವಿಕ ದೃಷ್ಟಿಕೋನ ನೆರವು ನೀಡಿದೆಯಾ?

ನಿ: ನಾನು ಆಗಲೇ ಹೇಳಿದ ಹಾಗೆ ಬರೆವಣಿಗೆ ಶುರುಮಾಡಿದಾಗ ನನಗೆ ಮಾರ್ಕ್ಸ್ ಯಾರು ಅನ್ನೋದು ಗೊತ್ತಿರಲಿಲ್ಲ. ಮಾರ್ಕ್ಸ್‌ನ ಪರಿಚಯ ಆದದ್ದು ಸ್ವಲ್ಪ ತಡವಾಗಿ, ನಾನು ಹೈಸ್ಕೂಲಿನಲ್ಲಿ ಇದ್ದಾಗ. ಆಗಲೇ ನಾನು ಅವನನ್ನು ಪೂರ್ತಿ ಅರ್ಥಮಾಡಿಕೊಂಡಿದ್ದೆ ಅಂತ ಹೇಳಲಾರೆ. ಒಂದು ಬರೆವಣಿಗೆಯನ್ನು ಬರೆವಣಿಗೆಯಾಗೇ ತೆಗೆದುಕೊಂಡು, ಕಥೆಗಳನ್ನು ಕಥೆಗಳಾಗೇ ತೆಗೆದುಕೊಂಡು ಓದುಗರು ಆನಂದಪಟ್ಟರೆ, ಅದನ್ನು ನೋಡಿ ಖುಷಿ ಪಡುತ್ತಾ ಇದ್ದವನು ನಾನು. ಆದರೆ ಇತರ ಎಲ್ಲ ತತ್ವಜ್ಞಾನಗಳು ನನ್ನ ಮೇಲೆ ಪ್ರಭಾವ ಬೀರಿರುವ ಹಾಗೆ, ಮಾರ್ಕ್ಸ್‌ವಾದವೂ ನನ್ನ ಮೇಲೆ ಪ್ರಭಾವ ಬೀರಿದೆ. ಗಾಂಧೀವಾದ ಇದಕ್ಕೆ ಮುಂಚೆ ನನ್ನ ಮೇಲೆ ಪ್ರಭಾವ ಬೀರಿತ್ತು. ಇದನ್ನು ನನ್ನ ಕೆಲವು ಕೃತಿಗಳಲ್ಲಿ ಗುರುತಿಸಬಹುದು. ಹರಿಜನರ ಕೇರಿಗಳಿಗೆ ಹೋಗಿ, ಅಲ್ಲಿ ಕಸಗುಡಿಸ್ತಿದ್ದೆವು. ಇದು ಒಂದು ದೊಡ್ಡ ಕ್ರಾಂತಿಕಾರಿ ಸಾಧನೆ ಅಂತ ನಂಬಿದ್ದ ಕಾಲ ಅದು. ಕ್ರಮೇಣ ಇದು ವ್ಯರ್ಥ, ಇದರಲ್ಲೇನೂ ಅರ್ಥವಿಲ್ಲ–ಎಂದು ಗೊತ್ತಾದಾಗ, ಬೇರೊಂದು ವಾದ ಬಂತು. ಅದು ಸಮಾಜವಾದ. ರಾಜಕೀಯ ಚಿಂತಕರಾಗಿ ನೆಹರೂ ಸಮಾಜವಾದದ ಮಾತಾಡ್ತಿದ್ದರು. ಆರಂಭದಲ್ಲಿ ಅವರಿಂದಲೇ ಎಷ್ಟೋ ಜನ ಸಮಾಜವಾದದ ಬಗ್ಗೆ ತಿಳಿದುಕೊಂಡರು. ಅದರ ಹಿಂದೆಯೇ ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಸಾಹಿತ್ಯ ಬಂತು. ಇವೆಲ್ಲಾ ಸಮಾಜವನ್ನು ತಿಳಿದುಕೊಳ್ಳೋದಕ್ಕೆ, ಸಮಾಜದ ಆಂತರಿಕ ಘರ್ಷಣೆಗಳನ್ನು ತಿಳಿದುಕೊಳ್ಳೋದಕ್ಕೆ, ಸಮಾಜದ ವಿವಿಧ ವರ್ಗಗಳ ಜನರು ಯಾಕೆ ಈ ರೀತಿ ವರ್ತಿಸ್ತಾರೆ ಅಂತ ತಿಳಿದುಕೊಳ್ಳೋದಕ್ಕೆ ಸಹಾಯವಾದುವು. ಅದನ್ನು ಒಪ್ಪಿಕೊಳ್ಳಲೇಬೇಕು. ಸಮಗ್ರ ಚಿಂತನೆಯಲ್ಲಿ. ಸಮಗ್ರ ಅನುಭವದ ಪರಿಪಾಕದ ಒಂದು ಅಂಗವಾಗಿವೆ, ಈ ತಿಳುವಳಿಕೆ.

ಮನುಕುಲದ ವಿಜ್ಞಾನ ಈ ಒಟ್ಟು ತಿಳಿವಳಿಕೆಯ ಒಂದು ಭಾಗ. ಇದು ನನ್ನ ಕೃತಿಗಳಲ್ಲಿ ಯಾವಾಗಲೂ ಬರುತ್ತೆ.

ಗಾ : 'ಬನಶಂಕರಿ'ಯ ಬನಶಂಕರಿ, 'ಅಭಯ'ದ ತುಂಗಮ್ಮ, 'ಸ್ಮರಣೆಯೊಂದೇ ಸಾಲದೆ?'ಯ ಮೀನಾಕ್ಷಿ, 'ಏಕಾಂಗಿ'ಯ ಸುನಂದ- ಇವರೆಲ್ಲಾ ಬದುಕಿನಲ್ಲಿ ನೋವುಂಡವರು. ಬದುಕಿನ ಪ್ರವಾಹದಲ್ಲಿ ಬದುಕಿನ ಸಮಸ್ಯೆಗಳ ವಿರುದ್ಧ ದಿಟ್ಟತನದಿಂದ ಹೋರಾಡಿದವರು. ಅವರಲ್ಲಿ ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಲೀ, ಬದುಕಿನಿಂದ ಪಲಾಯನ ಮಾಡಿದವರಂತಾಗಲೀ ಕಾಣುವುದಿಲ್ಲ. ಇದು ಒಂದು ಆದರ್ಶ ಅಲ್ಲವಾ ? ಆದರೆ ನಮ್ಮ ಸುತ್ತ ಮುತ್ತಲಿನ ವಾಸ್ತವದಲ್ಲಿ ಹೆಚ್ಚಾಗಿ ಜೀವನದಿಂದ ಪಲಾಯನಮಾಡುವವರನ್ನೇ ಕಾಣುತ್ತೇವೆ. ಅಂದರೆ,ಈ ಆದರ್ಶ ಮತ್ತು ವಾಸ್ತವತೆಯನ್ನು ನೀವು ಹೇಗೆ ನಿರ್ವಹಿಸುತ್ತೀರಾ ?

ನಿ : ಹೌದು. ಈ ಎರಡರ ಸಾಮರಸ್ಯ ಸಾಧಿಸೋಕೆ ಪ್ರಯತ್ನ ಪಟ್ಟಿದ್ದೀನಿ ಅಂತ ಅನಿಸುತ್ತೆ. ನನ್ನ ಸ್ತ್ರೀ ಪಾತ್ರ ಆತ್ಮಹತ್ಯೆ ಮಾಡಿಕೊಳ್ಳದೇ ಇದ್ದರೆ, ಅದಕ್ಕೆ ಆಕೆ ಆತ್ಮಹತ್ಯೆ ಮಾಡಿಕೊಳ್ಳಬಾರದು ಅಂತ ನನಗಿರುವ ಆಶಯವೂ ಕಾರಣ. ಆಕೆ ಆತ್ಮಹತ್ಯೆಯನ್ನೇ ಮಾಡಿಕೊಳ್ಳದೆ ಬದುಕನ್ನು ಎದುರಿಸಬೇಕು ಎನ್ನುವ ಆಶಯ ಕೆಲವು ಕಡೆ ಸ್ಪಷ್ಟವಾಗಿ ಇರಬಹುದು, ಇನ್ನು ಕೆಲವು ಕಡೆ ಅಸ್ಪಷ್ಟವಾಗಿ ಬಂದಿರಬಹುದು. ನಾನಾ ಸ್ತರಗಳಲ್ಲಿ ಓದುಗನನ್ನು ಮುಟ್ಟೋಕೆ ಪ್ರಯತ್ನಪಟ್ಟಿದ್ದೀನಿ. ಸಾಮಾನ್ಯವಾಗಿ ಸುಲಭವಾದ ರೀತಿಯಲ್ಲಿ ಹೆಣ್ಣು ತನ್ನ ಜೀವನ ಮುಕ್ತಾಯಗೊಳಿಸ್ಬೇಕು ಅಂತ ನಂಬಿರುವವನು ನಾನಲ್ಲ. ನನ್ನ ದೃಷ್ಟಿಯಲ್ಲಿ ಗಂಡಿಗಿಂತ ಹೆಣ್ಣು ಸಮಾಜ ವ್ಯವಸ್ಥೆಯಲ್ಲಿ ಹೆಚ್ಚು ಮಹತ್ವದ ವ್ಯಕ್ತಿ. ಯಾಕೆಂದರೆ, ಹೆಣ್ಣಿಗೆ ಸಮಾಜದಲ್ಲಿ ವಿಶೇಷವಾದ ಜವಾಬ್ದಾರಿಗಳಿವೆ. ಇವತ್ತು ಸ್ತ್ರೀ ವಿಮೋಚನಾ ಚಳವಳಿಯನ್ನು ಒಪ್ಪದೇ ಇರುವವರು ಇರಬಹುದು. ನಾವು ಹೆಚ್ಚೇನೂ ಅಲ್ಲ, ಸಮಾನತೆ ಇದ್ದರೆ ಸಾಕು—ಎನ್ನುವವರೂ ಇರಬಹುದು. ಆದರೆ ನನ್ನ ದೃಷ್ಟಿಯಲ್ಲಿ ಅವಳಿಗೆ ಗಂಡಿಗಿಂತ ಹೆಚ್ಚು ಜವಾಬ್ದಾರಿಗಳಿವೆ. ಅವಳು ಸೋದರಿ ಇರಬಹುದು, ಮಾತೆ ಇರಬಹುದು, ಹೆಂಡತಿ ಇರಬಹುದು. ನಾನು

ಮಾತೃ ದೇವೋಭವ ಎನ್ನುವ ಹಳೆಯ ಮಾತಿಗೆ ಹೋಗ್ತಾ ಇಲ್ಲ. ಆಕೆ "ಒಲಿದರೆ ನಾರಿ ಮುನಿದರೆ ಮಾರಿ". ಅವಳು ಮಹಾ ಸಮರ್ಥಳು. ಹೆಣ್ಣು ತನ್ನ ಕೆಲವು ಗುಣಗಳಲ್ಲಿ ಗಂಡನ್ನು ಮೀರಿಸಬಲ್ಲಳು. ನನ್ನ ಎಲ್ಲ ಹೆಣ್ಣು ಪಾತ್ರಗಳಲ್ಲಿ ಸ್ತ್ರೀಯ ದೌರ್ಬಲ್ಯವನ್ನು ಎತ್ತಿ ತೋರಿಸಿದ್ದೇನೆ. ಉದಾಹರಣೆಗೆ, 'ಮೃತ್ಯುಂಜಯ' ಕಾದಂಬರಿಯಲ್ಲಿ ಮಹಾರಾಣಿ ಬರ್ತಾಳೆ. ಅವಳ ಒಂದು ಕಣ್ಣು ಗದ್ದುಗೆಯ ಮೇಲೆ. ಅದಕ್ಕಾಗಿ ಅವಳು ಏನನ್ನಾದರೂ ತ್ಯಾಗ ಮಾಡಬಲ್ಲಳು. ಗಂಡನನ್ನು ಕೂಡ. ಮಗನಿಗೆ ಸಿಂಹಾಸನ ಸಿಗಬೇಕೆಂಬುದು ಅವಳ ಆಸೆ. ಅದಕ್ಕಾಗಿ ಅವಳು ಮಹಾ ಅರ್ಚಕನೊಂದಿಗೆ ಎಂತಹ ರಾಜಿಗಾದರೂ ಸಿದ್ಧ. ತನ್ನನ್ನೇ ತಾನು ಸಮರ್ಪಿಸಿಕೊಳ್ಳುವುದಕ್ಕೆ ತಯಾರಾಗ್ತಾಳೆ. ತನ್ನ ಬಲಿಯನ್ನೇ ತಾನು ಕೊಡಲು ಸಿದ್ಧ ಎಂದು ಮಹಾ ಅರ್ಚಕನಿಗೆ ಹೇಳ್ತಾಳೆ. ನನ್ನ ಕಾದಂಬರಿಯಲ್ಲಿ ಇಂತಹ ಸ್ತ್ರೀ ಪಾತ್ರಗಳನ್ನೂ ಚಿತ್ರಿಸಿದ್ದೇನೆ. ನೀವು ಹೇಳಿದ ಕೆಲವು ಪಾತ್ರಗಳೆಲ್ಲಾ, ಜೀವನದಲ್ಲಿ ಸೋಲಬಾರದು, ಗೆಲ್ಲಬೇಕು, ಜೀವನವನ್ನು ಎದುರಿಸಬೇಕು ಎನ್ನುವ ಆಶಯವನ್ನು-ನಿಮ್ಮ ಮಾತಿನಲ್ಲಿ ಹೇಳುವುದಾದರೆ ಆದರ್ಶವನ್ನು—ವಾಸ್ತವತೆಯೊಂದಿಗೆ ಬೆರೆಸಿ ಪಾತ್ರಗಳನ್ನು ಚಿತ್ರಿಸಲು ಯತ್ನಿಸಿದ್ದೇವೆ. ವಾಸ್ತವತೆಯನ್ನು ಬಿಟ್ಟಿರುವುದು ಸಾಧ್ಯವಿಲ್ಲ. ಇಲ್ಲಿ 'ಆದರ್ಶ' ಎಂದರೆ, ಸಾಧಿಸಲಾಗದಂಥದು ಎಂದು ನೀವು ತಿಳ್ಕೋಬಾರದು. 'ಆದರ್ಶ' ಎಂದರೆ ಒಂದು ರೀತಿಯ ವಾದ. ಬರೇ ಶುಷ್ಕವಾದ, ನಿಷ್ಪ್ರಯೋಜಕವಾದ, ಕೃತಿಗೆ ಇಳಿಸಲಾಗದಂಥದು ಎಂಬ ಅರ್ಥದಲ್ಲಿ ನಾನು 'ಆದರ್ಶ' ಪದವನ್ನು ಬಳಸುತ್ತಿಲ್ಲ.

ಗಾ: ಇಲ್ಲೆಲ್ಲಾ ನಿಮ್ಮ ಆದರ್ಶಗಳು ನಿಮ್ಮ ಆಶಯ ಆಗಿವೆ. 'ನಂದಗೋಕುಲ'ದಲ್ಲಿ ವೇಶ್ಯೆಯನ್ನು ಓಡಿಸಲು ಅಲ್ಲಿ ಜನ ಅನುಸರಿಸುವ ಮಾರ್ಗ, ಬನಶಂಕರಿಯು ತನ್ನ ಸಮಸ್ಯೆಗೆ ವಿಧವಾ ವಿವಾಹ ಮಾಡಿಕೊಳ್ಳದೆ ವಿವಾಹೇತರ ಸಂಬಂಧವನ್ನು ಪರಿಹಾರವಾಗಿ ಹೊಂದುವುದು ನಿಮ್ಮ ಆದರ್ಶ ಅಲ್ಲ ಅಂತ ತಿಳ್ಕೋತೀನಿ. ಇದು ವಾಸ್ತವ ಸಂಗತಿ. ಇಲ್ಲಿ ನಿಮ್ಮ ಆದರ್ಶದ ಆಶಯಾನೇ ಬೇರೆ ಆಗಿದೆ. ಅಂದರೆ, ಅದನ್ನು ನಿಮ್ಮ ಕಾದಂಬರಿಯಲ್ಲಿ ಚಿತ್ರಿಸಲು ನೀವು ಅನುಸರಿಸುವ ಮಾರ್ಗ ಯಾವುದು?

ನಿ : ನೀವು 'ನಂದಗೋಕುಲ'ದ ವೇಶ್ಯೆಯ ಬಗ್ಗೆ ಹೇಳಿದಿರಿ. ಅಲ್ಲಿನ ಹುಡುಗರೆಲ್ಲಾ ಸೇರಿ ಆ ವೇಶ್ಯೆಯನ್ನು ಓಡಿಸ್ತಾರೆ. ಇದು ನಿಜ. ಇಂತಹ ಹೆಣ್ಣೊಂದು ತನ್ನೊಡನೆ ವಾಸಿಸಲು ಬಂದರೆ ಮಧ್ಯಮವರ್ಗದ ಜನ ತಮ್ಮ ಸಮಾಜದ ಮೌಲ್ಯಗಳು ಕುಸಿದಾವು ಎಂದು ಹೀಗೆ ವರ್ತಿಸೋದು ಸಹಜ. ಇದು ವಾಸ್ತವತೆ; ಆದರ್ಶ ಅಲ್ಲ. ಇನ್ನು 'ಬನಶಂಕರಿ'. ಈ ಕಾದಂಬರಿಯ ಕಥೆಯ ಕಾಲ ಬಹಳ ಹಿಂದಿನದು. ಈ ಶತಮಾನದ ಆರಂಭಕ್ಕೆ (ಮೊದಲ ದಶಕಕ್ಕೆ) ಬರುತ್ತೆ. ಆ ಸಂದರ್ಭದಲ್ಲಿ ಬನಶಂಕರಿ ಎಂಟು ವರ್ಷದ ಬಾಲ ವಿಧವೆ. ಅವಳು ಬಂದ ಸಮಾಜದ ಹಿನ್ನೆಲೆಯಲ್ಲಿ ಪುನರ್ವಿವಾಹದ ಮಾತೇ ಇಲ್ಲ. ಸಮಾಜದ ಬೇರೆ ಸ್ತರಗಳಲ್ಲಿ ಬೇರೆ ರೀತಿಯ ಪದ್ಧತಿಯಿರುತ್ತೆ. ಕೆಲವರು ಕೂಡಿಕೆ ಮಾಡಿಕೊಳ್ತಾರೆ, ಬಿಟ್ಟು ಹೋಗ್ತಾರೆ, ಮತ್ತೆ ಕಟ್ಟಿಕೊಳ್ತಾರೆ. ಅವರಿಗೆ ಸಮಸ್ಯೆ ಸುಲಭವಾಗಿ ಪರಿಹಾರವಾಗುತ್ತೆ. ಆದರೆ ಮಧ್ಯಮ ವರ್ಗದವರಲ್ಲಿ ಇದು ಅಷ್ಟು ಸುಲಭವಲ್ಲ. ಈ ಬರೆವಣಿಗೆಯೆಲ್ಲ ಯಾರಿಗಾಗಿ ಹೇಳಿ? ಅಕ್ಷರ ಬಲ್ಲವರಿಗಾಗಿ, ಮಧ್ಯಮ ವರ್ಗದವರಿಗಾಗಿ. ಆ ವರ್ಗದಲ್ಲೂ ಎಲ್ಲರೂ ಓದ್ತಾರೆ ಅಂತಲ್ಲ. ನಾನು ನನ್ನ ಕೃತಿಗಳನ್ನು, ಮಧ್ಯಮ ವರ್ಗದವರಿಗೆ ಮುಟ್ಟಿಸಬೇಕಂತಲೇ ಅಂಥ ವಸ್ತುಗಳನ್ನು ಆಯ್ದುಕೊಂಡಿದೀನಿ. ಗಂಡಿಗಿಂತ ಹೆಣ್ಣು ಹೆಚ್ಚು ಮುಖ್ಯಳು ಎನ್ನುವ ಕಾರಣದಿಂದ ಈ ಸ್ತ್ರೀ ಪಾತ್ರಗಳನ್ನು ನಾನು ಸೃಷ್ಟಿಸಿದ್ದೀನಿ.

ಗಾ : ಬದಲಾವಣೆ ಒಪ್ಪುವ ನಿಮ್ಮ ಕಾದಂಬರಿಯ ಸ್ತ್ರೀ ಪಾತ್ರಗಳಿಗೆ ಪ್ರೇರಕ ಶಕ್ತಿಯಾಗಿ ಪುರುಷರೇ ಬರುತ್ತಾರೆ. ಅಂದರೆ ಮಹಿಳೆಯ ವಿಮೋಚನೆ ಪುರುಷರ ನೆರವಿನಿಂದ ಮಾತ್ರ ಎನ್ನುವುದು ನಿಮ್ಮ ಅಭಿಪ್ರಾಯವೇ ?

ನಿ : ಪುರುಷರಿಂದ ಮಾತ್ರ ಅಂತ ನಾನು ತಿಳಿದಿಲ್ಲ. ಪುರುಷರ ನೆರವೂ ಅಗತ್ಯ ಎಂಬುದು ಸ್ಪಷ್ಟ. ಹೆಣ್ಣು-ಗಂಡು ಇಬ್ಬರೂ ಜತೆಯಾಗಿ ಪ್ರಯತ್ನ ಮಾಡಿದಾಗ ಮಾತ್ರ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಅವರು ಬಗೆಹರಿಸಬಹುದು. ಗಂಡನ್ನು ಬಿಟ್ಟು ತಾನೊಬ್ಬಳೇ ತನ್ನೆಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಅಂತ ಹೆಣ್ಣು ಭಾವಿಸಿದರೆ, ಅಥವಾ ಹೆಣ್ಣನ್ನು ಬಿಟ್ಟು ಗಂಡು ತಾನೊಬ್ಬನೇ ಎಲ್ಲವನ್ನೂ ಸಾಧಿಸುತ್ತೇನೆಂತ

ಭಾವಿಸಿದರೆ, ತಪ್ಪಾಗ್ತದೆ. ಈ ಎರಡೂ ಅಂಗಗಳು ಒಟ್ಟಾಗಿ ದುಡಿಯು ದಿದ್ದರೆ ಸಮಾಜದ ಸ್ಥಿತಿ ಗತಿಗಳನ್ನು ಸುಧಾರಿಸೋದಕ್ಕೆ, ತಮ್ಮ ಸ್ಥಿತಿ ಗತಿಗಳನ್ನು ಸುಧಾರಿಸಿಕೊಳ್ಳೋದಕ್ಕೆ ಸಾಧ್ಯವಿಲ್ಲ. ಪುರುಷ ಹೆಣ್ಣಿಗಿಂತ ಈಗ ಹೆಚ್ಚು ವಿದ್ಯಾವಂತನಾಗಿದ್ದಾನೆ. ಮುಂದೆ ಅದು ಬದಲಾಗ್ತಾ ಸಮಸಮವಾಗಿ ಹೋಗಬಹುದು. ಇವತ್ತು, ಆ ದೃಷ್ಟಿಯಲ್ಲಿ, ನನ್ನ ಕಾದಂಬರಿಗಳಲ್ಲಿ ವಿದ್ಯಾವಂತನಾದ ಪುರುಷ ಹೆಣ್ಣನ್ನು ಎಚ್ಚರಿಸಲಿಕ್ಕೆ ಪ್ರಯತ್ನಿಸಿದ್ದಾನೆ, ಅಂತ ಅನಿಸುತ್ತೆ. ಹೆಣ್ಣು ಕೂಡ ಕೆಲವು ಕಡೆ ಇದನ್ನು ಮಾಡಿದ್ದಾಳೆ. ಹೆಣ್ಣು ವಿಚಾರವಂತಳಾದಾಗ ತನ್ನ ನಿರ್ಧಾರ ತಾನೇ ತೆಗೆದುಕೊಳ್ಳಬಲ್ಲಳು. ಅಂದರೆ, ವಿದ್ಯಾಭ್ಯಾಸ ಹೆಣ್ಣಿಗೆ ಮುಖ್ಯ ಅನ್ನೋದನ್ನು ನಾನು ಸ್ಪಷ್ಟ ಪಡಿಸಿದ್ದೇನೆ.

ಗಾ : ನಿಮ್ಮ ಸ್ತ್ರೀ ಪಾತ್ರಗಳು ಆರ್ಥಿಕವಾಗಿ ಸ್ವತಂತ್ರರಾಗುವುದು ಮತ್ತು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ವಿವಾಹ ಸಂಸ್ಥೆ ಮುರಿದು ಬಿದ್ದಾಗಲೋ ಅಥವಾ ಪುರುಷನ ಅವಲಂಬನ ಇಲ್ಲ ದಾಗಲೋ ಆಗಿರುತ್ತದೆ. ಅಂದರೆ ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಅವಳ ವ್ಯಕ್ತಿತ್ವದ ಬೆಳವಣಿಗೆಗೆ ಬೇಕೂಂತ ಅನ್ನಿಸಲ್ಲವಾ? ಕೇವಲ ಆರ್ಥಿಕ ಅನಿವಾರ್ಯತೆ ಅವರನ್ನು ಆರ್ಥಿಕ ಚಟುವಟಿಕೆಗೆ ದೂಡುವಂತೆ ಮಾಡುವುದು ಎಷ್ಟು ಸರಿ?

ನಿ : ಆರ್ಥಿಕ ಸ್ವಾತಂತ್ರ್ಯ ಬರಿ ಹೆಣ್ಣಿಗಲ್ಲ, ಗಂಡಿಗಲ್ಲ—ಇಬ್ಬರಿಗೂ ಇರಬೇಕು. ಅಂದರೆ, ದಂಪತಿಗೆ ಇರಬೇಕು. ಅಂದರೆ, ಕುಟುಂಬಕ್ಕೆ ಇರಬೇಕು. ಸಮಾಜದ ಮೂಲ ಘಟಕ ಕುಟುಂಬ. ಗಂಡು ಹೆಣ್ಣು ಇಬ್ಬರೂ ದುಡಿಯುವ ಸಂಸಾರಗಳು ನಮ್ಮಲ್ಲಿವೆ. ಕೇವಲ ಗಂಡು ಮಾತ್ರ ದುಡಿಯುವಂಥ ಕುಟುಂಬಗಳು, ಹಾಗೆಯೇ ಕೇವಲ ಹೆಣ್ಣು ಮಾತ್ರ ದುಡಿ ಯುವಂಥ ಕುಟುಂಬಗಳು ನಮ್ಮಲ್ಲಿವೆ. ಹೆಣ್ಣು ಮನೆಯನ್ನು ನೋಡಿಕೊಳ್ಳು ವಾಗ ನಿಶ್ಚಿಂತೆಯಾಗಿರುವ ಗಂಡಸರೂ ನಮ್ಮಲ್ಲಿದ್ದಾರೆ. ಈ ರೀತಿಯಲ್ಲಿ ಬದಲಾಗುತ್ತಿರುವ ಸಮಾಜದಲ್ಲಿ ನಾವಿದ್ದೇವೆ. ನನ್ನ ದೃಷ್ಟಿಯಲ್ಲಿ ಇಡೀ ಕುಟುಂಬಕ್ಕೆ ಆರ್ಥಿಕ ಸ್ವಾತಂತ್ರ್ಯ ಇರಬೇಕು. ಆಗ ಹೆಣ್ಣು ಗಂಡು ಇಬ್ಬರೂ ವಿಕಾಸ ಹೊಂದ್ತಾರೆ.

ಗಾ : ಕುಟುಂಬದ ಒಟ್ಟು ಆರ್ಥಿಕ ಸ್ವಾತಂತ್ರ್ಯ, ಹೆಣ್ಣು ಗಂಡಿನ

ಆರ್ಥಿಕ ಸ್ವಾತಂತ್ರ್ಯ ಎನ್ನುವುದು ಸಮಸ್ಯೆಯನ್ನು ಸರಳಗೊಳಿಸಿದಂತಾಗುತ್ತದೆ. ಏಕೆಂದರೆ, 'ಸ್ಮರಣೆಯೊಂದೇ ಸಾಲದೆ?'ಯಲ್ಲಿ ಕಲಾವಿದ ಬದುಕಿದ್ದಾಗ ಅವನು ತರುತ್ತಿದ್ದ ಸಂಬಳ ಅವರ ಸಂಸಾರ ನಿರ್ವಹಣೆಗೆ ಏನೂ ಸಾಲುತ್ತಿರಲಿಲ್ಲ. ಆದರೆ ಅವನ ಹೆಂಡತಿ ಗಂಡ ಬದುಕಿದ್ದಾಗಲೇ ಒಳ್ಳೆಯ ಸಂಗೀತಗಾರಳಾಗಿದ್ದರೂ ತನ್ನ ಕಲೆಯ ಮೂಲಕ ಆರ್ಥಿಕ ಚಟುವಟಿಕೆಯಲ್ಲಿ ತೊಡಗಲಿಲ್ಲ. ತನ್ನ ಗಂಡ ಸತ್ತ ಮೇಲೆ ಸಂಗೀತ ಪಾಠ ಹೇಳಿಕೊಟ್ಟು ಹಣ ಸಂಪಾದಿಸುತ್ತಾಳೆ. ಅಂದರೆ ಹೆಣ್ಣು ಆರ್ಥಿಕ ಚಟುವಟಿಕೆಯಲ್ಲಿ ತೊಡಗಬೇಕೆನ್ನುವುದು ಕೇವಲ ಜೀವನೋಪಾಯಕ್ಕಾಗಿ ಅಲ್ಲ. ಅದು ಅವಳ ಯೋಚನಾಕ್ರಮವನ್ನೇ ಬದಲಾಯಿಸಿ ಭಿನ್ನ ವ್ಯಕ್ತಿತ್ವದವಳನ್ನಾಗಿ ಮಾಡತ್ತೆ. ಇದಕ್ಕೆ ನಿಮ್ಮ ಅಭಿಪ್ರಾಯ?

ನಿ: ಅದರ ಬಗ್ಗೆ ಪೂರ್ಣ ಸಮ್ಮತಿ ನನ್ನದು. ಮೀನಾಕ್ಷಿ ಉದ್ಯೋಗ ಮಾಡಬಹುದಿತ್ತು. ಮೀನಾಕ್ಷಿಯ ಮದುವೆಗೆ ಕಾರಣ ಅವಳ ಹಾಡುಗಾರಿಕೆಯೇ. ಅವಳ ಸಂಗೀತವನ್ನು ಮೆಚ್ಚಿಕೊಂಡೇ ಅವನು ಅವಳನ್ನು ಮದುವೆಯಾಗಿರ್ತಾನೆ. ಅವಳ ಮಗು (ಮಕ್ಕಳು) ಚಿಕ್ಕವಿರುವಾಗಲೇ ಅವಳ ಗಂಡ ಅಪಘಾತದಲ್ಲಿ ತೀರಿಕೊಳ್ತಾನೆ. ಆಗ ಬದುಕು ಅವಳಿಗೆ ಸವಾಲು ಹಾಕ್ತದೆ 'ಮುಂದೆ ಏನು ಮಾಡ್ತೀಯ?' ಅಂತ. ಆಗ ಅವಳು ತನ್ನಲ್ಲಿದ್ದ ವಿದ್ವತ್ತನ್ನು, ಪ್ರತಿಭೆಯನ್ನು ಬೆಳಕಿಗೆ ತಂದು ಸಂಗೀತದ ಮೇಡಂ ಆಗಿ ಮಕ್ಕಳನ್ನು ಮುಂದಕ್ಕೆ ತರ್ತಾಳೆ. ಇದನ್ನು ಅವಳು ಮದುವೆಗೆ ಮುಂಚೆಯೂ ಮಾಡಬಹುದಿತ್ತು.

ಗಾ: ಇನ್ನೊಂದು ಪ್ರಶ್ನೆ. ಇದು ನಿಮ್ಮ ಸಾಹಿತ್ಯವನ್ನು ಮಾತ್ರ ಕುರಿತಲ್ಲದಿದ್ದರೂ ಒಟ್ಟು ನಮ್ಮ ಸಾಹಿತ್ಯದ ಸಂದರ್ಭಕ್ಕೆ ಸಂಬಂಧಪಟ್ಟದು. ಚರಿತ್ರೆಯುದ್ದಕ್ಕೂ ಹೆಣ್ಣಿನ ಮಾನಸಿಕ ಹಾಗೂ ಬೌದ್ಧಿಕ ವಲಯವನ್ನು ಎಂದೂ ದಾಖಲಿಸದ ನಮ್ಮ ಕಲೆ, ಸಾಹಿತ್ಯಗಳು ಹೆಣ್ಣನ್ನು ಕಂಡಿರುವುದು ಕೇವಲ ವರ್ಣನಾರ್ಹ ವಸ್ತುವಾಗಿಯಷ್ಟೆ. ಎಲ್ಲೋ ಒಂದೆರಡು ಅಪವಾದಗಳು ಇರಬಹುದು. ಇದಕ್ಕೆ ಕಾರಣ ಏನು ಅಂತ ನಿಮಗೆ ಅನ್ನಿಸತ್ತೆ?

ನಿ : ನನಗನ್ನಿಸತ್ತೆ, ಸಾಮಾನ್ಯವಾಗಿ, ಕ್ಲೀಷೆಯ ಪದ ಬಳಸಿ ಹೇಳೋದಾದ್ರೆ, ಪುರುಷಪ್ರಧಾನವಾದ ಸಮಾಜ ನಮ್ಮದು. ಎಲ್ಲ ತನ್ನಿಂದಲೇ ನಡೆಯೋದು ಅಂತ ಗಂಡು ಭಾವಿಸ್ತಾನೆ. ಪರಂಪರಾಗತವಾಗಿ ಇಂದಿನ ಯುವಕರಲ್ಲೂ ಇದೇ ದೃಷ್ಟಿ ಹರಿದು ಬಂದಿದೆ. ಇಂಥ ಸ್ಥಿತಿ ಹೋಗಬೇಕಾದರೆ ಸಮಾಜವನ್ನು ನೋಡುವ ಅವರ ದೃಷ್ಟಿ ವಿಶಾಲವಾಗಬೇಕು. ವರ್ಣನೆ ಮಾಡಲಿಕ್ಕೆ ಬರೀ ಸಾಹಿತ್ಯವೇನು ? ಕಲೆ, ಸಿನಿಮಾ, ಜಾಹೀರಾತು ಎಲ್ಲದರಲ್ಲೂ ಹೆಣ್ಣು ಬಹಳ ಮುಖ್ಯ. ಆ ವರ್ಣನೆಯಿಂದ ತಮ್ಮ ಕೆಲಸ ಸುಲಭವಾಗಿ ಆಗುತ್ತೆ ಅಂತ ತಿಳಿದುಕೊಂಡಿದ್ದಾರೆ. ಈ ಸಮಾಜದ ಸೂತ್ರವನ್ನು ಹಿಡಿದಿದಾರಲ್ಲಾ ಅವರು ಹೆಣ್ಣನ್ನು ನಾನಾ ರೀತಿಯಲ್ಲಿ ಬಳಸ್ತಿದಾರೆ. ಇವತ್ತು ಸ್ತ್ರೀ ವಿಮೋಚನಾ ಚಳವಳಿ ಈ ಅಂಶವನ್ನು ಬಹು ಮುಖ್ಯವಾಗಿ ತೆಗೆದುಕೊಂಡಿದೆ. ಈಗ ಮಗು ಹುಟ್ಟುವುದಕ್ಕೆ ಮುಂಚೆಯೇ ಭ್ರೂಣದ ಅವಸ್ಥೆಯಲ್ಲಿ ಹೆಣ್ಣೋ ಗಂಡೋ ಅಂತ test ಮಾಡುವುದನ್ನು ನೋಡ್ತಿದೀವಿ. ಹೆಣ್ಣಾದರೆ, ಅದನ್ನು ತೆಗೆಸೋದು, ಅಂಥದೆಲ್ಲಾ ನಡೆಯುತ್ತೆ. ಇನ್ನೊಂದು ಇಪ್ಪತ್ತು ವರ್ಷಗಳವರೆಗೆ ಇದು ಹೀಗೇ ನಡೆದರೆ, ಹೆಣ್ಣಿನ ಸಂಖ್ಯೆ ಕಡಿಮೆಯಾಗತ್ತೆ. ಪರಿಣಾಮವಾಗಿ ನಾವು ಪಾಂಡವರ ಕಾಲಕ್ಕೆ ಹೋಗ್ತೀವೆ. ಹಾಗಾಗಬಾರದು. ಹೆಣ್ಣನ್ನು ವರ್ಣನಾರ್ಹ ವಸ್ತುವಾಗಿ ಇಟ್ಟುಕೊಂಡು ವೈಭವಿಸುವುದಿದೆಯಲ್ಲಾ ಇದು ನಮ್ಮ ಸಮಾಜದ ಪ್ರಗತಿಗೆ ಮಾರಕ. ಇದಕ್ಕೆ ಪ್ರಚಾರ ಕೊಡಬಾರದು. ಇದ್ದಕ್ಕಿದ್ದಂತೆ, ಒಬ್ಬ ಮಹಾಕವಿ ಆಗಬಲ್ಲ. ಮಹಾಕವಿ ಅಂದರೆ ವಯಸ್ಸು ಆಗಬೇಕೂಂತಾರೆ–ಅದಲ್ಲ. ಹೀಗೆಯೇ ಒಬ್ಬ ಕಾದಂಬರಿಕಾರ ಒಂದು ಕಾದಂಬರಿ ಬರೆದು ಇಂಥ ಕೃತಿ ಇನ್ನೊಂದಿಲ್ಲ ಅಂತ ಹೇಳಿಸಿಕೊಳ್ಳಬಲ್ಲ. ಹೀಗೆ ಆತನನ್ನು ಹೊಂಡಕ್ಕೆ ತಳ್ಳುವ ಮಂದಿ ಬಹಳ ಇರ್ತಾರೆ. ಆದರೆ ಈ ರೀತಿ ಹೊಂಡಕ್ಕೆ ತಳ್ಳುವ ಕೈಯನ್ನು ದೂರ ತಳ್ಳಿ, ತನ್ನ ಕಾಲ ಮೇಲೆ ತಾನು ನಿಂತುಕೋಬೇಕು. ತನ್ನ ವಿಚಾರಗಳನ್ನು ತನ್ನದೇ ಆಗಿಸಿಕೊಂಡು ಯಾರದೋ ಮುಖವಾಣಿಯಾಗದೆ ಯಾರಿಗೂ ಪ್ರಚಾರಕನಾಗದೆ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡರೆ, ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಕೈಲಾದಷ್ಟು

ದುಡಿವರೆ, ಆಗ ಒಳ್ಳೆಯ ಕಾದಂಬರಿಗಳೂ ಬರಬಹುದು. ಒಳ್ಳೆಯ ಜನಪ್ರಿಯ ಕಾದಂಬರಿಗಳೂ ಬರಬಹುದು.

ಗಾ : ಅಂದರೆ, ಒಳ್ಳೆಯ ಜನಪ್ರಿಯ ಕಾದಂಬರಿಗಳು ಬರಬೇಕಾದರೆ ಒಳ್ಳೆಯ, ಆರೋಗ್ಯಪೂರ್ಣ ಸಾಂಸ್ಕೃತಿಕ ಸನ್ನಿವೇಶ ಇರಬೇಕು ಅಂದ ಹಾಗಾಯಿತು.

ನಿ : ಹೌದು. ಒಳ್ಳೆಯ ಸಮಾಜ ಇರಬೇಕು. ಇದು ಕಾಯಿಲೆ ಬಿದ್ದಿರುವ ಸಮಾಜ. ಇದಕ್ಕೆ ಪಾರ್ಶ್ವವಾಯು ಬಡಿದಿದೆ. ಇದಕ್ಕೆ ಕ್ಯಾನ್ಸರ್ ಬಂದಿದೆ. ಏನೇನೋ ಕಾಯಿಲೆಗಳು. ಹೀಗಿರುವಾಗ ಒಳ್ಳೆಯ ಕಾದಂಬರಿಗಳು ಬೇಕೆಂದರೆ, ಅದು ಮರೀಚಿಕೆಯನ್ನು ಬೆನ್ನಟ್ಟಿಕೊಂಡು ಹೋದಂತೆ. ಅದು ಏನೋ ಆಸೆ. ಆಸೆ ಇರಬೇಕಾದ್ದು ಸಹಜ. ಆದರೆ ಸಮಾಜ ಬದಲಾದರೆ, ಅದರ ಸ್ವರೂಪ ಬದಲಾದರೆ, ಓದುವವರ ಅಭಿರುಚಿ ಬದಲಾದರೆ, ಆಗ ತಂತಾನೆ ಸಾಹಿತ್ಯ ಬದಲಾಗತ್ತೆ. ಒಳ್ಳೆಯ ಕಾದಂಬರಿಗಳು ಬರ್ತವೆ. ಆಗ ಸಾಹಿತಿ ಕೂಡ ಹೆಚ್ಚು ಹೆಚ್ಚು ಯೋಚಿಸಿ ಕೃತಿಗಳನ್ನು ಕೊಡ್ತಾನೆ. ಇದು ನನ್ನ ಅಭಿಪ್ರಾಯ.

ಗಾ : ಚರ್ಚೆಯಲ್ಲಿ ಭಾಗವಹಿಸಿದ್ದಕ್ಕೆ ತುಂಬಾ ವಂದನೆಗಳು. ನಮಸ್ಕಾರ.

ನಿ : ನಮಸ್ಕಾರ. Thanks a lot.

—೧೯೮೨

ನಾನು ಚಲನೆ ಇಲ್ಲದವನೆಂದು, ಸಂದರ್ಶಕಿಯೊಂದಿಗೆ ಮನೆಗೆ ಬಂದು, ಆಕಾಶ ವಾಣಿಯ ಶ್ರೀಮತಿ ನಿರ್ಮಲಾ ದೇವಿ ಧ್ವನಿ ಮುದ್ರಿಸಿಕೊಂಡ ಸಂದರ್ಶನ ಇದು. ಇಪ್ಪತ್ತೆಂಟು ಮಿನಿಟುಗಳ ಈ ದೀರ್ಘ ಸಂದರ್ಶನವನ್ನು ೧೯೮೨ ಆಗಸ್ಟ್ ೧ ರಂದು ವನಿತಾ ವಿಹಾರದಲ್ಲೂ ಮೂಲಧ್ವನಿಗೆ ಚ್ಯುತಿ ಬಾರದಂತೆ ಸಂಕ್ಷಿಪ್ತ ರೂಪವನ್ನು ಮುಂದೆ ಒಂದು ರಾತ್ರಿಯೂ ಬೆಂಗಳೂರು ನಿಲಯ ಪ್ರಸಾರ ಮಾಡಿತು. ಕೃತಜ್ಞ.

ಸಂದರ್ಶಿಸಿದ ಕುಮಾರಿ ಎನ್. ಗಾಯತ್ರಿಯವರ ಬಗೆಗೆ ಹಿಂದೆಯೇ ಹೇಳಿದ್ದೇನೆ. ಈಗ ಅವರು ಶ್ರೀಮತಿ ಎನ್, ಗಾಯತ್ರಿ–ವಿವಾಹಿತೆ. ದಂಪತಿಗೆ ನನ್ನ ಶುಭಾಶಯ.

ತಮ್ಮಲ್ಲಿದ್ದ ಟೇಪನ್ನು ಲಿಪಿರೂಪಕ್ಕೆ ಇಳಿಸಿಕೊಟ್ಟು ಶ್ರೀಮತಿ ಗಾಯತ್ರಿ ಸಹಕರಿಸಿದ್ದಾರೆ. ಉಪಕೃತ.

ಸಂದರ್ಶನ ಮುಕ್ತಾಯವಾಗುತ್ತಿದ್ದಂತೆ ಗಾಯತ್ರಿಯವರ ಮಾತಿನ ಜಾಲದಲ್ಲಿ ಸಿಲುಕಿದೆ. ನನ್ನ ಸರಿಯಾದ ನಿಲುವು ಇದು : 'ಆರೋಗ್ಯಪೂರ್ಣ ಸಾಂಸ್ಕೃತಿಕ ಸನ್ನಿವೇಶ ಇಲ್ಲದಿದ್ದರೂ ಒಳ್ಳೆಯ ಕಾದಂಬರಿ ಬಂದೀತು. ಆದರೆ ಅದು ಜನಪ್ರಿಯ ಕಾದಂಬರಿ ಆದೀತೋ ಇಲ್ಲವೋ ಹೇಳಲಾರೆ.' —ನಿ.

ಕನ್ನಡ ಸಾಹಿತ್ಯಲೋಕಕ್ಕೆ ನಿರಂಜನರ ಅಪೂರ್ವ ಕೊಡುಗೆ-ವಿಶ್ವಕಥಾ ಕೋಶ

-ಯು. ಎನ್ ಶ್ರೀನಿವಾಸ ಭಟ್

'ವಿಶ್ವಕಥಾಕೋಶ' ಪ್ರಾಯಶಃ ಭಾರತದ ಸಾಹಿತ್ಯ ಪ್ರಪಂಚದಲ್ಲೇ ಒಂದು ಹೊಸ ಸಾಧನೆ. ಅಪೂರ್ವ. ನೂರು ದೇಶ ಪ್ರದೇಶಗಳ ವಿವಿಧ ಭಾಷೆಗಳ ಉತ್ತಮ ಕಥೆಗಳನ್ನಾಯ್ದು ಅದನ್ನು ಸುಮರ್ಪಕವಾಗಿ ಕನ್ನಡಕ್ಕೆ ಭಾಷಾಂತರಿಸುವಂತೆ ಮಾಡಿ, 25 ಸಂಪುಟಗಳಲ್ಲಿ ಪ್ರಕಟಿಸಿದ ಈ ಸಾಹಸದ ಹಿಂದೆ, ಹಲವು ಮಹನೀಯರಿದ್ದಾರೆ–ಅವರಲ್ಲಿ 'ವಿಶ್ವಕಥಾಕೋಶ' ಪ್ರಧಾನ ಸಂಪಾದಕರೂ ಖ್ಯಾತ ಸಾಹಿತಿಯೂ ಅದ ನಿರಂಜನರ ಹೆಸರು ಮೊದಲಿಗೆ ನಿಲ್ಲುತ್ತದೆ.

ಮುಂದಿನ ನವೆಂಬರ್ ತಿಂಗಳಲ್ಲಿ 'ವಿಶ್ವಕಥಾಕೋಶ'ದ ಕೊನೆಯ ಐದು ಸಂಪುಟಗಳು ಬಿಡುಗಡೆಗೊಳ್ಳಲಿವೆ, ಆದುದರಿಂದ ಅದರ ಕಾರ್ಯ ಹೆಚ್ಚು ಕಡಿಮೆ ಸಂಪೂರ್ಣವಾಗಿರಬಹುದೆಂದು ಈ ಸಂದರ್ಶಕನ ಅನಿಸಿಕೆಯಾಗಿತ್ತು.

ಆದರೆ ನಿರಂಜನರೆನ್ನುತ್ತಾರೆ:

"ಇನ್ನೂ ಮೂರು ತಿಂಗಳ ತೀವ್ರಗತಿಯ ದುಡಿಮೆಯುಳಿದಿದೆ. ಇದು ರಕ್ತದ ಒತ್ತಡ ಜಾಸ್ತಿಯಾಗುವ ಸನ್ನಿವೇಶ. ನವೆಂಬರ್ 14 ರಂದು ಕೊನೆಯ ಐದು ಸಂಪುಟಗಳೂ ಪುರವಣಿ ಸಂಪುಟವೂ ಬಿಡುಗಡೆಯಾದರೆ

ಸಾಕಪ್ಪ, ಅನ್ನೋದು ಈಗಿನ ಅನಿಸಿಕೆ. ಆದಾದ ಮೇಲೆ ಒಂದು ಹಗಲು ಒಂದು ರಾತ್ರಿಯಾದರೂ ಅಖಂಡ ನಿದ್ರೆ ಮಾಡಬೇಕು."

ವಿಶ್ವಕಥಾಕೋಶ ಪ್ರಕಟಣೆಯು ಕಾರ್ಯ ಸುಲಭವಲ್ಲ. ವಿಶ್ವವಿದ್ಯಾನಿಲಯ, ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಇಂತಹ ಯೋಜನೆಯನ್ನು ಕೈಗೊಂಡಿದ್ದರೆ ವಿಸ್ತಾರವಾದ ಸಂಪಾದಕ ಮಂಡಲಿಯಿರುತ್ತಿತು. ಆದರೆ ಇಲ್ಲಿ ಹಾಗಲ್ಲ. ಈ ಕುರಿತು ಅವರನ್ನು ಪ್ರಶ್ನಿಸಿದಾಗ ಅವರು ನೀಡಿದ ಉತ್ತರ ಹೀಗಿದೆ:

'ವ್ಯವಸ್ಥೆ'ಯ ಅಂಗಗಳಿಂದ ಅಸಾಧ್ಯ

"ಇಲ್ಲಿ ನಾನೊಬ್ಬ; ಸಹಾಯಕ್ಕೆ ಸಂಪಾದಕತ್ರಯರು. ಮುದ್ರಣ, ಮಾರಾಟ ಇತ್ಯಾದಿಗಳ ಜವಾಬುದಾರಿ ವಹಿಸಿದ್ದು ಯೋಜನೆಯ ಜೆನ್ನುಹುರಿಯಾದ ನವಕರ್ನಾಟಕ ಪ್ರಕಾಶನ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರು, ಮೂವತ್ತು ನಲವತ್ತು ಮಂದಿ ಅನುವಾದಕರು ಹಾಗೂ ಚಿತ್ರಕಾರರು.... ಒಟ್ಟು ಸಂಖ್ಯೆ ಸಣ್ಣದೆ? ಖಂಡಿತ ಅಲ್ಲ! ಆದರೆ ನಾಲ್ಕೇ ವರುಷಗಳ ನಿರ್ದಿಷ್ಟ ಅವಧಿಯಲ್ಲಿ(1979–82) ಇಷ್ಟು ಗಾತ್ರದ ಕೆಲಸವನ್ನು ಪೂರೈಸುವುದು 'ವ್ಯವಸ್ಥೆ'ಯ ಅಂಗಗಳಿಂದ ಅಸಾಧ್ಯ. ಆ 'ವ್ಯವಸ್ಥಿತ' ಕಾರ್ಯ ವಿಧಾನಕ್ಕೂ ವ್ಯಕ್ತಿಗತ ಸಮರ್ಥ ದುಡಿಮೆಗೂ ವ್ಯತ್ಯಾಸವಿದೆ. ಇನ್ನೊಂದು ಅಂಶ, ಕೋಶದಲ್ಲಿರುವ ಕಥೆಗಳ ಗುಣಕ್ಕೆ ಸಂಬಂಧಿಸಿದ್ದು. ಒಬ್ಬ ವ್ಯಕ್ತಿಯ ಪ್ರಭಾವದ ಮುದ್ರೆ ಇಲ್ಲಿ ಬಿದ್ದಿದೆ. ಆತನ (ಮತ್ತು ಸಂಗಡಿಗರ) ಸಾಹಿತ್ಯಿಕ ಒಲವು ನಿಲುವುಗಳು ಇಲ್ಲಿ ಮಹತ್ವ ಪಡೆದಿವೆ."

ಮೊದಲೇ ಹೇಳಿದಂತೆ ವಿಶ್ವ ಕಥಾಕೋಶ ಇಡಿಯ ದೇಶದಲ್ಲೇ ಒಂದು ಅಪೂರ್ವ ಸಾಹಸ; ಅದರಲ್ಲಿ ನಿರಂಜನರ ಪಾತ್ರ ಶ್ಲಾಘನೀಯ. ಈ ಸಂಪಾದನಾ ಕಾರ್ಯದಲ್ಲಿ ಪ್ರಧಾನ ಸಂಪಾದಕರಿಗೆ ಆದ ಅನುಭವಗಳೇನು? ಅವನ್ನು ನಿರಂಜನರು ಹೀಗೆಂದು ಹೇಳುತ್ತಾರೆ:

ಅನುಭವಗಳು

"ನಾನು ಕಥೆಗಾರನಾಗಿ ಸಾಹಿತ್ಯ ಜೀವನ ಆರಂಭಿಸಿದವನು. ಬದುಕಿನ

ಈ ಘಟ್ಟದಲ್ಲಿ ಸಹಸ್ರಾರು ಪರಿಚಿತ, ಅಪರಿಚಿತ ಕಥೆಗಳನ್ನು ಎಡೆಬಿಡದೆ ಓದಲು ದೊರೆತ ಅವಕಾಶದಿಂದ ನಾನು ಖುಶಿಪಟ್ಟಿದ್ದೇನೆ. ಸ್ವಂತ ಬರೆವಣಿಗೆಗೆ ಬಳಸಬೇಕಾಗಿದ್ದ ಕಾಲವನ್ನು ಈ ಯೋಜನೆಗೆ ಧಾರೆ ಎರೆದೆನೆಂಬ ಕೊರಗೇನೋ ಉದ್ದಕ್ಕೂ ನನ್ನನ್ನು ಸಾಕಷ್ಟು ಬಾಧಿಸಿದೆ. ಆದರೆ ಒಟ್ಟು ಸಾಧನೆ, ಆ ಕೊರಗಿನ ತೀವ್ರತೆಯನ್ನು ಈಗ ಕಮ್ಮಿಮಾಡಿದೆ ಎನ್ನೋಣ. ಈ ಕೋಶದ ಓದಿನಿಂದ ಕನ್ನಡಿಗರ ದೃಷ್ಟಿ ವಿಶಾಲವಾಗ್ತದೆ. ಕೋಶ ನೀಡುವ ಉಣಿಸು ನಮ್ಮ ಯುವ ಕಥೆಗಾರರಿಗೆ ಪೌಷ್ಟಿಕ ಆಹಾರವಾಗ್ತದೆ–ಎನ್ನುವ ನಂಬಿಕೆ ನನ್ನಲ್ಲೀಗ ಮೂಡಿದೆ."

25 ಸಂಪುಟಗಳಿಗೆ ಸುಮಾರು ನಾಲ್ನೂರು ಕಥೆಗಳನ್ನು ಆಯ್ಕೆ ಮಾಡುವುದೇನೂ ಸುಲಭದ ಕಾರ್ಯವಲ್ಲ. ಇದನ್ನು ಬಹುತೇಕ ವಿಮರ್ಶಕರೂ ಶ್ಲಾಘಿಸಿದ್ದಾರೆ. ಕೆಲವರೇನೋ ಈ ಕೋಶದಲ್ಲೇನಿದೆ? ಎಂದು ಪೂರ್ವಾಗ್ರಹ ದಿಂದ ಹೀಗಳೆಯುವ ಮಟ್ಟಕ್ಕೂ ಹೋಗಿದ್ದಾರೆ. ಅದು ಪ್ರತ್ಯೇಕ. ಹಾಗಾದರೆ ಈ ಕಥೆಗಳನ್ನು ಆಯ್ದ ಕ್ರಮ ಯಾವುದು? ಕಥೆಗಳ ಆಯ್ಕೆಗೆ ನಿರಂಜನರು ಯಾವ ಅಳತೆಗೋಲನ್ನಿಟ್ಟು ಕೊಂಡಿದ್ದರು? ಕೇಳಿ :

ಅಳತೆಗೋಲು

"ವಿಶ್ವವ್ಯಾಪ್ತಿಯ ಕಥಾಕೋಶದಲ್ಲಿ ಅಡಕಗೊಳ್ಳಬೇಕಾದ ರಾಷ್ಟ್ರಗಳು ಯಾವುವು? ಭಾಷೆಗಳು ಯಾವುವು? ಎಂಬ ಚರ್ಚೆ ಮೊದಲು ನಡೆಯಿತು. ಇಂಗ್ಲಿಷ್ ಭಾಷೆ ಬಳಸುವ ದೇಶಗಳ ಕಥೆಗಳು ಸುಲಭ ಲಭ್ಯ. ಆ ಗ್ರಂಥ ಗಳನ್ನು ಕಲೆಹಾಕಿದೆವು. ಉಳಿದ ಬಹ್ವಂಶ ದೇಶಗಳಿಂದ ಕಥೆಗಳು ಸಿಗುವುದು ಇಂಗ್ಲಿ ಭಾಷಾಂತರಗಳ ಮೂಲಕವೇ. ಅವನ್ನೂ ಸಂಗ್ರಹಿಸಿದೆವು. ಮೂಲ ಭಾಷೆಯಿಂದ ನೇರ ಅನುವಾದ ಸಾಧ್ಯವಿರುವ ಸಂದರ್ಭಗಳಲ್ಲಿ ಮೂಲ ಭಾಷೆ ಗಳಲ್ಲೇ ಕಥೆಗಳನ್ನು ಪಡೆದೆವು. ಆಯ್ಕೆಯ ಹೊಣೆಯನ್ನು ನನಗೆ ವಹಿಸಿ ಕೊಟ್ಟ ಸಹೋದ್ಯೋಗಿಗಳು ನನ್ನಲ್ಲಿ ತಮಗಿರುವ ವಿಶ್ವಾಸ ವ್ಯಕ್ತಪಡಿಸಿದರು. ನಾನು ಹಿಂದು ಮುಂದು ನೋಡದೆ ನನ್ನ ಮೋಹವನ್ನೇ ಅಳತೆಗೋಲು ಮಾಡಿದೆ. ಬಾಗ್ದಾದಿನಿಂದ ಹಿಡಿದು ಬೆಂಗಳೂರು ತನಕ 1200 ವರ್ಷ ಕಾಲ ವನ್ನು ಕೆದಕಿದೆ. ಸಾಹಿತ್ಯ ಲೋಕದಲ್ಲಿ ಹೆಜ್ಜೆಗುರುತುಗಳನ್ನು ಮೂಡಿಸಿರುವ

ಕಥೆಗಾರರೆಲ್ಲ ಇಲ್ಲಿ ಕಾಣಿಸಿಕೊಳ್ಳಬೇಕು; ಇತಿಹಾಸದುದ್ದಕ್ಕೂ ಒಳ್ಳೆಯ ಬದುಕಿಗಾಗಿ ಮಾನವ ನಡೆಸಿದ ಸೆಣಸಾಟದ ಅರಿವು ಆ ಕಥೆಗಳಿಂದ ಮೂಡಿಬರುವಂತಿರಬೇಕು; ಪ್ರತಿ ಸಂಪುಟದಲ್ಲೂ ರಸಮಯ ಸಮತೋಲನವಿರಬೇಕು; ಎಂಬ ಸೂತ್ರ ರೂಪಿಸಿದೆ. ಎಲ್ಲಿಯೂ ಎಡವಿದಂತಿಲ್ಲ. ಆದರೆ ಸಂಪುಟದ ಪುಟ ಸಂಖ್ಯೆಯ ಘಂಟೆ ಆಗಾಗ ಸದ್ದು ಮಾಡುತ್ತ ಇದ್ದುದರಿಂದ, ಕೆಲವು ಒಳ್ಳೆಯ ಕಥೆಗಳನ್ನು ಕೈಬಿಡಬೇಕಾಯಿತು. ಇದರಿಂದಾದ ಅಸಮಾಧಾನವನ್ನು ಗಾತ್ರದಿಂದ ಕಿರಿದಾದರೂ ಗುಣದಲ್ಲಿ ಉತ್ತಮವಾದ ಕಥೆಗಳು ಸರಿಪಡಿಸಿವೆ."

ವಿಶ್ವಕಥಾಕೋಶದ ಪ್ರಧಾನ ಸಂಪಾದಕ ಮಾತ್ರವಲ್ಲ ಜ್ಞಾನ ಗಂಗೋತ್ರಿಯಂತಹ ವಿಶ್ವಕೋಶವನ್ನು ನಿರಂಜನರು ಸಂಪಾದಿಸಿದ್ದಾರೆ. ಇವು ಕನ್ನಡ ಸಾಹಿತ್ಯ ಲೋಕಕ್ಕೆ ಅವರಿತ್ತ ಅಪೂರ್ವ ಕೊಡುಗೆಗಳು. ಈ ಎರಡು ಕೋಶಗಳ ಸಂಪಾದನಾ ಕಾರ್ಯದಲ್ಲಿ ಅವರಿಗೆ ತೃಪ್ತಿ ತಂದ ಕೆಲಸ ಯಾವುದು? 'ಎರಡೂ ತೃಪ್ತಿ ನೀಡಿವೆ' ಎಂಬುದವರ ಅಭಿಪ್ರಾಯ.

ಪ್ರಸ್ತಾವನೆಗಳು

ವಿಶ್ವಕಥಾಕೋಶದ ಓದುಗರು ಸಂಪುಟಗಳಲ್ಲಿನ ಕಥೆಗಳನ್ನು ಓದುವುದಕ್ಕೂ ಮೊದಲು ಅವುಗಳಲ್ಲಿ ನಿರಂಜನರು ಬರೆದ ವಿಚಾರಪೂರಿತ ಪ್ರಸ್ತಾವನೆಗಳನ್ನು ಓದಲು ತವಕ ಪಡುತ್ತಾರೆ. ಈ ಪ್ರಸ್ತಾವನೆಗಳು ಈ ಸಂಗ್ರಹದ ಮೌಲ್ಯವನ್ನು ಇನ್ನಷ್ಟು ಹೆಚ್ಚಿಸಿವೆ. ಈ ವಿದ್ವತ್‌ಪೂರ್ಣ ಪ್ರಸ್ತಾವನೆಗಳಲ್ಲಿ ಆಯಾ ರಾಷ್ಟ್ರಗಳ ಇತಿಹಾಸ, ಸಾಂಸ್ಕೃತಿಕ ಪರಂಪರೆ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಸಮರ್ಪಕವಾಗಿ ವಿವರಿಸಿದ್ದಾರೆ. ಇದನ್ನು ವಿಮರ್ಶಕರು ಮೆಚ್ಚಿ ಸ್ವಾಗತಿಸಿದ್ದಾರೆ. ಓದುಗರಿಂದ ಪ್ರಧಾನ ಸಂಪಾದಕರಿಗೇನಾದರೂ ಪ್ರತಿಕ್ರಿಯೆ ಬಂದಿದೆಯೆ? ಈ ಪ್ರಶ್ನೆಗೆ ನಿರಂಜನರು ಹೀಗೆನ್ನುತ್ತಾರೆ:

"ಶೂನ್ಯದಿಂದ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಬರೆಯುವವನಿಗೆ ಇತಿಹಾಸ ಪ್ರಜ್ಞೆ ಬಹಳ ಮುಖ್ಯ. ಬದಲಾಗಿರುವ, ಬದಲಾಗುತ್ತಿರುವ ಅಥವಾ ನಿಂತ ನೀರಾಗಿರುವ ಜನಪದದ ಬದುಕೇ ಕಥಾ ಸಾಹಿತ್ಯಕ್ಕೆ ಪಾತಿ. ಈ ಹಿನ್ನೆಲೆಯ ಪರಿಚಯ ಓದುಗನಿಗೂ ಆದರೆ, ಕಥೆಗಳ ವಾಚನ ಅರ್ಥಪೂರ್ಣವಾಗ್ತದೆ–ಎನಿಸಿತು. ಪ್ರಸ್ತಾವನೆಗಳನ್ನು ಬರೆದೆ. ಆ ಉದ್ದೇಶವನ್ನು

ಅರ್ಥ ಮಾಡಿಕೊಂಡಿರುವವರೇ ಹೆಚ್ಚು. ಇದರಿಂದ ಸಂತೋಷವಾಗಿದೆ. ಅಭಿಪ್ರಾಯ ವ್ಯಕ್ತಪಡಿಸಿರುವ ಓದುಗರು 'ಕೋಶ ಪೂರ್ಣವಾದ ಮೇಲೆ ಪ್ರಸ್ತಾವನೆಗಳನ್ನೆಲ್ಲ ಒಟ್ಟಾಗಿ ಗ್ರಂಥದಲ್ಲಿ ಪ್ರಕಟಿಸಬೇಕು' ಅಂತ ಸಲಹೆ ಇತ್ತಿದ್ದಾರೆ."

ಈ ಕಥಾಕೋಶದ ಈವರೆಗಿನ 20 ಸಂಪುಟಗಳ ಬಗ್ಗೆ ಕನ್ನಡ ಸಾಹಿತ್ಯ ಪ್ರಪಂಚ ಶ್ಲಾಘನೆಯ ಸುರಿಮಳೆಗರೆದಿದೆ. ಇದರಿಂದ ಸಂಪಾದಕ ಮಂಡಲಿಗೆ ಮುಖ್ಯವಾಗಿ ಪ್ರಧಾನ ಸಂಪಾದಕರಿಗೆ ಸಂತೋಷವಾಗಲೇಬೇಕು. "ಆದರೆ ನನ್ನ ಸಂತೋಷ ಸಂಪೂರ್ಣವಾಗಬೇಕಾದರೆ ಕೋಶ ಪೂರ್ಣಗೊಂಡು, ಕೊಳ್ಳುವವರ ಸಂಖ್ಯೆ ಹೆಚ್ಚಿ, ಗೋಡೌನ್‌ಗಳು ಬರಿದಾಗಬೇಕು. ಅವರೆಗೂ ಅಂಥ ಸುರಿಮಳೆಯೇ ಇರಲಿ ಎನ್ನಲೆ?" ಎಂದು ಪ್ರಶ್ನಿಸುತ್ತಾರೆ ನಿರಂಜನರು.

ವಿಶ್ವ ಕಥಾ ಕೋಶದ ಕಾರ್ಯ ಇನ್ನೇನು ಮುಗಿಯುತ್ತದೆ; ನಿರಂಜನರ ಲೇಖನಿಗೂ ವಿಶ್ರಾಂತಿ ಎಂಬುದಿಲ್ಲ. ಹೀಗಿರುವಾಗ ಅವರ ಮುಂದಿನ ಯೋಜನೆಗಳೇನು? 'ಚಿರಸ್ಮರಣೆ' 'ಮೃತ್ಯುಂಜಯ'ಗಳಂತಹ ಅಮರ ಕೃತಿಗಳನ್ನು ರಚಿಸುವ ಯೋಜನೆಯೇನಾದರೂ ಅವರ ಮುಂದಿದೆಯೇ? ಅವರೆನ್ನುತ್ತಾರೆ:

"ಅಮರ ಪದವನ್ನು ಸದ್ಭಾವನೆಯಿಂದ ಬಳಸಿದ್ದೀರಿ. ಹೇಳ್ತೇನೆ, ಕೇಳಿ. ಅಮರ ಅನ್ನೋದು ಯಾವುದೂ ಇಲ್ಲ. ಕೆಲವು ಅಲ್ಪಾಯು, ಕೆಲವು ದೀರ್ಘಾಯು, ಅಷ್ಟೆ. ಯೋಜನೆಗಳಿವೆ, ಆದರೆ 'ಬೃಹತ್' ವಿಶೇಷಣ ಬಳಸಲಾರೆ. 'ಮೃತ್ಯುಂಜಯ' ಬರೆದು ಮುಗಿಸಿದ ದಿನದಿಂದ ಒಂದು ವಸ್ತು ನನ್ನನ್ನು ಒಂದೇ ಸಮನೆ ಕಾಡಿದೆ. ಆ ವಸ್ತು ನನ್ನ ಕನಸಿನ ಕಾದಂಬರಿಯದು. ಪೂರ್ವ ತಯಾರಿ ನಡೆದಿದ್ದರೂ ವಿಶ್ವಕಥಾ ಕೋಶಕ್ಕೋಸ್ಕರ ಆ ಕಾದಂಬರಿಯ ಬರವಣಿಗೆಯನ್ನು ಮುಂದಕ್ಕೆ ಹಾಕಬೇಕಾಯಿತು. ಇನ್ನು ಹೆಚ್ಚು ತಡಮಾಡುವುದಿಲ್ಲ. ಆದರೆ ಕೋಶದಿಂದ ಹೊರಬಂದವನು ಹೊಸ ಜಗತ್ತಿನ ಪ್ರವೇಶಕ್ಕೆ ಮುನ್ನ ಸ್ವಲ್ಪ ಸಾಮು ಮಾಡಬೇಕಲ್ಲ? ಕಥಾಲೋಕದ ಪರಿಧಿಯಲ್ಲೇ ಸ್ವಲ್ಪ ಕಾಲ ಸುಳಿದಾಡ್ತೇನೆ. ನನ್ನ ಸಣ್ಣ ಕಥೆಗಳಿಂದ (ಸುಮಾರು 150 ಇರಬೇಕು) ನೂರನ್ನು ಆಯ್ದು 'ನಿರಂಜನ ನೂರು ಕಥೆಗಳು' ಎಂಬ ಸಂಕಲನ ಸಿದ್ಧಪಡಿಸ್ತೇನೆ. ಬಳಿಕ ನನ್ನ ಕನಸಿನ ಕಾದಂಬರಿಯ

ರಚನೆಯಲ್ಲಿ ಮಗ್ನನಾಗ್ತೇನೆ. 'ನಿಮ್ಮ ಲೇಖನಿಗೂ ವಿಶ್ರಾಂತಿ ಇಲ್ಲ' ಎಂದಿದ್ದೀರಿ. ಅದು ಮಾತ್ರ ನಿಜ. ಲೇಖನಿ ನನ್ನ ಕೈಯನ್ನು ಬಿಟ್ಟಾಗ ನಿರಂಜನ ಕಥೆ ಮುಗೀತದೆ......."

ಕೊನೆಯ ಮಾತನ್ನು ನಿರಂಜನರು ಭಾವಾವೇಶಕ್ಕೊಳಗಾಗಿ ಹೇಳಿದರೂ ಅವರ ಬದುಕು, ಬರೆಹ, ದೀರ್ಘ ಕಾಲ ಬಾಳಲಿ ಎಂದು ಹಾರೈಸೋಣ.

೧೫ ಆಗಸ್ಟ್ ೧೯೮೨

ಸಂದರ್ಶಕರು : 'ಕೆಂಬಾವುಟ'ದ ಸಂಪಾದಕ ಶ್ರೀ ಯು. ಎನ್. ಶ್ರೀನಿವಾಸ ಭಟ್. ಇವರ ಲೇಖನಿ ಮೃದುವೂ ಹೌದು, ಮೊನಚೂ ಹೌದು. ಮೂರು ದಶಕಗಳಿಂದ–ಮೊದಲು 'ಅರುಣ'ದಲ್ಲಿ ಈಗ 'ಕೆಂಬಾವುಟ'ದಲ್ಲಿ-ಅವರು ಬರೆಯುತ್ತಿರುವ 'ಸಿಡಿದ ಕಿಡಿಗಳು' ಕನ್ನಡ ಅಂಕಣ ಸಾಹಿತ್ಯಕ್ಕೆ ಶ್ರೇಷ್ಠ ಹಾಗೂ ವಿಶಿಷ್ಟ ಕೊಡುಗೆ. ನಾಲ್ಕೈದು ಸಂಪುಟಗಳಲ್ಲಿ ಈ ಕಿಡಿಗಳು ದಾಖಲಾಗಲೆಂಬುದು ನನ್ನ ಹಾರೈಕೆ.

ಸಂದರ್ಶಕರು ಬಂದಾಗ ಲೋಕಾಭಿರಾಮ ಮಾತು ನಡೆದು ಹೊತ್ತು ಕೈಕೊಟ್ಟಿತು. ತಂದಿದ್ದ ಪ್ರಶ್ನೆಗಳನ್ನು ಮುಂದಿಟ್ಟರು. ಉತ್ತರಗಳನ್ನು ಬರೆದು ಅಂಚೆಗೆ ಸೇರಿಸಿದೆ. ತುಸು ಕಲ್ಪನೆಯ (ಉದಾ-ಭಾವಾವೇಶಕ್ಕೊಳಗಾಗಿ) ಒಗ್ಗರಣೆಯೊಂದಿಗೆ ಸೊಗಸಾದ ಸಂದರ್ಶನ ಲೇಖನ ಸಿದ್ಧಪಡಿಸಿದರು.

'ನಿರಂಜನ ನೂರು ಕಥೆಗಳು' ವಿಷಯ ಒಂದು ಮಾತು. ೧೪ರ ಹದಿಹರೆಯದಿಂದ ೬೦ ರ ಮುದಿ ವಯಸ್ಸಿನವರೆಗೆ ಬರೆದ ಸುಮಾರು ೧೫೦ ಕಥೆಗಳ ಸಮಗ್ರ ಕಥಾ ಸಂಪುಟ 'ಧ್ವನಿ' ಎಂಬ ಹೆಸರು ಪಡೆದು ಪ್ರಕಟವಾಗಲಿದೆ. —ನಿ.

'ಎಲ್ಲಕ್ಕಿಂತ ಬದುಕು ದೊಡ್ಡದು'

ವಸಂತಕುಮಾರ ಪೆರ್ಲ

೧. ಭಾಷಾವಾರು ಪ್ರಾಂತ ರಚನೆಯಿಂದಾಗಿ ನಮ್ಮ ಕಲೆ–ಸಾಹಿತ್ಯ ಊರ್ಜಿತವಾಗಿದೆ ಎಂದು ನಿಮಗೆ ಅನಿಸುತ್ತದೆಯೇ ?

ಮೂಲತಃ ಗಾಂಧಿಯವರ ಕಲ್ಪನೆಯಾಗಿದ್ದ ಭಾಷಾವಾರು ರಾಜ್ಯ ವಿಂಗಡಣೆಯಿಂದ ಆಯಾ ರಾಜ್ಯದ ಪುರೋಗತಿ, ಪುನರುಜ್ಜೀವನ ಶಕ್ಯ–ಎಂಬ ನಂಬಿಕೆ ಇತ್ತು. (ಭಾಷೆಯ ತಳಹದಿಯಲ್ಲಿ ಜನಕ್ಕೆ ರಾಷ್ಟ್ರೀಯ ಪ್ರಜ್ಞೆ ಮುಟ್ಟಿಸೋದು ಸಾಧ್ಯವಾಯಿತು.) ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ತುಳುವಿಗೆ ಕೂಡ-ಪ್ರಾದೇಶಿಕ ಭಾಷೆ ಎಂಬ ನೆಲೆಯಲ್ಲಿ-ಪ್ರಾಧಾನ್ಯ ದೊರೆತದ್ದನ್ನು ನೆನೆಯಬಹುದು. (ನಿಮ್ಮ ಪ್ರಶ್ನೆಗೆ ''ಊರ್ಜಿತವಾಗಿದೆ'' ಎಂದು ಖಚಿತ ಉತ್ತರ ನೀಡಲಾರೆ. ಕಲೆ ಸಾಹಿತ್ಯ ಸಂಸ್ಕೃತಿಗಳಿಂದ ಜನರ ಉನ್ನತಿಯೇನೋ) ಸಾಧ್ಯ.

೨. ನಮ್ಮ ಸಾಹಿತ್ಯದಲ್ಲಿಂದು 'ರಾಷ್ಟ್ರೀಯ ಪ್ರಜ್ಞೆ' ಕಡಿಮೆಯಾಗಿದೆ ಎಂಬ ಆರೋಪ ಇದೆಯಲ್ಲ ?

ನವೋದಯ ಕಾಲಘಟ್ಟದಲ್ಲಿ ಸಣ್ಣಕತೆ, ನಾಟಕ, ಕವಿತೆ, ಕಾದಂಬರಿಗಳೆಲ್ಲ ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ ಪಡೆದಿವೆ. ಬಹುಸಮಯ ಬಳಲಿ, ಬಳಿಕ ನಿದ್ದೆ ಮಾಡುವಂತೆ–ಅನಂತರದ ಸಾಹಿತ್ಯದಲ್ಲಿ ಅಂಥ ಪ್ರಜ್ಞೆ ಕಡಮೆಯಾದದ್ದು ನಿಜ.

೩. 'ರಾಜಕೀಯ' ಪ್ರವೇಶದಿಂದಾಗಿ ಸಾಹಿತ್ಯಕ್ಷೇತ್ರದ ಬೆಳವಣಿಗೆ ಕುಂಠಿತವಾಗಿರಬಹುದೆ ?

ರಾಜಕೀಯ ಮತ್ತು ಸಾಹಿತ್ಯ ಭಿನ್ನ ಕ್ಷೇತ್ರಗಳು. ಭಿನ್ನವಾದಂತೆ ಸಾಹಿತ್ಯ ಮತ್ತು ರಾಜಕೀಯಗಳಿಗೆ ಅತಿ ವೇಗದಿಂದ ಬೆಳೆಯಲು ಸಾಧ್ಯವಾಗಿಲ್ಲ; ಸಾಧ್ಯವಾಗುವುದಿಲ್ಲ. ಆದರೆ ರಾಜಕೀಯ ಹಸ್ತಕ್ಷೇಪದಿಂದ ಸಾಹಿತ್ಯ ವಾತಾವರಣ ಕಲುಷಿತವಾಗಿದೆ ಎಂಬುದು ಸತ್ಯ. ಅಕಾಡೆಮಿಗಳೇ ಇದಕ್ಕೆ ಉದಾಹರಣೆ. ಗ್ರೀಸ್, ಫ್ರಾನ್ಸ್ ಪ್ರೇರಿತ ಅಕಾಡೆಮಿಗಳ ಉದ್ದೇಶ ನಮ್ಮಲ್ಲಿ ವಿಫಲಗೊಂಡಿದೆ; ಸಾಹಿತಿಗಳಲ್ಲಿ ಯಾಚಕ ಪ್ರವೃತ್ತಿ ದಿನದಿನಕ್ಕೆ ಬೆಳೆದು ದಟ್ಟವಾಗುತ್ತ ಬಂದಿದೆ. ಕಲೆ ಸಾಹಿತ್ಯಗಳಲ್ಲಿ ರಾಜಕೀಯದ (ಸರ್ಕಾರದ) ಹಸ್ತಕ್ಷೇಪ ಖಂಡಿತ ಸರಿಯಲ್ಲ.

೪. ಸ್ವಾತಂತ್ರ್ಯಾನಂತರದ ನಮ್ಮ ಬದುಕು–ಸಾಹಿತ್ಯ ಗಟ್ಟಿ ನೆಲಗಟ್ಟಿನಲ್ಲಿ ಬೆಳೆಯುತ್ತಿದೆ ಎಂದೆನಿಸುತ್ತದೆಯೆ ?

ಬೆಳೆಯುತ್ತಿದೆ-ಎನ್ನಲಾರೆ. (ಮಾಸಾಶನದ ಸಂಗತಿ ನೋಡಿ) ಸ್ವಾತಂತ್ರ್ಯ ಬಂದಮೇಲೆ ಕಲಾ ಸಂತ್ರಸ್ತರು–ಸಾಹಿತ್ಯ ಸಂತ್ರಸ್ತರು ನಿರ್ಮಾಣವಾಗಬೇಕಾಗಿ ಬಂದದ್ದು ದುರಂತ. ಸೃಜನಶೀಲತೆ–ಚಿಂತನಶೀಲತೆಗೆ ಧಕ್ಕೆ ಉಂಟಾಗಿ ಪ್ರತಿಭಾವಂತರು ನಿರ್ವೀರ್ಯರಾಗಬೇಕಾದ ಅನಿವಾರ್ಯತೆ ಬಂದೊದಗಿದೆ. ಸ್ವಾತಂತ್ರ್ಯಾನಂತರ ನಮ್ಮ ನಿರೀಕ್ಷೆ ಈಡೇರಲಿಲ್ಲ ಎಂಬುದು ನಿಜವೇ. ನೈರಾಶ್ಯಭಾವನೆ ದಟ್ಟವಾಗುತ್ತ ನಡೆದಿದೆ. ಒಂದು ಪಂಗಡ ಪಶ್ಚಿಮದತ್ತ ಮುಖ ಮಾಡಿದೆ ; ಇನ್ನೊಂದು ಗುಂಪು ಪುರಾಣ–ಸನಾತನಗಳತ್ತ ಬೊಟ್ಟು ಮಾಡಿದೆ. ಆದರೆ, ಪಂಥ ಮುಖ್ಯವಾಗಬಾರದು. ಅದು ವೇದಿಕೆ ಮಾತ್ರ ಆಗಬಲ್ಲುದು. ಪ್ರತಿಭಾ ಸಾಮರ್ಥ್ಯವೇ ಇಲ್ಲದಿದ್ದರೆ ಕೃತಿ ನಿಲ್ಲಲಾರದು. ಎಲ್ಲಕ್ಕಿಂತ ಬದುಕು ಮುಖ್ಯ. ಅದರಿಂದಲೇ ಲೋಕ ಪ್ರಭಾವಿತವಾಗಬೇಕು. ಹೀಗಾಗಿಲ್ಲ. ಅದರಿಂದ ನಮ್ಮ ಜ್ವಲಂತ ಸಮಸ್ಯೆಗಳು, ದೈನಂದಿನ ಬದುಕು ಗೌಣವಾಗಬೇಕಾದ ಸನ್ನಿವೇಶ ನಿರ್ಮಾಣವಾಗಿದೆ.

೫. ಶತಶತಮಾನಗಳಿಂದ ಆಳಿಸಿಕೊಂಡ ನಮ್ಮಲ್ಲಿ, (1947ರ) ಪ್ರಜಾಪ್ರಭುತ್ವದ ಬದಲಾವಣೆ. ನಮಗೆ ಒಂದು ನೆಲೆಯನ್ನು ಕಂಡುಕೊಳ್ಳುವಲ್ಲಿ ಸಫಲವಾಗಿದೆಯೇ ?

ಪ್ರಜಾಪ್ರಭುತ್ವ ಪದ್ಧತಿ ನಮಗೆ ಬ್ರಿಟಿಷರಿಂದ ಬಂದುದೆಂಬ ಭ್ರಮೆ ಸರಿಯಲ್ಲ. ಆದಿಯಿಂದಲೂ (ಪ್ರಾಚೀನ ಕಾಲದಿಂದಲೂ) ಇದರ ಮೂಲ ಸ್ರೋತ ನಮ್ಮಲ್ಲಿತ್ತು. ಸ್ವಾತಂತ್ರ್ಯ ಬಂದೊಡನೆ ಅದಕ್ಕೊಂದು ರೂಪ ಸಿಕ್ಕಿತು, ಅಷ್ಟೆ. ಅದಕ್ಕೆ ನಾನಾ ಕಾರಣಗಳ ಕೊಡುಗೆ ಇದೆ. ಇತ್ತೀಚಿನ ಬೆಳವಣಿಗೆಯಾದರೂ ಹೀಗೇನೇ. ಅಂದರೆ, ಬದಲಾವಣೆ, ಕಾಲಕಾಲದ ಬೆಳವಣಿಗೆ. ಬದಲಾವಣೆ ಒಳ್ಳೆಯದಕ್ಕೆ ಎಂಬ ನಂಬಿಕೆ ನನ್ನದು. ನಮ್ಮದೇ ಆದ ಒಂದು ನೆಲೆಯನ್ನು ಮಾತ್ರ ಕಂಡುಕೊಳ್ಳಬೇಕು.

೬. 'ಸಾಹಿತ್ಯ–ಕ್ರಾಂತಿ' ಬಗೆಗೆ ನಿಮ್ಮ ನಂಬಿಕೆ ಏನು ?

ಸಾಹಿತ್ಯದಿಂದ ಕ್ರಾಂತಿ ಸಾಧ್ಯವಿಲ್ಲ. ಅದಕ್ಕೆ ಪೂರಕವೋ ಪ್ರೇರಕವೋ ಆಗಬಲ್ಲುದು. ಸಾಹಿತ್ಯ ಪ್ರೇರಣೆ ಪಡೆಯುವುದು ಬದುಕಿನಿಂದ. ಸಾಹಿತಿಗೆ ವಿನಯ ಮುಖ್ಯ.... ಎಲ್ಲಕ್ಕಿಂತ ಬದುಕು ದೊಡ್ಡದು.

೧೯೮೩

ವಸಂತಕುಮಾರ ಪೆರ್ಲ ಚುರುಕು ಶೈಲಿಯ ಯುವ ಪತ್ರಿಕೋದ್ಯೋಗಿ; ಜತೆಗೆ ಸೂಕ್ಷ್ಮ ಸಂವೇದಿಯಾದ ಕವಿ ಹಾಗೂ ಕತೆಗಾರ. ಚಲನಚಿತ್ರ ಮಾಧ್ಯಮದಲ್ಲೂ ಆಸಕ್ತರು. 'ಪ್ರಜಾಪ್ರಭುತ್ವ'ದ ಸಂಪಾದಕ ಮಂಡಲಿಯ ಶ್ರೀಯುತರು (ಸಂಪಾದಕರು: ವಿಠಲ ಬಂಟ್ವಾಳ) ೧೯೮೩ ಆಗಸ್ಟ್ ೧೦ರಂದು ನನ್ನ 'ಸಂದರ್ಶನ'ಕ್ಕಾಗಿ ಬಂದರು. ೧೪ರ ಸಂಚಿಕೆಯಲ್ಲೇ ಪ್ರಕಟವಾದ 'ಸಂದರ್ಶನ' ವಿಶಿಷ್ಟವಾಗಿತ್ತು. ಅದು ಪ್ರಶ್ನೆಗಳಿರಲಿಲ್ಲ. ನನ್ನ ಉತ್ತರಗಳನ್ನು ಆಧರಿಸಿ, ನಾನೇ ಹೇಳಿದಹಾಗೆ ರಚಿಸಿದ ಲೇಖನ. ಈ ಸಂಕಲನದಲ್ಲಿ ಅದನ್ನು ಸೇರಿಸಿಕೊಳ್ಳುವ ಯೋಜನೆ ಮೂಡಿ ಮತ್ತೊಮ್ಮೆ ಅದನ್ನೋದಿದಾಗ, ಗಾಂಧೀಜಿ ಜತೆ ನಾನು ಹೇಳದೇ ಇದ್ದ ಒಂದು ಹೆಸರು ಕಂಡೆ. ಭಾಷೆ, ಶೈಲಿ ಕೆಲವೆಡೆ ನನ್ನದಲ್ಲ; ವಾಕ್ಯ–ವಿಚಾರಗಳ ಪುನರುಕ್ತಿಯಾಗಿದೆ–ತುಸು ಪರಿಷ್ಕರಿಸಬೇಕಲ್ಲ ಎನಿಸಿತು. ಪತ್ರಿಕಾಕ್ಷೇತ್ರದ ಅವಿಶ್ರಾಂತ ದುಡಿಮೆಯಲ್ಲಿ ಇದು ಸ್ವಾಭಾವಿಕ. ಗೆಳೆಯ ಪೆರ್ಲರು ಒಪ್ಪಿದರು. ತಾವು ಕೇಳಿದ್ದ ಆರು ಪ್ರಶ್ನೆಗಳನ್ನು ಬರೆದು ಕೊಟ್ಟರು. ಅವರ ನೆರವಿನಿಂದ ಈ ಪ್ರಶ್ನೋತ್ತರ ಸಂದರ್ಶನ ಇಲ್ಲಿ ಪ್ರಕಟವಾಗಿದೆ.

ಮಾರ್ಕ್ಸ್‌ನ ಮರಣ ಶತಾಬ್ದಿ ಸಂದರ್ಭದಲ್ಲಿ

'ಸುಧಾ' ಪ್ರಶ್ನಾವಳಿಗೆ ಉತ್ತರ

೧. ಕಾರ್ಲ್ ಮಾರ್ಕ್ಸ್‌ನ ಜೀವನ ಮತ್ತು ಸಾಧನೆಗಳು ಈ ನೂರು ವರ್ಷಗಳಲ್ಲಿ ಪ್ರಪಂಚದ ಮೇಲೆ ಬೀರಿರುವ ಪ್ರಭಾವದ ಬಗ್ಗೆ ನಿಮ್ಮ ಅನಿಸಿಕೆ ಏನು ?

ಅನಿಸಿಕೆ : ಬೆರಗು ! ತಾನು ರೂಪಿಸಿದ ಸಿದ್ಧಾಂತಗಳಿಂದ ಮಾನವನ ಇತಿಹಾಸಕ್ಕೆ ಹೊಸ ತಿರುವು ನೀಡಿದ ಆ ಮಹಾ ತಲೆಬುರುಡೆಗೆ, ಬಿರುಸು ಗಡ್ಡಕ್ಕೆ, ನನ್ನ ನಮನ !

೨. ಅಮೆರಿಕ ನೇತೃತ್ವದ ಬಂಡವಾಳಶಾಹಿ ಗುಂಪು ಮತ್ತು ಬಲಿಷ್ಠ ವಾಗುತ್ತಿರುವ ಸಮಾಜವಾದಿ ಗುಂಪು ಇವೆರಡೂ ಇರುವ ಸದ್ಯದ ಜಾಗತಿಕ ಪರಿಸರದಲ್ಲಿ ನೀವು ನಿರೀಕ್ಷಿಸುವ ಮುಂದಿನ ಬೆಳವಣಿಗೆಗಳು ಯಾವುವು ?

ಇನ್ನೂ ಒಂದಷ್ಟು ಕಾಲ ಸಹಬಾಳ್ವೆ-ಅಥವಾ ಯಾವ ಕ್ಷಣ ಬೇಕಾದರೂ ಸರ್ವನಾಶ.

೩. "ಮಾರ್ಕ್ಸ್‌ವಾದ ಪಾಶ್ಚಾತ್ಯ ಸಮಾಜಕ್ಕೆ ಮಾತ್ರ ಅನ್ವಯಿಸುತ್ತದೆ, ಜಾತಿವ್ಯವಸ್ಥೆ ಇರುವ ಭಾರತಕ್ಕೆ ಅನ್ವಯಿಸುವುದಿಲ್ಲ." – ಈ ವಾದಕ್ಕೆ ಪ್ರತಿಕ್ರಿಯೆಯೇನು ?

ಈ ವಾದ ಸರಿಯಲ್ಲ. ಜಾತಿ ವ್ಯವಸ್ಥೆ ಭಾರತಕ್ಕಷ್ಟೇ ಹೊಸಲು

ಷ್ಟವಿದು ತಪ್ಪು. ಇದು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ದೇಶಗಳಲ್ಲೂ ಇದೆ. ಈ ದೇಶದಲ್ಲಿ ಸಮಾಜದ ಜೀವನಗತಿಯಲ್ಲಿ ಮಾರ್ಪಾಟುಗಳಾಗಿರುವ ವಿಧಾನವನ್ನು ನಾವು ಮುಖ್ಯವಾಗಿ ಗಮನಿಸಬೇಕು. ಜಾತಿಯೂ ವರ್ಗವೂ ಒಂದೇ ಎನಿಸಿದ ಉದಾಹರಣೆಗಳು ಭಾರತದಲ್ಲಿ ಸಿಗುತ್ತವೆ. ಬಂಡವಾಳ ಬೆಳೆದಂತೆ ಔದ್ಯೋಗೀಕರಣ ಹೆಚ್ಚಿದಂತೆ ಜಾತಿ ಜನರ ಖಾಸಗಿ ವಿಚಾರವಾಗಿ, ವರ್ಗ ರೂಪ ಮೊನೆಸಬೀತವೆ. ರಾಜಕೀಯ ಕಾರಣಗಳಿಗಾಗಿ ಜಾತಿಪದ್ಧತಿ ತೋರಿಕೆಗೆ ಉಗ್ರರೂಪ ತಳೆಯುವುದುಂಟು. ಇಲ್ಲಿ ಈಗ ಇರುವುದು ಆ ಹಂತ.

೪. ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಷಯಗಳಿಗೂ ರಾಜಕೀಯಕ್ಕೂ ಅಪಾರ ಸಂಬಂಧವಿದೆ ಅನ್ನುವ ಮಾರ್ಕ್ಸ್‌ವಾದಿ ವಿಚಾರಧಾರೆಯ ಬಗ್ಗೆ ನಿಮ್ಮ ವಿವರಣೆ ಏನು ? ಸಮಕಾಲೀನ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಳವಳಿಗಳ ಮೇಲೆ ಎಡಪಂಥೀಯ ವಿಚಾರಗಳ ಪ್ರಭಾವ ಇದೆಯೆ ?

ಜನರೊಡನೆ (ಓದು ಬಲ್ಲವರು ಹಾಗೂ ಓದಲು ಬಾರದವರು) ಸಂವಹನ ಸಾಧಿಸುವುದರಲ್ಲಿ ಸಾಹಿತ್ಯ-ಕಲೆ ಇತ್ಯಾದಿ ಪ್ರಮುಖ ಪಾತ್ರ ವಹಿಸುತ್ತವೆ. ಆ ಕ್ಷೇತ್ರಗಳ ಸೂಕ್ಷ್ಮ ಸಂವೇದಿಗಳು ಮತ್ತು ಜ್ಞಾನದಾಹಿಗಳು ಮಾರ್ಕ್ಸ್‌ವಾದೀ ಸಿದ್ಧಾಂತದಿಂದ ಸಹಜವಾಗಿಯೇ ಪ್ರಭಾವಿತರಾಗುತ್ತಾರೆ. ಅಂಥವರಲ್ಲಿ ಕೆಲವರು ಮಾರ್ಕ್ಸ್‌ವಾದವನ್ನು ಆಧರಿಸಿದ ರಾಜಕೀಯ ಪಕ್ಷಗಳತ್ತ ಆಕರ್ಷಿತರಾಗುತ್ತಾರೆ ; ಅವರು ಆ ಪಕ್ಷಗಳ ಸಕ್ರಿಯ ಸದಸ್ಯರಾಗುವುದೂ ಸಾಧ್ಯ. ಆಗ ಅವರ ಸೃಜನಶೀಲತೆಗೂ ಪಕ್ಷದ ದೈನಂದಿನ ಚಟುವಟಿಕೆ–ತಂತ್ರಗಳಿಗೂ ತಕರಾರು ಬಂದು, ಅವರು ಕಷ್ಟಕ್ಕೀಡಾಗಬಹುದು. ಒಪ್ಪಿಕೊಳ್ಳಬೇಕಾದ ವಿಷಯವೆಂದರೆ-ಸಾಹಿತ್ಯಕಲೆ ಇತ್ಯಾದಿಗಳನ್ನು ಬಳಸಲು ರಾಜಕೀಯ ಪಕ್ಷಗಳಿಗೆ ಇರುವ ಹಕ್ಕು. ಜಾಗರಣ ಮತ್ತು ಪ್ರಚಾರಕ್ಕೆ (agit - prop) ಮಹತ್ವದ ಸ್ಥಾನ ದೊರೆತದ್ದು, ಮಾರ್ಕ್ಸ್‌ವಾದವನ್ನು ಹಿಂದುಳಿದಿದ್ದ ರಷ್ಯಕ್ಕೆ ಲೆನಿನ್ ಅನ್ವಯಿಸಿದ ಕಾಲಾವಧಿಯಲ್ಲಿ. ಅಕ್ಟೋಬರ್ ಕ್ರಾಂತಿಯ ಅನಂತರ. ಶಾಂತಿ–ಸಮರ–ಕ್ರಾಂತಿ ಯಾವುದೇ ಇರಲಿ, ಪಕ್ಷಗಳ ಜಾಗರಣ-ಪ್ರಚಾರ ಯಂತ್ರ ಹಗಲೂ ಇರುಳೂ ಕೆಲಸ ಮಾಡಬೇಕು. ಇಲ್ಲಿ ದುಡಿಯಲು ನಿಯೋಜಿತರಾಗುವ ಲೇಖಕರು-ಕಲಾವಿದರಿಂದ ಶ್ರೇಷ್ಠ ಸೃಜನಶೀಲ

ಕೃತಿಯ ರಚನೆಯಾಗಲೀ ಮೇಲ್ಮಟ್ಟದ ಕಲಾಸೃಷ್ಟಿಯಾಗಲೀ ಸಾಧ್ಯವಾಗದಿರಬಹುದು. ಆದರೆ ಪಕ್ಷದ ಬಲಸಂವರ್ಧನೆ ಮಾತ್ರ ಖಂಡಿತ ಆಗುತ್ತದೆ.

ಅಭಿವ್ಯಕ್ತಿವಲಯದಲ್ಲಿ ಪ್ರಗತಿಪರ ವಿಷಯಗಳ ಚರ್ಚೆಗಾಗಿ ಪ್ರತಿಪಾದನೆಗಾಗಿ ಒಂದು ವೇದಿಕೆ ನಿರ್ಮಾಣವಾಯಿತು ಎಂದಿಟ್ಟುಕೊಳ್ಳಿ. ಪಕ್ಷದ ಒಬ್ಬಿಬ್ಬರು ಕಾರ್ಯಕರ್ತರು (ಅವರು ಬರಹಗಾರರೋ ಪತ್ರಕರ್ತರೋ ಕಲಾವಿದರೋ ಆಗಿದ್ದರೆ) ಆ ವೇದಿಕೆಗೆ ಬರಲು ಅರ್ಹರು. ಆಗ, ವೇದಿಕೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅವರು ಯತ್ನಿಸಬಾರದು. ಬದಲು, ಆ ಸಂಘಟನೆಯ ನಿಯಮಗಳಿಗೆ ಬದ್ಧರಾಗಿದ್ದು, ತಮ್ಮ ನಡೆನುಡಿಗಳಲ್ಲಿ ಮೇಲ್ಮೆಯನ್ನು ಮೆರೆಯಬೇಕು. ಹಾಗಿರದೆ, ನಾನಾ ತಂತ್ರಗಳನ್ನು ಬಳಸಿ ವೇದಿಕೆಯನ್ನು ಕೈವಶಪಡಿಸಿಕೊಂಡರೆ, ಅಂದಿನಿಂದ ಅದು 'ಭಕ್ತರ ಗುಂಪು' ಎನಿಸಿಕೊಳ್ಳುತ್ತದೆ. ಉಳಿದವರು ಶಂಕೆ ಸಂದೇಹಗಳ ಹೊರೆಯೊಡನೆ ದೂರವಾಗುತ್ತಾರೆ.

೧೯೪೦ನೆಯ ವರ್ಷಗಳೀಚೆಗೆ ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಎಡಪಂಥೀಯ ಪ್ರಭಾವ ಸ್ಫುಟವಾಗಿ ಕಂಡುಬಂದಿದೆ. ಒಮ್ಮೆ ಹೆಚ್ಚು ಒಮ್ಮೆ ಕಮ್ಮಿ, ಪ್ರಭಾವ ಇರುವುದಂತೂ ಖಚಿತ.

೫. ಶಿಕ್ಷಣ, ಆಡಳಿತ ವ್ಯವಹಾರಗಳಲ್ಲಿ ಭಾಷಾಪ್ರಶ್ನೆ ಕುರಿತಂತೆ ಮಾರ್ಕ್ಸ್‌ವಾದಿಗಳ ನಿಲುವನ್ನು ನೀವು ಒಪ್ಪುತ್ತೀರಾ ?

ಏನು ನಿಲುವು ? ಈ ವಿಷಯದಲ್ಲಿ ನನ್ನವೇ ಆದ ಅಭಿಪ್ರಾಯಗಳಿವೆ. ಅವು ಮಾರ್ಕ್ಸ್‌ವಾದಿ ಹೌದೋ, ಅಲ್ಲವೊ !

ಮಾತೃಭಾಷೆ ಎನ್ನುವುದು ಪ್ರಾಚೀನ ಮಾತೃಪೂಜೆಯ ಅವಶೇಷ. ಎಳೆಯ ಮಗುವನ್ನು ಎಲ್ಲಿಗೆ ಬೇಕಾದರೂ ಒಯ್ಯಿರಿ. ಅದು ಆಡತೊಡಗುವುದು ತನ್ನ ಸುತ್ತಲ ಸಮುದಾಯದ ಭಾಷೆಯನ್ನು. ಹಲವು ಸಮುದಾಯಗಳ ಸಮುಚ್ಚಯವೇ ಸಮಾಜ. ಒಂದು ಸಮಾಜದಲ್ಲಿ ಎಷ್ಟು ಸಮುದಾಯಗಳಿರುತ್ತವೊ ಅಷ್ಟು ಭಾಷೆಗಳಿರುತ್ತವೆ.

ನಮ್ಮದು ಪ್ರಜಾಪ್ರಭುತ್ವವಾದ್ದರಿಂದ, ರಾಜ್ಯಗಳು ಭಾಷೆಗಳನ್ನು ಆಧರಿಸಿ ರೂಪಿತವಾಗಿರುವುದರಿಂದ, ಒಂದು ರಾಜ್ಯದಲ್ಲಿ ಬಹುಸಂಖ್ಯಾತರ ಭಾಷೆ ಆಡಳಿತ ಭಾಷೆಯಾಗುತ್ತದೆ. ಶಿಕ್ಷಣವೂ ಅದೇ ಭಾಷೆಯಲ್ಲಿ. ಆದರೆ

ಅಲ್ಪ ಸಂಖ್ಯಾತರಿಗೂ ತಮ್ಮ ಸಮುದಾಯ ನುಡಿಯಲ್ಲಿ ಶಿಕ್ಷಣ ಪಡೆಯುವ ಅವಕಾಶ ಇರಬೇಕು.

ಚಿಕ್ಕವರು ಬಲು ಸುಲಭವಾಗಿ ಭಾಷೆಗಳನ್ನು ಕಲಿಯುತ್ತಾರೆ. ಎರಡು ಮೂರನ್ನು ಅಥವಾ ನಾಲ್ಕೈದನ್ನು ಸಂವಹನಕ್ಕೋಸ್ಕರ ಅವರು ಬಳಸಬಲ್ಲರು. ದೊಡ್ಡ ಭಾಷೆಗಳಿಂದ ದೊರೆಯುವ ಲಾಭದಿಂದ ಯಾರೂ ವಂಚಿತರಾಗಬಾರದು. ಕರ್ನಾಟಕದಲ್ಲಿ ಕನ್ನಡ, ಭಾರತ ವಿಶಾಲವಾದ ಬಹುಜನಾಂಗೀಯ ದೇಶವಾದ್ದರಿಂದ ಸಂಪರ್ಕಕ್ಕಾಗಿ ಹಿಂದೂಸ್ಥಾನಿ ಮತ್ತು ಅಂತರರಾಷ್ಟ್ರೀಯ ವಿಸ್ತಾರದಲ್ಲಿ ಅತ್ಯಗತ್ಯವಾದ ಇಂಗ್ಲಿಷ್-ಇವು ಮೂರೂ ಬೇಕು. ಬುದ್ಧಿಶಾಲಿಯಾದ ಎಳೆಯನಿಗೆ ಇನ್ನೂ ಒಂದೆರಡು ಭಾಷೆಗಳನ್ನು ತಲೆಯೊಳಕ್ಕೆ ತುರುಕಿಕೊಳ್ಳುವ ಸಾಮರ್ಥ್ಯ ಇರುತ್ತದೆ.

—೧೯೮೩

ಪ್ರಥಮ ಪ್ರಕಟಣೆ ೨೫ ಡಿಸಂಬರ್ ೧೯೮೩ರ 'ಸುಧಾ' ಸಾಪ್ತಾಹಿಕದಲ್ಲಿ.
ಸಂಪಾದಕರು: ಎಂ. ಬಿ. ಸಿಂಗ್. —ನಿ.

‘ಸಂಕಲನ-೧೯೮೩’ ರಲ್ಲಿ

—ಪ್ರಶ್ನೋತ್ತರ

೧. ನಿಮ್ಮ ಬರವಣಿಗೆಯ ಮೂಲ ಸೆಲೆ ಯಾವುದು ? ಬಾಲ್ಯದ ನೆನಪುಗಳು ಬರವಣಿಗೆಯಲ್ಲಿ ಮತ್ತೆ ಮತ್ತೆ ಬರುತ್ತವೆ ಎನ್ನುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಬದುಕಿನ ಮೂಸೆಯಲ್ಲಿ ನಡೆಯುವ ನಿರಂತರ ಕ್ರಿಯೆಯೇ ನನ್ನ ಬರವಣಿಗೆಯ ಮೂಲ ಸೆಲೆ. ಆ ಮೂಸೆಯಲ್ಲಿ ಲೋಕದ ಯಾತನೆ ದ್ರವರೂಪವನ್ನು ತಳೆಯುತ್ತದೆ, ಘನರೂಪವನ್ನು ತಾಳುತ್ತದೆ.

ಬಾಲ್ಯದ ನೆನಪುಗಳು ಬರವಣಿಗೆಯಲ್ಲಿ ಮತ್ತೆ ಮತ್ತೆ ಬರುತ್ತವೆ ಎನ್ನುವುದಕ್ಕೆ ಮನೋವಿಜ್ಞಾನವನ್ನು ಕುರಿತ ಅರೆಬರೆ ಅರಿವೇ ಪ್ರೇರಣೆ. ನಾನು ಈ ನಿಲುವಿನ ಪ್ರತಿಪಾದಕನಲ್ಲ. ನನ್ನ ಅಭಿಪ್ರಾಯದಲ್ಲಿ, ಬಾಲ್ಯದಷ್ಟೇ ಮುಖ್ಯ ಹದಿಹರೆಯ ಸಹ. ಅಲ್ಲದೆ, ಯೌವನದ ಬಗೆಗೆ ಯಾಕೆ ಉಪೇಕ್ಷೆ? ಅನಂತರದ ದಿನಗಳೂ ಇಲ್ಲವೆ ? ಮತ್ತೆ ಮತ್ತೆ ಕಾಡುವುದು—ಎಲ್ಲರನ್ನೂ ಕಾಡಬೇಕಾದ್ದು—ಬದುಕಿನ ಸಮಗ್ರ ಸ್ಮರಣೆ. ಅದರ ಅಣು ಚಿತ್ರವೋ ವಿರಾಟ್ ರೂಪವೋ ಲೇಖಕನಿಗೆ ಪುನಃ ಪುನಃ ಗ್ರಾಸವಾಗುವುದು ಸ್ವಾಭಾವಿಕ.

೨. ನಿಮ್ಮ ಬರವಣಿಗೆಯ ಕ್ರಮ ಹೇಗೆ ? ದಿನಕ್ಕೆ ಇಂತಿಷ್ಟೇ ಬರೆಯುವುದು ಎಂದೇನಾದರೂ ಇದೆಯೆ ? ತುಂಬಾ ತಿದ್ದುತ್ತೀರಾ?

ಸಣ್ಣಕಥೆ, ಲೇಖನ, ಅಂಕಣ ಒಂದೇ ಪಟ್ಟಿಗೆ ಚಟ್. ಬರೆಹಗಾರನಾದ

ಆರಂಭದ ವರ್ಷಗಳಲ್ಲಿ ಬರೆದದ್ದನ್ನು ಓದಿ ಕೂಡ ನೋಡುತ್ತಿರಲಿಲ್ಲ. ಇದು ಪತ್ರಿಕಾ ವೃತ್ತಿಯಿಂದ ತಗಲಿಸಿಕೊಂಡ ಜಾಡ್ಯ. ಅಚ್ಚಿನ ಮನೆಯಲ್ಲಿ ಸೃಷ್ಟಿ ಕಾರ್ಯ ನಡೆದಾಗ, ಬರೆದಂತೆ ಹಾಳೆಗಳನ್ನು ಮೊಳೆಜೋಡಿಸಲು ಒಯ್ಯುತ್ತಿದ್ದರು. ಕ್ರಮೇಣ, ಬರೆದದ್ದನ್ನು ಒಮ್ಮೆಯಾದರೂ ಓದಿನೋಡಿ ಅಚ್ಚಿಗೆ ಕೊಡುವುದು ಮೇಲು ಎನಿಸಿತು. ಕಾದಂಬರಿಗಳ ಗತಿಯೂ ಅದೇ. 'ವಿಮೋಚನೆ'ಯ ಕೊನೆಯ ಅಧ್ಯಾಯವನ್ನು ಮುದ್ರಣಾಲಯದಲ್ಲೆ ಮುಗಿಸಿದೆ. 'ಬನಶಂಕರಿ'ಯ ಕೆಲ ಭಾಗಗಳನ್ನು 'ಜನಪ್ರಗತಿ' ಕಾರ್ಯಾಲಯದಲ್ಲಿ ಬರೆದೆ. 'ಚಿರಸ್ಮರಣೆ' ದಿನಕ್ಕೊಂದು ಅಧ್ಯಾಯದಂತೆ ಸಿದ್ಧವಾಯಿತು. ಅಧ್ಯಾಯ ಸಿದ್ಧವಾದೊಡನೆ ಅಚ್ಚುಕೂಟಕ್ಕೆ ರವಾನೆ. ನನ್ನ ಕೆಲ ಧಾರಾವಾಹಿಗಳು ನಲ್ಲಿಯಲ್ಲಿ ಬಂದ ನೀರು. ಆದರೆ, ನೀರಿನ ಸರಬರಾಜುಗಾರನಾಗಿ ಯಾರಿಗೂ ಕೈಕೊಟ್ಟುದಿಲ್ಲ!

ವಸ್ತು ಹುದುಗು ಬರಲು ಕೆಲವು ಸಲ ಒಂದು ಗಂಟೆ ಸಾಕು. ಅಥವಾ ಒಂದು ದಿನ. ಬೇರೆ ಕೆಲವು ಸಾರಿ ತಿಂಗಳು ಹಿಡಿದೀತು. ಮತ್ತೆ ಕೆಲವು ಬಾರಿ ವರ್ಷಗಳೇ ತಗಲಬಹುದು. ಚೌಕಟ್ಟು ಸಿದ್ಧವಾದ ಮೇಲೆ 'ಬುಗಿ'. ಕೊನೆಯ ನಿಲ್ದಾಣ ತಲಪುವವರೆಗೂ ಓಟ.

ತಿದ್ದುವುದು ಒಳ್ಳೆಯದು ; ತುಂಬಾ ತಿದ್ದುವುದು ತುಂಬಾ ಒಳ್ಳೆಯದು. ನನ್ನಿಂದ ಈ ವರೆಗೆ ಆಗಿಲ್ಲ. ಮುಂದೆಯೂ ಆಗಲಾರದು - ಇನ್ನು ಹೆಚ್ಚು ವೇಳೆ ಇಲ್ಲವಾದ್ದರಿಂದ. ಅಲ್ಲದೆ ಈ ತಿದ್ದಾಟದ ಸಿರಿವಂತಿಕೆ ಬರಹಾನ್ನವನ್ನು ನಂಬಿದವರಿಗೆ ದಕ್ಕುವುದಿಲ್ಲ.(ಈ ಉತ್ತರ ಮಾಲಿಕೆಯನ್ನು ಮಾತ್ರ ತುಸು ಪರಿಷ್ಕರಿಸಿದ್ದೇನೆ!)

೩. ನಿಮ್ಮ ಮೊದಲ ಬರಹ ಯಾವುದು ? ನಿಮ್ಮನ್ನು ಬರವಣಿಗೆಗೆ ಪ್ರಚೋದಿಸಿದ ವ್ಯಕ್ತಿ, ಸಂಗತಿಗಳ ಬಗ್ಗೆ ಹೇಳುತ್ತೀರಾ ?

ಬಾಲ್ಯದಲ್ಲಿ (ನನ್ನ 13ನೇ ವರ್ಷ, ಇಸವಿ 1937) ಪಣಿಯಾಡಿಯವರ 'ತುಳುನಾಡ್' ಓದುತ್ತಿದ್ದೆ. ಅದರಲ್ಲಿ ಎಂ. ವಿ. ಹೆಗ್ಡೆಯವರ ಭಾವಗೀತೆಗಳಿರುತ್ತಿದ್ದುವು. ಓದಿ ರೋಮಾಂಚಗೊಳ್ಳುತ್ತಿದ್ದೆ. ನಾನೂ ಬರೆದೆ. ತುಳುವಿನಲ್ಲಿ. ಕವಿತೆಗಳನ್ನು, ಕತೆಗಳನ್ನು, ನಾಟಕಗಳನ್ನು (?). ಬರೆದದ್ದನ್ನೆಲ್ಲ ಅಚ್ಚಿನಲ್ಲಿ ಕಂಡೆ. ಮುದ್ರಣದ ಮಸಿಯ ಘಾಟು ಮೂಗನ್ನು ಹೊಕ್ಕಾಗ ಮತ್ತೇರಿದ ಅನುಭವವಾಗುತ್ತಿತ್ತು. ತುಳುವಿನಲ್ಲಿ ನಾನು ಬರೆದದ್ದು ಕೆಲ ತಿಂಗಳು ಮಾತ್ರ.

ಆಗ ಕನ್ನಡ ಪತ್ರಿಕೆಗಳಲ್ಲಿ ತಪ್ಪದೆ ಬರುತ್ತಿದ್ದ ನಾರದ ಕತೆಗಳಿಂದ ನಾನು ಆಕರ್ಷಿತನಾಗಿರಬೇಕು. ಅದೇ ವರ್ಷ ನಾನು ಒಂದು ಕತೆ ಬರೆದೆ, 'ಮೋಹ ಜಾಲ'. ಕಿವಿಗೆ ಬಿದ್ದಿದ್ದ ಯಾವುದೋ ಅಂತೆ ಕಂತೆಗೆ ರಂಗು ಹಚ್ಚಿ, ಕೇವಲ ಪತ್ರಗಳ ಸರಪಳಿಯಾಗಿ ನೆಯ್ದ ಪ್ರೇಮಕಥೆ. ಕಡೆಂಗೋಡ್ಲು ಶಂಕರಭಟ್ಟರು ಸಂಪಾದಕರಾಗಿದ್ದ 'ರಾಷ್ಟ್ರ ಬಂಧು' ವಿಗೆ (ಬುಕ್) ಪೋಸ್ಟ್ ಮಾಡಿದೆ. ಕಣ್ಣು ಮುಚ್ಚಿ ಎಸೆದ ಕಲ್ಲು. ಅಚ್ಚಾಗಿಯೇ ಬಿಟ್ಟಿತು! ('ಕಿಶೋರ' ಎಂಬ ಕಾವ್ಯನಾಮ. ಕುಳುಕುಂದ ಶಿವರಾಯ ಹೆಸರಿನಿಂದ ಮೂರಕ್ಷರ ಎತ್ತಿ ಟಂಕಿಸಿದ್ದು.)ಉತ್ತೇಜಿತನಾಗಿ ಕಥೆಗಳನ್ನು ಹೊಸೆಯುತ್ತ ಸಾಗಿದೆ. 'ರಾ.ಬಂ' ಮುದ್ರಿಸುತ್ತ ಹೋಯಿತು. ಮೆಚ್ಚುಗೆ ಟೀಕೆ ವಿಮರ್ಶೆ ಗೊತ್ತಿಲ್ಲ. ವಿದ್ಯಾರ್ಥಿವೃಂದ ಅಧ್ಯಾಪಕ ಬಳಗ ವಿಸ್ಮಯದಿಂದ ನೋಡುತ್ತಿದ್ದರು. ನಾನು ಆಗ ಸಮಾಜದಲ್ಲಿ ವೈಯಕ್ತಿಕವಾಗಿ ತೊಳಲಾಡಿದವನು. ಮೂಡುತ್ತಲಿದ್ದ ಕೋಡುಗಳನ್ನು ಮುಟ್ಟಿ ಮುಟ್ಟಿ ನೋಡುತ್ತ, ನಾನು ನಾನೇ ಆಗತೊಡಗಿದೆ.

೪. ನಿಮ್ಮ ಮೇಲೆ ತುಂಬಾ ಪ್ರಭಾವ ಬೀರಿದ ಲೇಖಕರು ಯಾರು ? ನೀವು ಮತ್ತೆ ಮತ್ತೆ ಓದುವ ಲೇಖನ ಬರಹ ಯಾವುದಾದರೂ ಇದ್ದರೆ ತಿಳಿಸಿ.

'ಪ್ರಭಾವ ಬೀರಿದ' ಎಂದು ಯಾವನೇ ಒಬ್ಬ ಲೇಖಕನನ್ನು, ಯಾವುದೇ ಒಂದು ಕೃತಿಯನ್ನು, ಗುರುತಿಸಲು ಆಗುವುದಿಲ್ಲ.

ಓದು ಸರಾಗವಾದಾಗ, ಪುಟತಿರುಗಿಸಿದ್ದು ಅಳಸಿಂಗರಾಚಾರ್ಯರ 'ರಾಮಾಯಣ' 'ಮಹಾಭಾರತ' ಗಳನ್ನು. ಎರಡು ಸಲ. ರಂಜನೆಗಾಗಿ. ಇಂಗ್ಲಿಷಿನಲ್ಲಿ ಓದುವುದು ಸಾಧ್ಯವಾದಾಗ (ಹೈಸ್ಕೂಲಿನಲ್ಲಿ), ಮೊದಲು ಸಿಕ್ಕಿದ್ದು ಟಾಗೋರರ 'ಗೋರಾ'. ಒಂದೇ ವಾಚನ. ಡಿಕೆನ್ಸ್ ಆದಿಯಾಗಿ ಮುಂದೆ ಪರಿಚಿತರಾದ ಹಲವು ಐರೋಪ್ಯ ಲೇಖಕರಲ್ಲಿ ಹೆಚ್ಚು ಇಷ್ಟವಾದವರು ಇಬ್ಬರು : ಫ್ರಾನ್ಸಿನ ರೊಮಾ ರೊಲಾ ಮತ್ತು ರಷ್ಯದ ಮ್ಯಾಕ್ಸಿಂ ಗಾರ್ಕಿ. ಒಬ್ಬರ 'ಜೀನ್ ಕ್ರಿಸ್ಟೊಫಿ'ಯನ್ನು ಇನ್ನೊಬ್ಬರ 'ಮದರ್' ಅನ್ನು ಎರಡು ಸಲ ಓದಿದೆ. ಇವರಿಬ್ಬರ ಭುಜಗಳ ಮೇಲೆ ಕುಳಿತು ಮಾನವಸಮುದಾಯವನ್ನು ನಿಚ್ಚಳವಾಗಿ ನೋಡಲು ಕಲಿತೆ ಅನಿಸುತ್ತದೆ.

ನಾನು ಮತ್ತೆ ಮತ್ತೆ ಓದುವ ಲೇಖಕ ಯಾರೂ ಇಲ್ಲ. ಮೂಲ

ರಾಮಾಯಣ ಮಹಾಭಾರತಗಳನ್ನು, ಬೇರೆ ಬೇರೆ ಭಾಷಾಂತರ ರೂಪಾಂತರಗಳಲ್ಲಿ, ಇತ್ತೀಚೆಗೆ ಪುನಃ ಓದಿದ್ದುಂಟು— ಅಧ್ಯಯನದ ದೃಷ್ಟಿಯಿಂದ.

ಪ್ರ. ಇನ್ನು ಮುಂದೆ ಬರವಣಿಗೆಯೇ ಸಾಧ್ಯವಿಲ್ಲ ಎಂದು ಯಾವಾಗಲಾದರೂ ನಿಮಗನ್ನಿಸಿದೆಯೆ ? ಅಂಥ ಸಮಯದಲ್ಲಿ ಮತ್ತೆ ಬರವಣಿಗೆ ಪ್ರಾರಂಭಿಸಲು ನೀವೇನು ಮಾಡುತ್ತೀರಿ?

'ಇನ್ನು ಮುಂದೆ' ಎಂದಲ್ಲ; 'ಈಗ ಬರವಣಿಗೆ ಸಾಧ್ಯವಿಲ್ಲ' ಎನ್ನಿಸಿದ್ದುಂಟು ಆಗಾಗ್ಗೆ. ಅಂಥ ಸಮಯದಲ್ಲಿ ಊರ ಹೊರ ವಲಯಕ್ಕೆ ನಡೆದು ಹೋಗಿ ಹಗಲು ಕಳೆಯುತ್ತಿದ್ದೆ. ಸೈಕಲ್ ಕೊಂಡ ಮೇಲೆ, ಗೊತ್ತುಗುರಿ ಇಲ್ಲದೆ ಸವಾರಿ ಮಾಡುತ್ತಿದ್ದೆ. ಸಿಟಿ ಬಸ್ ಏರಿ ನಗರ ಸಂಚಾರಿಯಾಗುವುದೂ ಇತ್ತು. ರೈಲು ಹತ್ತಿ ಹತ್ತಿರದ ಯಾವುದಾದರೂ ಊರಿಗೆ ಹೋಗುತ್ತಿದ್ದೆ. ಮದುವೆಯಾಗಿ ಮಗು ಬಂದಾಗ, ಸೃಜನಶೀಲ ಬರವಣಿಗೆ ಕೈಯಿಂದ ಆಗದೆ, ಮಗಳನ್ನೆತ್ತಿಕೊಂಡು ಆಡಿಸುತ್ತ ವೇಳೆ ಕಳೆಯುತ್ತಿದ್ದೆ. (ದುಡಿಯುವ ಹೆಂಡತಿ. ಹಗಲು ಎದುರು ಮನೆಯಲ್ಲಿರುತ್ತಿತ್ತು ಮಗು ; ರಾತ್ರಿ, ಪ್ರಸೂತಿ ಗೃಹದಲ್ಲಿ ದುಡಿಯಲು ತಾಯಿ ಹೋದೊಡನೆ, ನನಗೆ ಆತುಕೊಳ್ಳುತ್ತಿತ್ತು.) ಇಗ್ಗಾಲಿ ಬಂಡಿ ಸಾಗಬೇಕಲ್ಲ? ಹಗಲು ಬಿಡುವು ದೊರೆತಾಗ ಭಾಷಾಂತರ ಕಾರ್ಯ ಮಾಡುತ್ತಿದ್ದೆ. ಎರಡು ಮೂರು ವರ್ಷ ನೋವು ಅನುಭವಿಸಿದ ಮೇಲೆ ಬೇಗಬೇಗನೆ ಎರಡು ಕಾದಂಬರಿಗಳನ್ನು 'ಹೆತ್ತೆ'. ರಾಜಕೀಯ ವಿಡಂಬನೆ-'ತೊಟ್ಟಿಲು ತೂಗದ ಕೈ' ಮತ್ತು ಸಾಮಾಜಿಕ ವಿಡಂಬನೆ 'ಹೆಣ್ಣಾಗಿ ಕಾಡಿತ್ತು ಮಾಯೆ'. ಮುಂದೆ ನಾಲ್ಕಾರು ಕಾದಂಬರಿಗಳು—ಎರಡನೆಯ ಮಗಳು ಬಂದ ಮೇಲೂ—ನಿರಾತಂಕವಾಗಿ ಸೃಷ್ಟಿಯಾದುವು. ನಡುನಡುವಿನ ತಬ್ಬಲಿತನವನ್ನು ಅಂಕಣಗಳೂ ಪತ್ರಿಕಾವೃತ್ತಿಯೂ ನಿವಾರಿಸಿದುವು. 'ಜ್ಞಾನಗಂಗೋತ್ರಿ' ಕಿರಿಯರ ವಿಶ್ವಕೋಶ ರಚನೆ ನನ್ನ ಸೃಜನಶೀಲ ಚಟುವಟಿಕೆಗೆ ಬೇಕಾಗಿದ್ದ ವಿರಾಮವನ್ನು (ಐದು ವರ್ಷಗಳಷ್ಟು) ಕೊಟ್ಟಿತು. ಆ ಯೋಜನೆ ಮುಗಿದ ಬಳಿಕ ಲವಲವಿಕೆಯಿಂದ ಬಂತು 'ಮೃತ್ಯುಂಜಯ' ಕಾದಂಬರಿ.

ಪ್ರ. ನಿಮ್ಮ ಇತರ ಆಸಕ್ತಿಗಳೇನು ?

ಜ್ಞಾನ ಸಂಚಯ. ಎಲ್ಲ ಶಾಖೆಗಳ ಬಗೆಗೆ ಏಕ ಪ್ರಕಾರ ಒಲವು. ಈ ವಾಚನ ಅಧ್ಯಯನಗಳಲ್ಲದೆ, ಸ್ವಂತದ ಎರಡು ಕೃತಿಗಳ ರಚನೆಯ ನಡುವಣ

ಅವಧಿಯಲ್ಲಿ, ಕನ್ನಡದಲ್ಲೂ ಇಂಗ್ಲಿಷಿನ ಮೂಲಕವೂ ದೊರೆಯುವ ಸಾಹಿತ್ಯ ಕೃತಿಗಳನ್ನು (ಪ್ರಕಾರಗಳ ಭೇದವಿಲ್ಲದೆ) ಓದುತ್ತೇನೆ. ರಾಜಕಾರಣ ಲೋಕ ವ್ಯವಹಾರಗಳ ಬಗ್ಗೆ ಕುತೂಹಲ. ಯಾರಾದರೂ ಅಪ್ಪಿ ತಪ್ಪಿ ನನ್ನ ಮನೆಯತ್ತ ಬಂದರೆ, ಇಷ್ಟವಾದರೆ, ಮನಸ್ವೀ ಹರಟೆ. ಪತ್ರ ವ್ಯವಹಾರದಲ್ಲಿ ಹಿಂದೆ 'ನಿಷ್ಣಾತ' ನಾಗಿದ್ದೆ. ಸೀಮಿತ ಆರೋಗ್ಯದಿಂದಾಗಿ ಪತ್ರ ಸಂವಾದ ಈಗ ಕುಂಠಿತವಾಗಿದೆ.

—೧೯೮೩

ಸಂಕಲನ ಪ್ರಿಂಟರ್ಸ್ ಪ್ರಕಾಶನದ ಸ್ವಾಗತಾರ್ಹ ಯೋಜನೆ. ಪ್ರಶ್ನೆಗಳನ್ನು ನೀಡಿ ಉತ್ತರಗಳನ್ನು ಪಡೆದವರು 'ಸಂಕಲನ–೧೯೮೪'ರ ಶಿಲ್ಪಿ ಹೆಸರಾಂತ ಬರಹಗಾರ ರಾಮಚಂದ್ರ ದೇವ. ೧೯೮೮ರಲ್ಲಿ 'ಸಂಕಲನ' ಪ್ರಕಟವಾಗಲಿಲ್ಲ. ಬೇಸರದ ಸಂಗತಿ.

ತುಳುವಿನಲ್ಲಿ ನಾನು ಬರೆದದ್ದು ಹೊನ್ನಯ್ಯ ಶೆಟ್ಟರ 'ನವಯುಗ' ಸಾಪ್ತಾಹಿಕದ ತುಳು ಪುರವಣಿಯಲ್ಲಿ ಪ್ರಕಟವಾಯಿತೇನೋ ಎಂಬ ಸಂದೇಹ ಮೂಡಿದೆ. ಅಜ್ಞಾತದ ಆ ಬರವಣಿಗೆಗಾಗಿ ಶೋಧೆ ನಡೆಸಿದ್ದೇನೆ. —ನಿ.

ಇಂದಿರಾ ಕೊಲೆಯಾದ ದಿನ, ರಾಜ್ಯೋತ್ಸವಕ್ಕೆ ಸಂಬಂಧಿಸಿ....

'ಪ್ರಜಾವಾಣಿ' ಪ್ರಶ್ನಾವಳಿ

ಪ್ರಶ್ನೆ : ಏಕೀಕೃತ ಕರ್ನಾಟಕದ ಕನಸು ಎಷ್ಟರ ಮಟ್ಟಿಗೆ ನನಸಾಗಿದೆ?

ನಿರಂಜನ : ಏಕೀಕೃತ ಕರ್ನಾಟಕ? ಭಾರತ ಸ್ವತಂತ್ರವಾಗಬೇಕು ಎನ್ನುವಷ್ಟೇ ಹಳೆಯದು ಕನ್ನಡನಾಡು ಒಗ್ಗೂಡಬೇಕೆಂಬ ಕನಸು. 1904 ರಲ್ಲಿ ಲಾರ್ಡ್ ಕರ್ಜನ್ ವಂಗ ಪ್ರಾಂತವನ್ನು ಎರಡು ಹೋಳು ಮಾಡಿದ. (ಆಗ ಬಂಗಾಳ ಎಲ್ಲದರಲ್ಲೂ ಮುಂದು. ಮೊದಲು ಸಾಮಾಜಿಕ ಬಳಿಕ ರಾಜಕೀಯ ಕ್ರಾಂತಿಗಳಿಗೆ ಅದು ದೀವಟಿಗೆ.) ವಂಗಭಂಗವಾಯಿತೆಂದು ಜನ ಗುಡುಗಿದರು. ಸಾಂಸ್ಕೃತಿಕ ರಾಜಕೀಯ ಹೋರಾಟದಲ್ಲಿ ಎಂಥ ಪರಿಣಾಮಕಾರಿ ಪಾತ್ರವನ್ನು ಭಾಷೆ ವಹಿಸಬಹುದೆಂಬುದು ಆಗ ಸಾಬೀತಾಯಿತು. ಕರ್ಜನ್ ತನ್ನ ಆಜ್ಞೆಯನ್ನು ಹಿಂತೆಗೆದುಕೊಂಡ! ಅದು ದೇಶದಲ್ಲಿನ ಸಾಂಸ್ಕೃತಿಕ ಪುನರುದಯಕ್ಕೆ ನಾಂದಿ ಹಾಡಿತು. ಭಾರತೀಯ ಭಾಷೆಗಳನ್ನು ಸ್ವಾತಂತ್ರ್ಯ ಸಂದೇಶ ಸಾರಲು ಸಮರ್ಥವಾಗಿ ಬಳಸಿದರು ಗಾಂಧಿಜಿ. ನೃಪತುಂಗ ಕನ್ನಡ ನಾಡಿನ ಭೌಗೋಳಿಕ ವರ್ಣನೆ ನೀಡಿದ. ಈ ಶತಮಾನದ ಕವಿಗಳು ಕನ್ನಡ ಮಾತೆಯನ್ನೇ ಸೃಷ್ಟಿಸಿದರು.

ದೇಶ ಸ್ವತಂತ್ರವಾದೊಡನೆ ಭಾಷಾವಾರು ಪ್ರಾಂತಗಳ ರಚನೆ ತಡವಿಲ್ಲದೆ ಆಗುತ್ತದೆಂದು ಭಾವಿಸಿದವರಿದ್ದರು. ಆಗಲಿಲ್ಲ. 'ಚಳವಳಿ' ಮುಂದು

ವರಿಯಿತು. ಬಹುಮಟ್ಟಿಗೆ ಏಕೀಕೃತವೆನಿಸಿದ ಕರ್ನಾಟಕ ಅಸ್ತಿತ್ವಕ್ಕೆ ಬಂತು. ಕನಸಿನ ಕರ್ನಾಟಕ ಹೇಗಿರಬೇಕೆಂದು ವೈಜ್ಞಾನಿಕವಾಗಿ ಯೋಚಿಸಿದ್ದವರು ಕೆಲವರೇ. (ಪ್ರೊ| ಸಾಲೆತ್ತೂರ್, ಕೃಷ್ಣಕುಮಾರ ಕಲ್ಲೂರ....) ಬಹ್ವಂಶ ಜನರಿಗೆ ಕರ್ನಾಟಕ ಎಂಬುದು ಭಾವನಾತ್ಮಕ ವಿಷಯ.('ಉದಯವಾಗಲಿ.... ಕನ್ನಡ ನಾಡು'). ಏಕೀಕೃತ ಕರ್ನಾಟಕದ **ಕನಸಿನ** ಮರಣೋತ್ತರ ಪರೀಕ್ಷೆ ಮೊದಲು ಆಗಬೇಕು. ಆಗ ಕನಸಿನ ತೂಕ ಎಷ್ಟೆಂದು ಅಳೆಯುವುದು ಸಾಧ್ಯ.

ಪ್ರಶ್ನೆ : 1956 ರಲ್ಲಿ ವಿವಿಧ ರಾಜ್ಯಗಳಲ್ಲಿದ್ದ ಕನ್ನಡ ಪ್ರದೇಶಗಳು ಸೇರಿದಾಗ ಕರ್ನಾಟಕ ನಿಸರ್ಗ ಸಂಪತ್ತಿನ ದೃಷ್ಟಿಯಿಂದ ಸಂಪದ್ಭರಿತ ರಾಜ್ಯಗಳಲ್ಲಿ ಒಂದಾಯಿತು. ಈ ಸಂಪತ್ತಿನ ಬಳಕೆಯಲ್ಲಿ ನಾವು ಎಷ್ಟು ಯಶಸ್ವಿಯಾಗಿದ್ದೇವೆ?

ನಿರಂಜನ : ಸಂಪತ್ತಿನ ಬಳಕೆ ಅಸಮರ್ಪಕ. ಈ ರಾಜ್ಯಕ್ಕಾಗಿ ಸಂಪತ್ತಿನ ಬಳಕೆಯಂತೂ ಸೊನ್ನೆ. ಕನ್ನಡ ನಾಯಕರು ತಮ್ಮ ರಾಜ್ಯದಲ್ಲಿ ಮಂತ್ರಿ ಮಹೋದಯರಾದರು. ಅವರ (ಅವರಲ್ಲಿ ಹಲವರ) ಸಂಪತ್ತು....

ಪ್ರಶ್ನೆ : ಕರ್ನಾಟಕಕ್ಕೆ ಕೇಂದ್ರದಿಂದ ಆಗಿರುವ ಅನ್ಯಾಯದ ಬಗ್ಗೆ ಕೂಗನ್ನು ಆಗಾಗ ಕೇಳುತ್ತೇವೆ. ನಿಮ್ಮ ಅಭಿಪ್ರಾಯದಲ್ಲಿ ಯಾವ ಯಾವ ಕ್ಷೇತ್ರಗಳಲ್ಲಿ ಅನ್ಯಾಯವಾಗಿದೆ?

ನಿರಂಜನ : ಇದು ಸದಾ ಕೇಳಿಸುವ ಕೂಗು. ನೀರಾವರಿ, ಜಲ ವಿದ್ಯುದುತ್ಪಾದನೆ, ಪರಮಾಣು ವಿದ್ಯುಚ್ಛಕ್ತಿ, ಹಡಗು ನಿರ್ಮಾಣ, ರಾಷ್ಟ್ರೀಯ ವರಮಾನದಲ್ಲಿ ಪಾಲು, ಕೇಂದ್ರದ ವ್ಯವಹಾರಗಳಲ್ಲಿ ನೀತಿ ನಿರೂಪಣೆಯಲ್ಲಿ ಈ ರಾಜ್ಯಕ್ಕೆ (ಕನ್ನಡಿಗರಿಗೆ) ಸ್ಥಾನ, ಪ್ರಸಾರ ಮಾಧ್ಯಮಗಳ ಮೇಲೆ ದಿಲ್ಲಿಯ ಬಿಗಿಮುಷ್ಟಿ, ಕೇಂದ್ರೋದ್ಯಮಗಳಲ್ಲಿ ಹಾಗೂ ಕೇಂದ್ರದ ಹಣ ಹೂಡಿಕೆಯಲ್ಲಿ ಅನ್ಯಾಯ ಇತ್ಯಾದಿ.... ಫೆಡರಲ್ ವ್ಯವಸ್ಥೆ ಇರುವ ಉಪಖಂಡ ವ್ಯಾಪ್ತಿಯ ಭಾರತದಲ್ಲಿ ಕೇಂದ್ರ ಈಗಿರುವಷ್ಟು ಬಲಾಢ್ಯವಾಗಿರುವುದು ಪ್ರಜಾಪ್ರಭುತ್ವಕ್ಕೇ ಕುಠಾರಪ್ರಾಯವಾಗಿದೆ.

ಪ್ರಶ್ನೆ : ಕನ್ನಡದಲ್ಲಿ ಭಾವೈಕ್ಯ ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ?

ನಿರಂಜನ : ಸ್ವಲ್ಪ ಮಟ್ಟಿಗೆ. ವರ್ಷಕ್ಕೊಂದು ರಾಜ್ಯೋತ್ಸವ. 'ಭುವನೇಶ್ವರಿ'ಯ ಮೆರವಣಿಗೆ, ಡಿಸುಂ ಡುಸುಂ ಕನ್ನಡ ಚಿತ್ರಗಳು—ಇಷ್ಟ

ರಿಂದ ಆಗುತ್ತದೆಯೆ ಭಾಷೈಕ್ಯ ಸಾಧನೆ? ವಿಷಯ ಪದಕೋಶಗಳು ಶಿಕ್ಷಣದಲ್ಲಿ ಅಪೇಕ್ಷಿತ ಭಾಷೆಯಲ್ಲಿ, ಏಕರೂಪತೆ ತಂದಾವು. ಭಾಷೈಕ್ಯ ಮಾತ್ರ ಭಾಷೆಯನ್ನೂ ಮೆಟ್ಟಿ ನಿಲ್ಲುವಂಥದು. ನಮ್ಮ ವಿಚಾರಿಗಳಿಗೆ ಭಾರೀ ಆಹ್ವಾನ–ಈ ಭಾಷೈಕ್ಯ. ಜನಸಾಮಾನ್ಯರು ಅದರ ಗೊಡವೆಗೆ ಹೋಗದೆಯೇ ದಿನ ಕಳೆಯುತ್ತಾರೆ.

—೧೯೮೪

1984 ರ ರಾಜ್ಯೋತ್ಸವದ ಸಂದರ್ಭದಲ್ಲಿ 'ಪ್ರಜಾವಾಣಿ' (ಸಂಪಾದಕರು : ಎಂ. ಬಿ. ಸಿಂಗ್) ಪತ್ರಿಕೆಗೆ ನೀಡಿದ ಸಂದರ್ಶನ ಇದು. ಪ್ರಶ್ನೆಗಳೊಡನೆ ಅಕ್ಟೋಬರ್ ೩೧ ರಂದು ಬಂದವರು 'ಪ್ರಜಾವಾಣಿ' ಸಂಪಾದಕ ಮಂಡಲಿಯ ಭಾಸ್ಕರ್. ಅವರು ಬಂದದ್ದು ಪೂರ್ವಾಹ್ನ ಒಂಭತ್ತೂವರೆಗೆ. 'ಪ್ರಶ್ನೆಗಳಿವೆಯಲ್ಲ; ಉತ್ತರ ಬರೆದೇ ಕೊಡುತ್ತೇನೆ' ಎಂದೆ. ಬರೆಯಲು ಹೊರಟೆ. ಹಜಾರದಲ್ಲಿ ಫೋನ್ ಸದ್ದು ಮಾಡಿತು. ಪ್ರಧಾನಿ ಇಂದಿರಾಗಾಂಧಿಗೆ ಗುಂಡೇಟುಗಳು ಬಿದ್ದಿವೆಯಂತೆ–ಎಂದು ಪತ್ರಿಕಾ ಮಿತ್ರರೊಬ್ಬರು ನೀಡಿದ ಸುದ್ದಿ. ಹೆಚ್ಚಿನ ವಿವರಕ್ಕಾಗಿ ಭಾಸ್ಕರ್ ಅಲ್ಲಿಗೆ ಇಲ್ಲಿಗೆ ಫೋನ್ ಮಾಡಿದರು. ಒಳಗೆ ಕೊಠಡಿಯಲ್ಲಿ ನಾನು ಉತ್ತರಗಳನ್ನು ಬರೆಯುತ್ತ ಹೋದೆ.

ಇಂದಿರಾ ನಿಧನದ ವಾರ್ತೆ ಅಪರಾಹ್ನ ಬಂದಾಗ ಅನಿಸಿತು : 'ನಾಳೆ ರಾಜ್ಯೋತ್ಸವ ಇಲ್ಲ. 'ಪ್ರಜಾವಾಣಿ'ಯ ವಿಶೇಷ ಪುರವಣಿ ಇರುವುದಿಲ್ಲ. ನನ್ನ 'ಘನ' ಅಭಿಪ್ರಾಯಗಳು ಪ್ರಕಟವಾಗುವುದಿಲ್ಲ!'

ಆದರೆ, ಮೇಲೆ ನಡೆದ ಪ್ರಶ್ನೋತ್ತರವನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಅನುಮತಿ ಇತ್ತಿರುವ ಸಂಪಾದಕರಿಗೆ ಆಭಾರಿ. —ನಿ.

ಕುಳುಕುಂದ ಶಿವರಾಯ - ನಿರಂಜನ ಸಂವಾದ

ನೀಲಿ ಬುಶ್ ಶರಟು ಬಿಳಿಯ ಪ್ಯಾಂಟು ತೊಟ್ಟ ಇಪ್ಪತ್ತೆಂಟರ ಸ್ಫುರದ್ರೂಪಿ ಯುವಕ ಒಳಗೆ ಬಂದ(ರು). ಮುಗುಳುನಗೆ ಮೋಹಕವಾಗಿತ್ತು.

"ಗುರುತು ಸಿಕ್ಕಿತಾ ?"

"ಸಿಕ್ತು, ಶಿವ. ನನ್ನ ಬದುಕಿಗೆ ಅಂಟಿದ ಪೀಡೆ ನೀನು. ಹೇಗೆ ಮರೆತೇನು ?"

"ಸಿಟ್ಟು ಮೂಗಿನ ತುದಿಯಲ್ಲೇ ಇದೆ–ಇನ್ನೂ !"

"ಇಲ್ಲ ಮಹಾರಾಯ. ಅರುವತ್ತಾಯಿತು. ಇನ್ನಾದರೂ ತಣ್ಣಗಾಗೋದು ಬೇಡವಾ ?"

"ಅದು ಗೋಸ್ಕಾರಿ ಮಾತು. ನೀನು ತಣ್ಣಗಾಗೋದು ಒಮ್ಮೆಯೇ !"

"ಸರಿಯಪ್ಪ, ವೈಯಕ್ತಿಕ ವಿಷಯವಲ್ಲಾದರೂ ಮಿಡುಕು ಸಿಡುಕು ಕಮ್ಮಿಯಾಗಿವೆ. ಒಪ್ತೀಯಾ ?"

"ನಿನ್ನ ಹೆಂಡತಿ ಮಕ್ಕಳನ್ನು ಕೇಳಿ ನೋಡಬೇಕು."

"..................."

"ಮೌನಕ್ಕೆ ಕಾರಣ ?"

"ಬದುಕು ಸಾವು ಎರಡರ ಜತೆಗೂ ರಾಜಿ ಮಾಡಿಕೊಂಡಿರುವ ಮನುಷ್ಯ. ಒಂದಿಷ್ಟು ಮೌನವಿರುವ ಹಕ್ಕೂ ಇಲ್ಲವೆ ನನಗೆ?"

"ಇಲ್ಲ ಎನ್ನಲಾರೆ....ಬೆಳಗ್ಗೆ ಇಳಾ ಪ್ರಿಂಟರ್ಸ್‌ಗೆ ಹೋಗಿದ್ದೆ."

"ವಿಜಯಾ ಸಿಕ್ಕಿದರಾ?"

"ಊಹೂಂ. ಗುರುಮೂರ್ತಿ–ಭಾರತಿ ಇದ್ದರು. ಮೇಜಿನ ಮೇಲೆ ನಿನ್ನ 'ಮುಖತಃ' ಪುಸ್ತಕದ ಮುದ್ರಿತ ಪುಟಗಳನ್ನು ನೋಡಿದೆ."

"ಓದಿದೆಯಾ?"

"ಹ್ಞ. ಅವರೇನೂ ಬೇಡ ಅನ್ಲಿಲ್ಲ."

"ಒಳ್ಳೆಯವರು, ಉದಾರಿ ದಂಪತಿ...."

"ನಿರಂಜನರಿಗೆ ಚಲನೆ ಕಷ್ಟ. ಲಕ್ವಾ, ನೋಡಿ. ಇಲ್ದಿದ್ರೆ ಪ್ರೂಫ್ ಓದೋದಕ್ಕೆ ಅವರೇ ಬರ್ತಿದ್ರು ಅಂದ್ರು. ನನ್ನ ಎಡಗೈ ಎಡಗಾಲು ನೀವಿಕೊಂಡೆ!"

"ಹುಚ್ಚಪ್ಪ."

"ಹಸ್ತ ಪ್ರತಿ ಪೂರ್ತಿ ಕೊಟ್ಟಿದಾನಾ?–ಅಂತ ಕೇಳಿದೆ."

"ಇಲ್ಲ; ಕೊನೇ ಲೇಖನ ಬರಬೇಕು ಅಂದ್ರು. ಕತೆ, ಕಾದಂಬರಿ, ಲೇಖನ, ವಿಮರ್ಶೆ, ಅನುವಾದ........ಪ್ರೆಸ್ಸಿನ ಒಂದು ಮೂಲೆಯಲ್ಲಿ ಕೂತ್ಕೊಂಡು ನೀನು ಮಾಡದೇ ಇದ್ದ ಕೆಲಸ ಯಾವುದು?"

"ನಾನೊ? ನೀನೊ?"

"ಹಲವು ವರ್ಷ ನಾನು. ಕೆಲವು ವರ್ಷ ನೀನು."

"ನಿನ್ನ ಯೌವನದ ಕರಾಮತ್ತುಗಳು ನೆನಪಾದಗಲೆಲ್ಲ ಸ್ವಲ್ಪ ಕರುಬ್ತೀನೆ. ಹೋಗಲಿ ಆ ವಿಷಯ. ಒಟ್ಟಿನಲ್ಲಿ 'ಮುಖತಃ'ದ ಬಗ್ಗೆ ಏನು ಅನಿಸ್ತು?"

"ಈಗ, ನೀನು ಪ್ರಶಂಸೆಗೆ ಮಾರು ಹೋಗುವುದಿಲ್ಲ, ಟೀಕೆಯಿಂದ ನೋಯೋದಿಲ್ಲ- ಅಂತ ಕೇಳಿದ್ದೇನೆ."

"ಹೊರ ಪದರದಲ್ಲಿ ಹೌದು. ಒಳಗಿನದು ಹೇಳಲಾರೆ. ನಿನ್ನಲ್ಲಿ ಯಾಕೆ ಮುಚ್ಚುಮರೆ?"

"ಈ ಸಂಕಲನದಿಂದ ನಿನ್ನ ಅಹಮಿಗೆ ಖುಶಿಯಾಗ್ತದೆ–ಅಲ್ಲ?"

“೧೯೪೦ರ ವರ್ಷಗಳಲ್ಲಿ ನಿನ್ನನ್ನು ಕು. ಶಿ. ರಾಯ ಅಂತಲೂ ಕರೀತಿದ್ರು.”

“ಮರೆತಿಲ್ಲ. ‘ಕಿಶೋರ’ ‘ಕು. ಶಿ. ರಾಯ’ ‘ಶಿ. ರಾ. ಕುಳುಕುಂದ’ ‘ಕುಳುಕುಂದ ಶಿವರಾಯ’....ಆ ಮೇಲೆ ರೂಪಾಂತರ, ನಾಮಾಂತರ!”

“...............”

“೧೯೩೭ ರಿಂದ ೧೯೮೪ರ ವರೆಗೆ ನಿನ್ನ ವಿಚಾರದೋಣಿ ಹೇಗೆ ಹೊಯ್ದಾಡಿತು, ಎಷ್ಟು ದೂರವನ್ನು ಕ್ರಮಿಸಿತು ಅಂತ ತಿಳಿಯೋದಕ್ಕೆ ‘ಮುಖತಃ’ ಸಹಾಯಕವಾಗ್ತದೆ.”

“೧೯೪೩ರಲ್ಲಿ ನೀನು ಸಂದರ್ಶಕನಾಗಿದ್ದೆ.... ಮಂಗಳೂರಿನಲ್ಲಿ.”

“ಸೆರೆಮನೆಯಿಂದ ಹೊರ ಬಂದಿದ್ದ ಎಂ. ಧರ್ಮಸಾಮ್ರಾಜ್ಯ ಅಧಿಕಾರಿ ಬರಹೇಳಿದರೆಂದು ಹೋದೆ. ಕೃಷ್ಣ ಭವನ ಹೋಟೆಲಿಗೆ. ಆಗ ನನಗೆ ಹತ್ತೊಂಭತ್ತು. ಕಮ್ಯೂನಿಸ್ಟ್ ಮುದ್ರೆ ಒತ್ತಿಸಿಕೊಂಡಿದ್ದೆ. ಮೊದಲು, ಯುದ್ಧದಲ್ಲಿ ಫಾಸಿಸಂ ಸೋಲಬೇಕು; ಸ್ವಾತಂತ್ರ್ಯ ಸಂಗ್ರಾಮ ಆ ವೇಳೆಯಲ್ಲಿ ಉಗ್ರವಾಗಬಾರದು–ಎನ್ನುವ ವಿಚಾರ ಧಾರೆ. ‘ಹಿಂಸಾಚರಣೆ ಸರಿಯೆ?’ ಅಂತ ಅವರನ್ನು ಕೇಳಿದೆ. ‘ಸರಿಯಲ್ಲ’ ಅಂದರು. ಸಂಭಾಷಣೆ ಸ್ವರೂಪದ ಸಂದರ್ಶನ ‘ನವ ಭಾರತದಲ್ಲಿ’ದಲ್ಲಿ ಪ್ರಕಟವಾಯ್ತು.”

“ಖಿಲಾಡಿ ಬುದ್ಧಿ ಅನ್ನೋದು ಇದಕ್ಕೇ! ಸಂದರ್ಶನ ನೀಡುವವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿ ನಿನಗೆ ಬೇಕಾದ ಉತ್ತರ ಪಡೆಯೋದು!”

“ಒಪ್ಪಿದೆ. ೧೯೪೬ರ ಆರಂಭದಲ್ಲಿ ಬೆಂಗಳೂರಿನಲ್ಲಿ ಡಾ|| ಶಿವರಾಮ್ ಮನೆಯಲ್ಲಿ ಕೈಲಾಸಂರನ್ನು ಭೇಟಿಯಾದಾಗಲೂ ಅದೇ ಬುದ್ಧಿ ಇತ್ತು. ಫಾಸಿಸಂ, ಪ್ರಗತಿಶೀಲ ಸಾಹಿತ್ಯ ಸಂಬಂಧವಾಗಿ ಅವರಿಂದ ‘ಪ್ರಗತಿಪರ’ ಉತ್ತರ ಪಡೆದೆ. ಸಂದರ್ಶನ ಲೇಖನ ‘ಉಷಾ’ದಲ್ಲಿ ಅಚ್ಚಾಯ್ತು.....ಆದರೆ ಒಂದು: ಖಿಲಾಡಿಯಾಗಿದ್ದರೂ ಸಂದರ್ಶನಕ್ಕೆ ಒಳಗಾದವರ ವಿಚಾರದಲ್ಲಿ ನನಗೆ ಗೌರವವಿತ್ತು.”

“ನೀನು ನಾನಾದ ಬಳಿಕ ‘ಜನಪ್ರಗತಿ’ಯ ‘ಸಾಧನ ಸಂಚಯ’ದಲ್ಲಿ ಕೆಲವು ಸಲ ಮಾತುಕತೆಗಳನ್ನು ಆಧರಿಸಿ ಓಲೆ ಬರೀತಿದ್ದೆ. -ಮುಂದೆ ಧಾರವಾಡದಲ್ಲಿದ್ದಾಗ, ವಿಶಿಷ್ಟ ರೀತಿಯ ಸಂದರ್ಶನ ಪಡೆದೆ, ಕವಿ ವಿನಾಯಕರಿಂದ.

ಅವರಿಗೆ ಯಾವುದೋ ಪ್ರಶಸ್ತಿ ಲಭಿಸಿದ ಸಂದರ್ಭ. ವಿನಾಯಕರ ಸಂದರ್ಶನ ಲೇಖನಕ್ಕಾಗಿ 'ಪ್ರಜಾವಾಣಿ'ಯಿಂದ ತಂತಿ ಕರೆ ಬಂತು. ವಿನಾಯಕರು ಈ ಊರು ಬಿಟ್ಟು ಹೈದರಾಬಾದಿಗೆ ಹೋಗಿದ್ದಾರೆ; ಕಾಲ್ಪನಿಕ ಭೇಟಿ ಒಪ್ಪಿಗೆಯೇ? ಎಂದು ಕೇಳಿದೆ. "ಸರಿ" ಎಂದಿತು ತಾರು. (ಹಿಂದೊಮ್ಮೆ ಡಿ. ವಿ. ಜಿ. ಭೇಟಿ ನಿರಾಕರಿಸಿದಾಗ ರಾಮಚಂದ್ರ ಶರ್ಮ ಕಾಲ್ಪನಿಕ ಸಂದರ್ಶನ ನಡೆಸಿದ್ದು ನೆನಪಿತ್ತು.) 'ನಿರಂತರ ಯಾತ್ರಿಕ' ಚೆನ್ನಾಗಿ ಬಂತು."

"ಬೆಂಗಳೂರಿಗೆ ನೀನು ವಾಪಸಾದ ಮೇಲೆ?"

"'ಪ್ರಜಾವಾಣಿ'ಯಲ್ಲಿ ಶುರುಮಾಡಿದ 'ಬೇವು ಬೆಲ್ಲ' ಅಂಕಣಕ್ಕಾಗಿ ಆಗೊಮ್ಮೆ ಈಗೊಮ್ಮೆ ಅವರಿವರನ್ನು ಕಂಡದ್ದುಂಟು. 'ಸುಧಾ'ಕ್ಕೋಸ್ಕರ ಪುಟ್ಟಸ್ವಾಮಯ್ಯನವರನ್ನು ('ಕಲ್ಯಾಣ ಕ್ರಾಂತಿ'ಯ ತಾತ) ಭೇಟಿಯಾದೆ."

"ಇನ್ಫಾ (ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್)ದಲ್ಲಿದ್ದಾಗಲೂ ಸಂದರ್ಶನದ ಹೂರಣವಿದ್ದ ಲೇಖನಗಳನ್ನು ಒಂದಷ್ಟು ನೀನು ಬರೆದೆ. 'ಜ್ಞಾನ ಗಂಗೋತ್ರಿ' ಕಿರಿಯರ ವಿಶ್ವಕೋಶ ಕೆಲಸಕ್ಕೆ ಕೈ ಇಕ್ಕಿದ ಅನಂತರ ನಿನ್ನ ಸಂದರ್ಶಕ ಪಾತ್ರ ಸಮಾಪ್ತವಾಯ್ತು ಎನ್ನೋಣವಾ?"

"ನಿಜ."

"ಆಗಿನಿಂದ ನೀನೇ ಸಂದರ್ಶನಕ್ಕೆ ಒಳಗಾಗುವ ವ್ಯಕ್ತಿಯಾದೆ!"

"ಏಳು ಸಂಪುಟಗಳ ಜ್ಞಾನಗಂಗೋತ್ರಿ ಕಾರ್ಯ ಆರಂಭವಾದಾಗ 'ಸಂಯುಕ್ತ ಕರ್ನಾಟಕ'ದ ಮಿತ್ರ ಸುರೇಂದ್ರ ದಾನಿ ಉಪ ಸಂಪಾದಕ ಶ್ಯಾಮ ಸುಂದರ್ ಜತೆ ಬಂದರು. ಶ್ಯಾಮಸುಂದರರ ಸ್ಪಷ್ಟ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ. ೧೯೭೧ರ ಯುಗಾದಿಯ ಮುನ್ನಾ ದಿನ ಎಡಗಾಲು ಎಡಗೈ ಮೇಲೆ ಹತೋಟಿ ಕಳೆದುಕೊಂಡೆ ನೋಡು. ಆ ಸ್ಥಿತಿಯಲ್ಲೂ ನಾನು ದುಡಿಮೆ ಮುಂದುವರಿಸಿ ಇತರರ ಕೌತುಕಕ್ಕೂ ಕುತೂಹಲಕ್ಕೂ (ಕೆಲವರ ಮತ್ಸರಕ್ಕೂ) ಕಾರಣನಾದೆ ಅಂತ ತೋರ್ತದೆ. 'ಸಾಹಿತ್ಯ ಮತ್ತು ಕಲೆ' ಸಂಪುಟ–ಐದನೇದು–ಮುಕ್ತಾಯ ಹಂತದಲ್ಲಿದ್ದಾಗ ಕಾರ್ಕಳದ ಭುವನೇಂದ್ರ ಕಾಲೇಜಿನ ಆಚಾರ್ಯ ಎಂ. ರಾಮಚಂದ್ರರು ಬಂದರು. ಊರಿಗೆ ಮರಳಿ ತಾವು ಕಂಡುದನ್ನು ಶಬ್ದಗಳಲ್ಲಿ ಚಿತ್ರಿಸಿದರು. ಸ್ವತಃ ಸೃಜನಶೀಲ ಬರೆಹಗಾರ

ಮೂಡಿಸಿದ ನುಡಿ ಚಿತ್ರ. 'ಉದಯವಾಣಿ'ಯಲ್ಲಿ ಅಚ್ಚಾಯಿತು. ಯೋಜನೆ ಮುಕ್ತಾಯವಾದಾಗ ಗೆಳೆಯ ಎಚ್ಚೆಸ್ಕೆಯವರ ವಾರದ ವ್ಯಕ್ತಿ 'ಸುಧಾ' ಅಂಕಣಕ್ಕೆ ಗ್ರಾಸವಾದೆ."

"'ಮುಖತಃ'ದಲ್ಲಿರುವುದು ಮುಂದಿನ ಕಾಲಾವಧಿಯ ಸಂದರ್ಶನಗಳು ಅನ್ನು."

"ಹೆಚ್ಚು ಕಡಮೆ."

"ಬಲ್ಲೆ. 'ಹೆರಾಲ್ಡ್'ಗೋಸ್ಕರ ಪತ್ರಕರ್ತೆ ದಕ್ಷಾ ಶಾಥಿ ಸಂದರ್ಶನ ನಡೆಸಿ 'ದಿ ಲಿಟರರಿ ಕ್ವಾರ್ಟೆಟ್' ಅಂತ ನಿರಂಜನ ಹೆಸರು ಹೊತ್ತ ತಂದೆ ತಾಯಿ ಮಕ್ಕಳ ಮೇಲೆ ಬರೆದರು.... ಅಂತೂ ಸುದ್ದಿಯಲ್ಲಿದ್ದೀವಿ, ಅಣ್ಣ."

"ಬರೆಹಗಾರನ ಬದುಕು ಒಂದು ರೀತಿಯಲ್ಲಿ ಖಾಸಗಿ; ಇನ್ನೊಂದು ರೀತಿಯಲ್ಲಿ ಸಾರ್ವಜನಿಕ."

"ಅದಕ್ಕೇ ೧೯೭೭ರಲ್ಲಿ ಪ್ರಗತಿಪಂಥ ಕಟ್ಟೋದಕ್ಕೆ ಹೊರಟೆ ಅಲ್ಲವಾ?"

"ಏನಪ್ಪ ಮಾಡಲಿ? ಇಂದಿರಮ್ಮನ 'ಯಮ'ರ್ಜೆನ್ಸಿಲಿ ಹೇಳವಸಾದ ನನ್ನಿಂದ ಸಾಧ್ಯವಿದ್ದದ್ದು ಅಷ್ಟೆ. ತಲೆಗಳ ತಾಕಲಾಟಕ್ಕೆ ಒಂದು ವೇದಿಕೆ ಇರಲಿ ಅನಿಸ್ತು. ಸಾಹಿತಿಗಳ ಹೆಸರಲ್ಲಿ ಇಂದಿರಾ ಜಯಕಾರದ ಯತ್ನವನ್ನು ಮುರಿದೆ."

"ಕಡೆಗೆ ಆದದ್ದು—ನೀವು ಕಂಡಿರಾ? ನೀವು ಕಂಡಿರಾ?"

"ಹತ್ತೊಂಭತ್ತು–ಇಪ್ಪತ್ತರ ವಯಸ್ಸಿನ ಕತೆಗಾರನಾಗಿ ನೀನೂ ಕಟ್ಟಿದೆಯಲ್ಲ ಪ್ರಗತಿಶೀಲ ಲೇಖಕರ ಸಂಘ? ಏನಾಯಿತು ಕಡೆಗೆ?"

"ಯಾರದ್ದೋ ಪಿ. ಎಚ್. ಡಿ. ಥೀಸಿಸ್‌ನಲ್ಲಿ ದಾಖಲೆಯಾಗ್ತೇವೆ ಇಬ್ಬರೂ."

"ಉದ್ಧಾರವಾಯ್ತು! ಸಂಘಟನೆಯ ಸದ್ದು ಗದ್ದಲಕ್ಕಿಂತ ದೂರವಾಗಿ, ಒಂಟಿಯಾಗಿ, 'ಸೃಷ್ಟಿ' ಕಾರ್ಯದಲ್ಲಿ ನಿರತನಾಗೋದು ಮೇಲು ಅನ್ನೋ ತೀರ್ಮಾನಕ್ಕೆ ಬಂದಿದ್ದೇನೆ."

"ಗವಿಪಾಸದಲ್ಲೇ ನೀನು 'ಮೃತ್ಯುಂಜಯ' ಬರೆದದ್ದು. ಒಳ್ಳೇ ಪುಸ್ತಕ, ನಿನ್ನನ್ನು ಅಭಿನಂದಿಸ್ಬೇಕು. ಅದೇ ರೀತಿ ಮುಂದುವರಿದಿದ್ದರೆ 'ಪ್ರಾಗ್ಭಾರತ ಗಾಥಾ'...."

"ಹೆಸರು ಬದಲಾಯಿಸಿದ್ದೇನೆ–'ಹೆಜ್ಜೆ' ಅಂತ."

"ಕಿವಿಗೆ ಇಂಪಾಗಿದೆ. ಇಷ್ಟು ಹೊತ್ತಿಗೆ 'ಹೆಜ್ಜೆ' ಬರೆದು ಮುಗಿಸಬಹುದಾಗಿತ್ತು. ಆದರೆ, 'ವಿಶ್ವ ಕಥಾಕೋಶ'ದಲ್ಲಿ ನೀನು ಬಂದಿಯಾದೆ."

"ಕೋಶದಲ್ಲಿ ದೋಷವಿಲ್ಲ—ನನಗಾದ ಕಾಲ ನಷ್ಟವನ್ನು ಮರೆತರೆ."

"ಒಂದಷ್ಟು ಪ್ರಚಾರ ಸಿಕ್ತು. 'ಹೆರಾಲ್ಡ್'ನಲ್ಲಿ ಹಬೀಬ್ ಬರೆದ ಲೇಖನ ಓದಿದ್ದೇನೆ....ಆಮೇಲೆ ನಿನ್ನನ್ನು ಇಡಿಯಾಗಿ ತೂಗಿದ ಭಾರೀ ಸಂದರ್ಶನ—'ಸುಧಾ'ದಲ್ಲಿ."

"ಸೋಮತ್ತನಹಳ್ಳಿ, ದಿವಾಕರ್ ಬರೆದದ್ದು. ಆದರೆ ಇಬ್ಬರಿಗೂ ಸರಿ ಹೋಗುವ ಧ್ವನಿತರಂಗ ಇಲ್ಲದೆ ಪೇಚಾಟವಾಯ್ತು. ನಾಲ್ಕು ದಿನ ಪೂರ್ವಾಹ್ನ ರುಬ್ಬಿದೆವು. ಅರೆಬರೆ ಟಿಪ್ಪಣಿ. ಒಂದು ತಿಂಗಳಾದ ಮೇಲೆ ಬರೆದರು. ನೆನಪು ಕೈ ಕೊಟ್ಟದ್ದು ಸ್ವಾಭಾವಿಕ."

"ಧ್ವನಿ ಮುದ್ರಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು."

"ನಿಜ. ಆದರೆ ಸ್ವಯಂ ಸೃಜನಶೀಲ ಲೇಖಕರಾದ ದಿವಾಕರ್‌ಗೆ ಅಪಾರ ಆತ್ಮವಿಶ್ವಾಸ. ಅಲ್ಲಿ ಇಲ್ಲಿ ತಪ್ಪುಗಳಿದ್ದರೂ ಓದಿಸಿಕೊಂಡು ಹೋಗುವ ನಿರಂಜನ ಕಥಾ ಬರೆದೇ ಬಿಟ್ಟರು. ಮುಂದೆ, 'ನಿಮ್ಮ ಬಯೊಡೇಟಕ್ಕಾಗಿ ದಿವಾಕರರ ಲೇಖನ ಬಳಸ್ತೇವೆ'–ಅಂತ ಇಬ್ಬರು ಮೂವರು ಸಾಹಿತ್ಯಾಸಕ್ತರು ತಿಳಿಸಿದಾಗ, ನನಗೆ ನಾನೇ ಹಿಡಿಶಾಪ ಹಾಕಿದೆ."

"ನಿರಂಜನ ಕಥಾ ಈ ಸಂಕಲನದಲ್ಲಿಲ್ಲ."

"ಇದು ಸಮಗ್ರ ಸಂದರ್ಶನ ಸಂಪುಟವಲ್ಲ. ಅಲ್ಲದೆ, ಅಂಥ ಸೊಗಸಾದ ಬರೆವಣಿಗೆ ದಿವಾಕರರ ಸ್ವಂತ ಸಂಕಲನದಲ್ಲೇ ಬರಬೇಕು."

"ಬಂದೀತು.... ಒಂದು ಪ್ರಶ್ನೆ. 'ಸಂದರ್ಶನ' ಪ್ರಕಾರ ಪಶ್ಚಿಮದ ಕೊಡುಗೆ; ಇಲ್ಲಿ ಕೃಷಿ ನಡೆದದ್ದು ಪತ್ರಕರ್ತರಿಂದ ಅನ್ನಬಹುದೆ?"

"ಬಹುಮಟ್ಟಿಗೆ ಸರಿ. ಆದರೆ, ಕಲೆ–ಸಾಹಿತ್ಯ ಕ್ಷೇತ್ರಗಳಲ್ಲಿ ವೃತ್ತಿನಿರತರನ್ನು ಅವರ ಬಾಂಧವರೇ ಸಂದರ್ಶಿಸುವುದುಂಟು. ಸಂದರ್ಶಕ ಪಾತ್ರದಲ್ಲಿ ವಿಮರ್ಶಕರನ್ನು, ಸೃಜನಶೀಲರನ್ನು ಕಾಣ್ತೇವೆ."

"ರಾಜಕೀಯ ಮುಖಂಡರಿಗೆ ಸಂಬಂಧಿಸಿ ಮಾತ್ರ ಪತ್ರಕರ್ತರದೇ ಮೇಲುಗೈ."

"ಅದು ಮೋಜಿನ ಆಟ. ಇದರಲ್ಲಿ ಮೂರು ವಿಧ: ಖಚಿತ ಪ್ರಶ್ನೆಗಳ ಪಟ್ಟಿಕೊಟ್ಟು ಉತ್ತರ ಪಡೆಯೋದು; ಗಂಭೀರ ಮಾತುಕತೆ ನಡೆಸೋದು; No holds barred ರೀತಿಯದು—ಈಟಿ ಮೊನೆಗಳಿಂದ ಕಿವಿಗಳನ್ನು ಚುಚ್ಚಿ ಬೋಧೆ ತಪ್ಪಿಸಿ ಆಳಕ್ಕೆ ಸೈಹಾಕಿ ಬಗೆ ಬಗೆಯ ಉತ್ತರಗಳನ್ನು ಲೂಟಿ ಹೊಡೆಯೋದು— ಮೂರನೆಯದು. ಇದು ಅನ್ಯೋನ್ಯ ಒಪ್ಪಿಗೆಯಿಂದ ಆಗುವಂಥದು."

"ಸಂದರ್ಶನದ ಕೇಳಿಗೆ ಒಂದು ನೀತಿ ಸಂಹಿತೆ ರೂಪಿಸಬಹುದೂಂತ ತೋರ್ತದೆ."

"–ಬಹುದು. ಸಂದರ್ಶನಕ್ಕೆ ಒಳಗಾದವ ಸುಳ್ಳು ಹೇಳಬಾರದು. ಸಂದರ್ಶಕ ಪೂರ್ವಾಗ್ರಹದಿಂದ ಕಲುಷಿತನಾಗಿರಬಾರದು. ಪರಸ್ಪರ ಆದರ ಇರಬೇಕು. ಟೇಪ್ ರೆಕಾರ್ಡರನ್ನು ತಪ್ಪದೆ ಬಳಸಬೇಕು."

"ಆಕಾಶವಾಣಿ ಸಂದರ್ಶನದಲ್ಲಿ ತೊಂದರೆಯೇ ಇಲ್ಲ! ನೇರವಾಗಿ ರೆಕಾರ್ಡ್ ಆಗ್ತದೆ."

"ಇಬ್ಬರೂ ಒಳ್ಳೆಯ ಮಾತುಗಾರರಾಗಿರಬೇಕಾದ್ದು ಇಲ್ಲಿ ಮುಖ್ಯ."

"ನೀನು ಅಂಥ ಮಾತುಗಾರನೊ?"

"ಅಲ್ಲವಪ್ಪ—ಮಾತುಗಾರಿಕೆ ನನ್ನ ವೃತ್ತಿಯಲ್ಲ."

"ಹಾಗಾದರೆ ದ್ವಂದ್ವಗಾಯನಕ್ಕೆ ನೀನು ನಾಲಾಯಕ್ಕು."

"ಸದ್ಯಕ್ಕೆ ಸರಿಯಾದ ಅಭಿಪ್ರಾಯ. ನಾನು ಚಿಕ್ಕವನಿದ್ದಾಗ ಒಬ್ಬರು ಮೇಸ್ಟ್ರು ಹಾರ್ಮೋನಿಯಂ ಬಾರಿಸ್ತಾ ಚೆನ್ನಾಗಿ ಹಾಡ್ತಿದ್ರು. ಸುತ್ತಲೂ ಹುಡುಗಿಯರು. ನೆನಪು ಮಾಡ್ಕೊ. ಒಮ್ಮೆ ನೀನು ಹುಡುಗಿಯರ ಪಕ್ಕದಲ್ಲಿ ನಿಂತು, 'ಮಾಸ್ಟ್ರೆ, ನನಗೂ ಹೇಳಿ ಕೊಡ್ತೀರಾ?' ಅಂತ ಕೇಳಿದೆ. 'ಇದು ನಿನಗಲ್ಲ' ಅಂತ ಓಡಿಸಿ ಬಿಟ್ರು!"

"ಹೌದು. ಆದರೆ ಹೈಸ್ಕೂಲಿನಲ್ಲಿದ್ದಾಗ? ಮಲಯಾಳಿ ಕನ್ನಡಿಗ ವಿದ್ಯಾರ್ಥಿಗಳ ಜಂಟಿ ಸಭೆಯಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ವಿಷಯ ಆಳುತ್ತಿದ್ದ ವಿದೇಶೀಯರ ಭಾಷೆಯಲ್ಲಿ, ದೀರ್ಘವಾಗಿ ಕೊರೆದೆ."

"ಅಧ್ಯಕ್ಷರಾಗಿದ್ದ ಇತಿಹಾಸದ ಅಧ್ಯಾಪಕರು ಅಂದ್ರು: For the last one hour Mr. Shivrao kept us spell-bound......"

"ಹಸ್ಸು! ನಿನ್ನ ಸ್ಮರಣ ಶಕ್ತಿಗೆ ಮೆಚ್ಚಿದೆ....ಭಾಷಣ ಮಾತ್ರ ಈ ವರ್ಷಗಳಲ್ಲಿ ನಿನಗೆ ಕಷ್ಟವಾಗ್ತಿದೆಯಂತೆ, ಉಮ್ಮಳ ಕಾಡ್ತದಂತೆ."

"ಇದು ಪಾರ್ಶ್ವ ಪೀಡಿತನಾದ ಅನಂತರದ ಸ್ಥಿತಿ. ಒಳಗಿನ ರಕ್ಷಣ ವ್ಯವಸ್ಥೆ ನಿಸ್ಸಂದೇಹವಾಗಿ ಕುಸೀತಿವೆ. ಧೂರ್ತರು ಎದುರಿಗಿದ್ದರೆ ಏನೂ ಆಗುವುದಿಲ್ಲ. ಪ್ರಾಮಾಣಿಕರು, ಸತ್ಯ ನಿಷ್ಠರು ಸಭೆಯಲ್ಲಿ ಹೆಚ್ಚಾಗಿದ್ದರೆ, ಅವರ ನಿರೀಕ್ಷೆಯನ್ನೂ ಕನಸುಗಳನ್ನೂ ಕಂಡಾಗ ಕುಸೀತೇನೆ. ಆಡಿದ ಮಾತಿನಿಂದ ಬೇರೆ ಯಾವುದರದೋ ದರ್ಶನವಾಗಿ ಬಿಕ್ಕುತ್ತೇನೆ. ಹೇಗೂ ನಡೆಯಲು ಆಗುವುದಿಲ್ಲ. ಸಭೆ ಸಮಾರಂಭಗಳಿಗೆ ಹೋಗುವುದನ್ನು ಈಗ ನಿಲ್ಲಿಸಿದ್ದೇನೆ....ಗವಿಯ ಏಕಾಂತ ತೃಪ್ತಿ ನೀಡ್ತಿದೆ...."

"ಮಾತು–"

"ಮೌನವಾಗ್ಬೇಕು."

"....ನನ್ನ ಬಾಯಿ ಕಟ್ಟಿದೆ."

"ನನ್ನ ಸ್ಥಿತಿಗೇ ಬಂದು ತಲಪಿದೆಯಲ್ಲ ಶಿವ?"

*   *   *   *

"ಕೊನೆಯದಾಗಿ...."

"ಸಂದರ್ಶಕರು ಸಾಧಾರಣವಾಗಿ ಹೇಳುವಂತೆ...."

" 'ಮುಖತಃ' ಪುಸ್ತಕದಲ್ಲಿರುವ ಸಂದರ್ಶನಗಳ ಒಡೆತನ ಯಾರದು?"

"೧೯೫೭ರಲ್ಲಿ ಭಾರತ ಲೋಕ ಸಭೆ ಸ್ವೀಕರಿಸಿದ ಕಾಪಿರೈಟ್ ಶಾಸನ ದಲ್ಲಾಗಲೀ ೧೯೮೪ರಲ್ಲಿ ಅದಕ್ಕೆ ಸೇರಿದ ಕಲಮುಗಳಲ್ಲಾಗಲೀ ಈ ಅಂಶ ಸ್ಪಷ್ಟವಿಲ್ಲ.... ದೊಡ್ಡ ಮಗಳ ಸಾಹಿತ್ಯಾಸಕ್ತಿ ಗಾಢವಾಯ್ತೂಂತ ೧೯೭೫–೭೭ರ ಅವಧಿಯಲ್ಲಿ ದುಬಾರಿ ಚಂದಾ ತೆತ್ತು ಲಂಡನಿನಿಂದ 'ಟೈಮ್ಸ್ ಲಿಟರರಿ ಸಪ್ಲಿಮೆಂಟ್' ತರಿಸೋದಕ್ಕೆ ಏರ್ಪಾಟು ಮಾಡಿದೆ. ಕುತೂಹಲದಿಂದ ಪುಟಗಳನ್ನು ನಾನೂ ತಿರುವುತ್ತಿದ್ದೆ. ಅದರ ಒಂದು ಅಂಕಣ: ಸಂಪಾದಕರ ಪ್ರಶ್ನೆಗೆ ವಿವಿಧ ಲೇಖಕರಿಂದ ಉತ್ತರ. ಒಮ್ಮೆ ನಬೊಕೊವ್ ಉತ್ತರ ಕೊಟ್ಟಿದ್ದ. ಕೆಲವೇ ಸಾಲುಗಳು. ಕೆಳಗೆ © Nabokov ಎಂದಿತ್ತು. ಉತ್ತರದ ಸ್ವಾಮ್ಯ ಅದನ್ನು ನೀಡಿದವನದು! ಅಂದ ಮೇಲೆ ಪ್ರಶ್ನೆಯ

ಸ್ವಾಮ್ಯ ಅದನ್ನು ಕೇಳಿದವನದೇ ಎಂಬುದು ಸ್ಪಷ್ಟ....ಯೋಚಿಸಿ, ಯೋಚಿಸಿ ನಾನೊಂದು ಮಾರ್ಗ ಹಿಡಿದಿದ್ದೇನೆ. ಸಂಕಲನ ರೂಪದಲ್ಲಿ ಈ ಪುಸ್ತಕದ ಒಡೆತನ ನನ್ನ ಎಲ್ಲ ಬರೆವಣಿಗೆಯ ಹಕ್ಕುದಾರಳಾದ ಸೀಮಂತಿನಿಯದು. ಬಿಡಿ ಬಿಡಿಯಾಗಿ, ಆಯಾ ಸಂದರ್ಶಕ ಅಥವಾ ಸಂದರ್ಶಕಿ ತನ್ನ ಸಂದರ್ಶನ ಲೇಖನವನ್ನು ಇಷ್ಟ ಬಂದಂತೆ ಬಳಸಬಹುದು."

"ಇದು ಅನುಕರಣೀಯ ಮೇಲ್ಪಂಕ್ತಿ........ವಿಶ್ವ ಕಥಾ ಕೋಶದ ಇಪ್ಪತ್ತೈದು ಸಂಪುಟಗಳಿಗೆ ನೀನು ಬರೆದ ಪ್ರಸ್ತಾವನೆಗಳಿಗೆ ಸಂಬಂಧಿಸಿ—"

"Sorry. ಕೊನೆಯ ಪ್ರಶ್ನೆಯನ್ನು ಆಗಲೇ ನೀನು ಕೇಳಿ ಆಯಿತು. ಪ್ರಸ್ತಾವನೆಗಳ ಪ್ರಸ್ತಾಪ ಈಗ ಬೇಡ."

"ಓಕೆ, ಅ—ಲಕ್ ನಿರಂಜನ್ !"

—ಅವನು ಎದ್ದ.

"ಕುಳಿತಲ್ಲಿಂದಲೇ ಬೀಳ್ಕೊಡ್ತೇನೆ, ಶಿವ. ಮತ್ತೆ ಯಾವತ್ತಾದರೂ ಬಾ."

"ಬಾ ಪೀಡೆಯೇ—ಅನ್ನು !"

—ನಾನು ನಕ್ಕೆ. ಅಸೂಯೆ. ಅಳು ಬರಲಿಲ್ಲ.

ನಿರಂಜನ

ಯುಗಾದಿ ೧೯೮೫

○

"ಸಭೆ ಸಮಾರಂಭಗಳಿಗೆ ಹೋಗುವುದನ್ನು
ಈಗ ನಿಲ್ಲಿಸಿದ್ದೇನೆ....ಗವಿಯ ಏಕಾಂತ
ತೃಪ್ತಿ ನೀಡ್ತಿದೆ...."
"ಮಾತು—"
"ಮೌನವಾಗ್ಬೇಕು."
"....ನನ್ನ ಬಾಯಿ ಕಟ್ಟಿದೆ"
"ನನ್ನ ಸ್ಥಿತಿಗೇ ಬಂದು ತಲಪಿದೆಯಲ್ಲ ಶಿವ ?"

* * * *

ನಿರಂಜನರೊಂದಿಗೆ ನಡೆದ ಹನ್ನೆರಡು
ಸಂದರ್ಶನಗಳ ಸಂಕಲನ 'ಮುಖತಃ'-
ಹನ್ನೆರಡು....ಮತ್ತು ಒಂದು....

ನೀವು ಓದಬೇಕು, ದಯವಿಟ್ಟು.

ರೂ. ೧೦

ಸ್ಪಂದನ ಪ್ರಕಾಶನ
೫೧೫, ೭ನೇ ಮುಖ್ಯ ಬೀದಿ
೫ನೇ ಬ್ಲಾಕ್, ಜಯನಗರ
ಬೆಂಗಳೂರು-೫೬೦ ೦೪೧